ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

"ವಾಗೀಶ್ವರಿಶಾಸ್ತ್ರೀಯವರ ಸಂಪ್ರದಾಯದ ಹಾಡುಗಳು"

ಸಂಶೋಧನ ವಿದ್ಯಾರ್ಥಿನಿ
ಸೌಮ್ಯ.ಎಸ್.

ಮಾರ್ಗದರ್ಶಕರು
ಪ್ರೊ. ಡಿ.ಲಿಂಗಯ್ಯ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
೨೦೦೮

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

"ವಾಗೀಶ್ವರಿಶಾಸ್ತ್ರೀಯವರ ಸಂಪ್ರದಾಯದ ಹಾಡುಗಳು"

ಸಂಶೋಧನ ವಿದ್ಯಾರ್ಥಿನಿ
ಸೌಮ್ಯ.ಎನ್.

ಮಾರ್ಗದರ್ಶಕರು
ಪ್ರೊ. ಡಿ.ಲಿಂಗಯ್ಯ

ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು

೨೦೦೯

ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮-೨೦೦೯ನೇ ಸಾಲಿನ ಎಂ.ಫಿಲ್‌ಪದವಿಗಾಗಿ **"ವಾಗೀಶ್ವರಿಶಾಸ್ತ್ರೀಯವರ ಸಂಪ್ರದಾಯದ ಹಾಡುಗಳು"**ಎಂಬ ನಿಬಂಧವನ್ನು ಪ್ರೊ.ಡಿ. ಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ/
ಸೌಮ್ಯ ಎನ್
(ಸೌಮ್ಯ .ಎನ್.)
ಸಂಶೋಧನ ವಿದ್ಯಾರ್ಥಿನಿ

ದಿನಾಂಕ : 30.09.2009
ಸ್ಥಳ : ಬೆಂಗಳೂರು

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ. ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮- ೨೦೦೯ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ವಾಗೀಶ್ವರಿಶಾಸ್ತ್ರೀಯವರ ಸಂಪ್ರದಾಯದ ಹಾಡುಗಳು "** ಎಂಬ ನಿಬಂಧವನ್ನು ಸೌಮ್ಯ.ಎನ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ

(ಪ್ರೊ.ಡಿ. ಲಿಂಗಯ್ಯ)
ಮಾರ್ಗದರ್ಶಕರು

ದಿನಾಂಕ : 30.09.2009
ಸ್ಥಳ : ಬೆಂಗಳೂರು

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಹು ವಿಶಿಷ್ಟವೂ ವಿಶಾಲವೂ ಆದದ್ದು. ಜೀವನ ಮತ್ತು ಕಾವ್ಯಗಳೆರಡು ಒಂದೇ ನಾಣ್ಯದ ಎರಡು ಮುಖಗಳು. ಅನುಭವ – ಅಭಿವ್ಯಕ್ತಿಗಳು ಎಲ್ಲ ಲಲಿತ ಕಲೆಗಳ ಹುಟ್ಟಿಗೆ ಕಾರಣ. ಪ್ರಾಚೀನ ಕಾಲದಿಂದಲೂ ಸಾಹಿತ್ಯ ರಚನೆಯಲ್ಲಿ ಪುರುಷನಿಗೆ ಅಗ್ರಸ್ಥಾನ. ಸಾಹಿತ್ಯ–ಸಂಸ್ಕೃತಿಯನ್ನು ಬೆಳೆಸುವ ಮತ್ತು ಉಳಿಸುವ ಪ್ರಕ್ರಿಯೆಗೆ ಕಾರಣನಾದವನು ಪುರುಷನೇ ಎಂಬ ನಂಬಿಕೆ ಇದೆ. ಹೀಗೆಂದ ಮಾತ್ರಕ್ಕೆ ಸ್ತ್ರೀಯ ಪಾತ್ರ ಇವುಗಳಲ್ಲಿಲ್ಲವೇ ಎಂಬ ಪ್ರಶ್ನೆ ಮೂಡುವುದು ಸಹಜ. ನನ್ನ ಪ್ರಕಾರ ಸಾಹಿತ್ಯ ಸಂಸ್ಕೃತಿಗಳು ಎರಡನ್ನು ಬೆಳೆಸುವಲ್ಲಿ ಮತ್ತು ಉಳಿಸುವಲ್ಲಿ ಸ್ತ್ರೀ–ಪುರುಷರಿಬ್ಬರ ಪಾತ್ರವೂ ಇದೆ. ಬೇಕಾದರೆ ಇದರಲ್ಲಿ ಪುರುಷನ ಪಾತ್ರ ಹೆಚ್ಚಾಗಿದೆ ಎಂದು ಹೇಳಬಹುದು. ಬಹುಶಃ ಅಂದು ಪುರುಷನು ಎಲ್ಲಾ ಕ್ಷೇತ್ರಗಳಲ್ಲೂ ತನಗೆ ಕಲ್ಪಿಸಿಕೊಂಡಿದ್ದ ಸ್ಥಾನಮಾನಗಳು ಉನ್ನತವಾಗಿದ್ದು. ಅವರ ರಚನೆಗಳೆಲ್ಲವೂ ಮುಕ್ತಮಾರ್ಗವನ್ನು ಅನುಸರಿಸಿದ್ದವು. ಹಾಗಾಗಿ ಅವು ಲೋಕಾಭಿಮುಖವಾಗಿದ್ದವು. ಆದರೆ ಸ್ತ್ರೀಯು ಸಹ ಮನೆಯೊಳಗೆ ಸಾಹಿತ್ಯರಚನೆಯಲ್ಲಿ ತೊಡಗಿಕೊಳ್ಳುತ್ತಿದ್ದಳು. ಆದರೆ ಅದು ಬರವಣಿಗೆಯಿಂದ ಹೊರತಾಗಿದ್ದು ಸ್ಮರಣ ಶಕ್ತಿಯನ್ನೇ ಅನುಸರಿಸುತ್ತಲಿದ್ದಳು. ಅವಳ ರಚನೆಯ ವಸ್ತು ಮನೆಯೊಳಗಿನ ಸಂಪ್ರದಾಯ. ಆಚರಣೆ. ಸಂಸಾರ ನಿರ್ವಹಣೆ. ಮಕ್ಕಳ ಪೋಷಣೆಗೆ ಸಂಬಂಧಿಸಿರುವಂತಹದ್ದು. ಆದರೆ ಅದು ನಾಲ್ಕು ಗೋಡೆಗಳ ಮಧ್ಯದಲ್ಲಿ ಮಾತ್ರ ಉಳಿಯುತ್ತಿದ್ದವು. ಹಿಂದೆ ಸ್ತ್ರೀಗೆ ಶಿಕ್ಷಣ ನಿಷಿದ್ಧವಾಗಿದ್ದುದೂ ಒಂದು ಕಾರಣವಾಗಿತ್ತು. ಲೋಕಾಭಿಮುಖವಾದ ಸಂಗತಿಗಳು ಯಾವಾಗಲೂ ಬಹು ಬೇಗ ಪ್ರಚಾರಗೊಳ್ಳುತ್ತವೆ. ಮನ್ನಣೆಯನ್ನು ಪಡೆಯುತ್ತವೆ. ಪ್ರಚಾರಕ್ಕೆ ಒಳಗಾಗದ ಅಂಶಗಳು ಎಲೆಮರೆ ಕಾಯಿಯಂತೆ ಹಿಂದೆ ಸರಿಯುತ್ತವೆ.

ಪುರುಷನಿಗೆ ಅಕ್ಷರಜ್ಞಾನವಿದ್ದು. ಭಾವನೆಗಳ ಅಭಿವ್ಯಕ್ತಿಯಲ್ಲಿ ಸ್ತ್ರೀಗಿಂತಲೂ ಪುರುಷರು ಹೆಚ್ಚು ಸ್ವಾತಂತ್ರ್ಯವನ್ನು ಹೊಂದಿರುವವನಾದ್ದರಿಂದ ಅವನ ರಚನೆಗಳು ಬೆಳಕಿನಲ್ಲಿ ಉಳಿದವು. ಸ್ತ್ರೀಗೆ ಸಂಸಾರದ ಪಾಲನೆ–ಪೋಷಣೆಯ ಜವಾಬ್ದಾರಿ ಅವಳ ಅಕ್ಷರಜ್ಞಾನದ ಹಿನ್ನೆಡೆಗೆ ಇರುವ ಕಾರಣಗಳಲ್ಲಿ ಒಂದಾಗಿದೆ. ಆದರೂ ಸಹ ತಾನು ಕಲಿತ–ಕಟ್ಟಿದ ಹಾಡುಗಳನ್ನು ಮೌಖಿಕ ಪರಂಪರೆಯ ಮೂಲಕ ಪರಂಪರೆಯಿಂದ ಪರಂಪರೆಗೆ ಸಾಗಿಸುತ್ತಾ ಬಂದಿದ್ದಾಳೆ. ಪ್ರಪಂಚದ ಎಲ್ಲಾ ಮಹಾನ್ ಸಾಹಿತಿಗಳಿಗೂ, ಸಾಹಿತ್ಯಕ್ಕೂ, ಮೂಲ ಜನಪದವೇ ಆಗಿದೆ. ಅಂದು ಕಟ್ಟಿ–ಹಾಡುತಲಿದ್ದ ಹಾಡುಗಳು ಜನಪದ ಸಾಹಿತ್ಯದ ಮುಖ್ಯ ಮೂಲ ಭಾಗವಾಗಿದೆ.

ಪ್ರಾರಂಭ ಕಾಲದಿಂದ ಹಿಡಿದು ಇತ್ತೀಚಿನ ದಿನಗಳವರೆಗೂ ಸ್ತ್ರೀ-ಪುರುಷರ ಕಾವ್ಯ ರಚನೆಯಲ್ಲಿನ ವಸ್ತು ಬೇರೆಯಾಗಿದೆ. ಇದಕ್ಕೆ ಅವರವರ ಹೊರಗಿನ ಹಾಗೂ ಒಳಗಿನ ಕಾರಣಗಳು ಸಾಕಷ್ಟಿರಬಹುದು. ಆದರೆ ಸಾಹಿತ್ಯ – ಸಂಸ್ಕೃತಿ ಕ್ಷೇತ್ರಕ್ಕೆ ಅವರದೇ ಆದ ಕೊಡುಗೆ ಇದೆ ಎಂಬುದನ್ನು ಮರೆಯದಿರುವುದು ಮುಖ್ಯ. ಇದನ್ನು ತಿಳಿಸುವುದು ನನ್ನ ಅಧ್ಯಯನದ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಸಂಪ್ರದಾಯದ ಹಾಡುಗಳ ಅಧ್ಯಯನದಿಂದ ಬ್ರಾಹ್ಮಣ ಜನಾಂಗದ ಸಂಸ್ಕೃತಿಯನ್ನು ಅವರ ಸಾಮಾಜಿಕ, ಧಾರ್ಮಿಕ, ಭಾಷಿಕ ಹಾಗೂ ಪಾರಂಪರಿಕ ಚಟುವಟಿಕೆಗಳನ್ನು ತಿಳಿದುಕೊಳ್ಳಬಹುದು. ಸಂಪ್ರದಾಯದ ಹಾಡುಗಳ ಮಹತ್ವವನ್ನು ತಿಳಿಯುವುದು ಅಧ್ಯಯನದ ಮುಖ್ಯ ಉದ್ದೇಶ.

"ಪ್ರಾಚೀನ ಕಾಲದಿಂದಲೂ ಜಾನಪದರೇ ಬಹುಸಂಖ್ಯಾತರಾಗಿರುವ ಹಾಗೂ ವಿಖ್ಯಾತ ಜಾನಪದ ತಜ್ಞರಿಂದ 'ವಿಶ್ವ ಜಾನಪದದ ಜೀವಂತ ಕಣಜ' ಎನಿಸಿಕೊಂಡಿರುವ ಭಾರತದಂಥ ಜಾನಪದೀಯ ರಾಷ್ಟ್ರದಲ್ಲಿ ಜನಪದ ಗೀತೆಗಳು ಮತ್ತು ಮಹತ್ವದ ಪಾತ್ರವಹಿಸುತ್ತವೆ. ಇವು ಜಾನಪದದ ಸಜೀವ ಸಂಸ್ಕೃತಿದರ್ಶಿಗಳಾಗಿರುವುದರ ಜೊತೆಗೆ ಉತ್ತಮ ಕಾವ್ಯಗಳಾಗಿ ರಾಷ್ಟ್ರದ ಅಮೂಲ್ಯ ಸಂಪತ್ತಾಗಿ ಶೋಭಿಸುವುದೂ ಉಂಟು".[1] ಹೃದಯ ಸಂಪುಟ ಗ್ರಂಥ ಈ ನಿಟ್ಟಿನಲ್ಲಿ ಎಷ್ಟು ಮೌಲ್ಯಯುತವಾದದ್ದು ಹಾಗೂ ಅವುಗಳಲ್ಲಿರುವ ಕೊರತೆಗಳನ್ನು ಅಧ್ಯಯನದಿಂದ ತಿಳಿಯಬಹುದಾಗಿದೆ. ಇವುಗಳಲ್ಲಿರುವ ಮೌಲ್ಯ. ಆಚರಣೆಗಳನ್ನು ಓದುಗರಿಗೆ ಪರಿಚಯಿಸುವ ಒಂದು ಸಣ್ಣ ಪ್ರಯತ್ನ.

ತಮ್ಮ ಪೂರ್ವಿಕರಿಂದ ಪಡೆದ ಸಾಹಿತ್ಯ ಸಂಪತ್ತನ್ನು ಮುಂದಿನ ಪೀಳಿಗೆಗಾಗಿ ಸಂಗ್ರಹಿಸಿ ಸಂರಕ್ಷಿಸುವಲ್ಲಿ ವಾಗೀಶ್ವರಿಶಾಸ್ತ್ರಿಯವರ ಕೊಡುಗೆಯನ್ನು. ಕಾಳಜಿಯನ್ನು ಕಂಡುಕೊಳ್ಳುವುದು. ಸಹಜವಾಗಿಯೇ ಜಾನಪದ ಸಾಹಿತ್ಯದಲ್ಲಿನ ಹಾಡುಗಳನ್ನೇ ಗ್ರಾಮೀಣ. ಬುಡಕಟ್ಟುಜನಾಂಗಕ್ಕೆ ಮಾತ್ರ ಸೀಮಿತಗೊಳಿಸಿದ ಅವುಗಳ ಸಂಗ್ರಹ ಸಂರಕ್ಷಣೆಯಲ್ಲಿ ಮಾತ್ರ ತೊಡಗಿದ ಸಂದರ್ಭದಲ್ಲಿ ಬ್ರಾಹ್ಮಣ ಜನಾಂಗದಲ್ಲಿನ ಜಾನಪದವನ್ನು ಬೆಳಕಿಗೆ ತಂದವರಲ್ಲಿ ವಾಗೀಶ್ವರಿ ಶಾಸ್ತ್ರೀಯವರು ಒಬ್ಬರಾಗಿದ್ದಾರೆ. ಬ್ರಾಹ್ಮಣ ಜಾನಪದ ಅಧ್ಯಯನಕ್ಕೆ ಅಸ್ಥಿಭಾರವನ್ನು ಹೇಗೆ ರೂಪಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡುವುದು ಉದ್ದೇಶವಾಗಿದೆ.

ಸ್ವರೂಪ:-

ಯಾವ ಜನಾಂಗದ ಸಾಹಿತ್ಯ ಬರವಣಿಗೆಯ ರೂಪದಲ್ಲಿರದೆ, ಪ್ರಸಾರವಾಗದೆ, ಮೌಖಿಕ ಪರಂಪರೆಯ ಮೂಲಕವೇ ಬೆಳೆಯುತ್ತಲಿರುತ್ತದೋ ಅಂಥ ಸಮುದಾಯದ. ಜನಾಂಗದ ಕವಿತೆಗಳು ಜನಪದ ಗೀತೆಗಳು ಎನಿಸಿಕೊಳ್ಳುತ್ತದೆ. ಅವು ಆಯಾ ಜನಾಂಗದ ವಿಭಿನ್ನ ಮುಖಗಳನ್ನು

ಪರಿಚಯಿಸುತ್ತವೆ. ಹೀಗಾಗಿ ಸಂಪ್ರದಾಯದ ಹಾಡುಗಳನ್ನು ಸಾಹಿತ್ಯ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದಲೂ ಅಧ್ಯಯನ ಮಾಡುತ್ತಾ, ಅವುಗಳ ವಸ್ತು, ಭಾಷಾ ನಿರೂಪಣೆಯಲ್ಲಿನ ಚಮತ್ಕಾರ, ಭಾಷೆ, ರಚನಾತಂತ್ರ ಮೊದಲಾದವುಗಳನ್ನು ಕುರಿತು ಅಧ್ಯಯನ ಮಾಡಲಾಗುತ್ತದೆ. ಸಂಪ್ರದಾಯದ ಹಾಡುಗಳನ್ನು ಸಂಗ್ರಹಿಸುವಲ್ಲಿ, ಉಳಿಸುವಲ್ಲಿ ಮಹಿಳೆಯ ಪಾತ್ರವನ್ನು ಅವುಗಳ ಸಂರಕ್ಷಣೆಯನ್ನು ಮಾಡಲು ತೋರುವ ಕಾಳಜಿಯನ್ನು ಹಾಗೂ ಮೊದಲನೇ ಅಧ್ಯಾಯದಲ್ಲಿ ವಾಗೀಶ್ವರಿ ಶಾಸ್ತ್ರೀಯವರ ಹುಟ್ಟು, ಹಾಡುಗಳ ಕಲಿಕೆ, ಅವುಗಳ ಸಂರಕ್ಷಣೆಯಲ್ಲಿ ಅವರ ಪಾತ್ರವನ್ನು ಹೇಳಲಾಗುತ್ತದೆ. ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆಶ್ರಯದಲ್ಲಿ ಬೆಳೆದು ಅವರಿಂದಲೇ ಸಂಪ್ರದಾಯದ ಹಾಡುಗಳ ಕಲಿಕೆಯನ್ನು ಪ್ರಾರಂಭಿಸಿದರು. ಇವರು ಬರವಣಿಗೆ ಪ್ರಾರಂಭಿಸುವ ಹೊತ್ತಿಗೆ ಅರವತ್ತು ವರ್ಷ ವಯಸ್ಸಾಗಿತ್ತು. ವಾಗೀಶ್ವರಿ ಶಾಸ್ತ್ರೀಯವರು ಸೃಜನಶೀಲ ಪ್ರತಿಭೆಯನ್ನು ಹೊಂದಿದವರಾಗಿದ್ದು, ತಮ್ಮ ಜೀವನಾನುಭವಗಳ ಮೂಟೆಯಿಂದ ಹಲವು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಚಿತೆಯಿಂದ ಚಿಂತೆಗೆ,' 'ಸಿರಿಸಿಂಗಾರದ ಸಿಂಗಾಪುರ'. 'ಸುಲಭ ಸಾಂಪ್ರದಾಯಿಕ ವಿವಾಹ,' 'ಅಪೂರ್ವಕಥಾ ಸಂಗಮ',ಕೃತಿಗಳನ್ನು ರಚಿಸಿದ್ದಾರೆ. ಅವರ ಬದುಕು, ಬರಹ, ಸೃಜನಶೀಲತೆ, ಪರೋಪಕಾರ ಮನೋಭಾವ ಎಲ್ಲವು ಮೊದಲನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗುತ್ತದೆ.

ಎರಡನೇಯ ಅಧ್ಯಾಯದಲ್ಲಿ ಸಂಪ್ರದಾಯದ ಹಾಡುಗಳನ್ನು ಕುರಿತು ಅಧ್ಯಯನ ನಡೆಸಲಾಗುತ್ತದೆ. ಜಗತ್ತಿನ ಪ್ರತಿಯೊಂದು ದೇಶವು ತನ್ನದೇ ಆದ ಮಹಾಕಾವ್ಯಗಳನ್ನು ರಚಿಸಿ ಗ್ರಂಥಸ್ಥ ರೂಪಕ್ಕೆ ಅಂದರೆ ಬರವಣಿಗೆಯ ರೂಪದಲ್ಲಿವೆ. ಹೀಗೆ ಬರವಣಿಗೆಯ ರೂಪಕ್ಕೆ ತಂದವರು ಪಂಡಿತರು ಅಂದರೆ ಅಕ್ಷರಸ್ಥರೇ ಹೊರತು ಅನಕ್ಷರಸ್ಥರಲ್ಲ. ಹಾಗೆಂದ ಮಾತ್ರಕ್ಕೆ ಬರವಣಿಗೆ ರೂಪುಗೊಳ್ಳುವುದಕ್ಕೆ ಮುಂಚೆ ಸಾಹಿತ್ಯ ಎಂಬುದು ಇರಲಿಲ್ಲವೇ? ಕೇವಲ ಲಿಖಿತ ರೂಪದಲ್ಲಿ ಇದ್ದದ್ದನ್ನು ಮಾತ್ರ ಸಾಹಿತ್ಯ ಎನ್ನಲಾಗುತ್ತಿತ್ತೇ? ಎಂಬ ಪ್ರಶ್ನೆಗಳು ಮೂಡುವುದು ಸಹಜ. ಈ ಪ್ರಶ್ನೆಗಳಿಗೆ ಉತ್ತರವಾಗಿ ಜಾನಪದವೆಂಬುದು ಇದೆ. ಇದು ಸಾಹಿತ್ಯದ ಒಂದು ರೂಪವಾಗಿದ್ದು ಮೌಖಿಕ ಸಾಹಿತ್ಯ ಎಂದೇ ಕರೆಯಲಾಗುತ್ತದೆ. ಈ ಮೌಖಿಕ ಸಾಹಿತ್ಯದ ಒಂದು ಭಾಗವೇ ಸಂಪ್ರದಾಯದ ಹಾಡುಗಳು.

ಒಂದು ನಿರ್ದಿಷ್ಟ ಜನಾಂಗದ ಸಾಮಾಜಿಕ ಸಂಬಂಧಗಳು, ಆಚರಣೆಗಳು, ವಿಧಿವಿಧಾನಗಳು, ಸಾಂಸ್ಕೃತಿಕ ಅಂಶಗಳನ್ನು ಸಂಪ್ರದಾಯದ ಹಾಡುಗಳು ತನ್ಮೂಲಕ ಬಿಂಬಿಸುತ್ತವೆ. ಆಯಾಯ ಸಂದರ್ಭಕ್ಕೆ, ಆಚರಣೆಗೆ ಅನುಗುಣವಾಗಿ ಈ ಹಾಡುಗಳನ್ನು ಕಟ್ಟುತ್ತಾರೆ. ಬೆಳಿಗ್ಗೆ ಎದ್ದಾಗಿನಿಂದ ಹಿಡಿದು ರಾತ್ರಿ ಮಲಗುವರೆಗಿನ ನಡುವೆ ನಡೆಯುವ ಕೆಲಸ ಕಾರ್ಯಗಳು ಈ

ಸಾಹಿತ್ಯದ ವಸ್ತು. ಸಂಪ್ರದಾಯದ ಹಾಡುಗಳನ್ನು ಹೆಚ್ಚಾಗಿ ಕಟ್ಟುತ್ತಿದ್ದವರು ಯಾರು? ಮಹಿಳೆಯರೋ? ಇಲ್ಲ ಪುರುಷರೋ ಎಂಬ ವಿಚಾರವನ್ನು ಕುರಿತು ಈ ಅಧ್ಯಾಯದಲ್ಲಿ ಅಭ್ಯಾಸಿಸಲಾಗುತ್ತದೆ. ಹಾಗೂ ಬ್ರಾಹ್ಮಣ ಜನಾಂಗದಲ್ಲಿ ಆಚರಿಸುವ ವಿವಿಧ ಆಚರಣೆಗಳು-ಸಂಪ್ರದಾಯಗಳನ್ನು ಪರಿಚಯಿಸುವುದರೊಂದಿಗೆ ಇತರ ಜನಾಂಗಗಳ ಆಚರಣೆಗಳಿಗೆ ಎಷ್ಟು ಸಾಮ್ಯತೆಯನ್ನು. ವ್ಯತ್ಯಾಸವನ್ನು ಹೊಂದಿವೆ. ಸಾಮಾಜಿಕವಾಗಿ. ಮಾನಸಿಕವಾಗಿ ಈ ಹಾಡುಗಳು ಹೇಗೆ ಪ್ರಮುಖವಾದುದ್ದಾಗಿದೆ. ಸಂಪ್ರದಾಯ ಹಾಡುಗಳಲ್ಲಿನ ಮೌಲ್ಯಾಂಶಗಳು ಸಾಂಪ್ರದಾಯಿಕ ಹಾಡುಗಳೆಂದು ಯಾವ ಗೀತೆಗಳನ್ನು ಕರೆಯುತ್ತಿದ್ದರು ಎಂದು ವಿವರಿಸಲಾಗಿದೆ.

ಮುಂದೆ ಸಂಪ್ರದಾಯದ ಹಾಡುಗಳ ಹಾಡುವಿಕೆಯೇ ಒಂದು ಸಂಪ್ರದಾಯವಾಗಿ ಬೆಳೆದು ಬಂದು ಕಾಲಾನಂತರದಲ್ಲಿ ಅದರ ಇರುವಿಕೆಯೇ ಮರೆಯಾಗುವ ಮಟ್ಟಿಗೆ ತಲುಪಿದ ವಿಚಾರ. ಇದನ್ನು ಜಾನಪದ ಸಾಹಿತ್ಯಕ್ಕೆ ಒಳಗು ಪಡಿಸಿಕೊಳ್ಳುವಲ್ಲಿ ಮೊದಲಿಗಿದ್ದ ದ್ವಂದ್ವ. ಆನಂತರದಲ್ಲಿ ಜನಪದ ಸಾಹಿತ್ಯದ ಒಂದು ಭಾಗವಾಗಿ ಶಿಷ್ಟ ಜನಪದವೆಂಬ ಹೆಸರಿನಿಂದ ಕರೆದದ್ದು. ಸಮಕಾಲೀನ ಸಂದರ್ಭದಲ್ಲಿ ಸಂಪ್ರದಾಯದ ಹಾಡುಗಳ ಪಾತ್ರ. ಹಾಡುಗಳ ರಚನೆಯ ವಸ್ತು ವೈಶಿಷ್ಟ್ಯಗಳನ್ನು ಕುರಿತು ಈ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗುತ್ತದೆ. ಈ ಅಧ್ಯಾಯವನ್ನು ಸಂಪ್ರದಾಯದ ಹಾಡುಗಳೆಂಬ ಶೀರ್ಷಿಕೆಯಡಿಯಲ್ಲಿ ಅಭ್ಯಸಿಸಿ ಇದಕ್ಕೆ ಪೂರಕವಾದ ಉಪ ವಿಭಾಗಗಳಾಗಿ ಅ) ಹಸೆಗೆ ಕರೆ ತರುವ ಹಾಡು. ಆ) ಆರತಿಯ ಹಾಡುಗಳು. ಇ) ಹೆಣ್ಣುಮಕ್ಕಳು ಮೈ ನೆರೆದಾಗ ಹಾಡುವ ಹಾಡುಗಳು. ಈ) ಹೆಣ್ಣು ಮಕ್ಕಳು ಬಸುರಿಯಾದಾಗ ಹಾಡುವಂತಹ ಬಯಕೆಯ ಹಾಡುಗಳು. ಉ) ಚೌಲೋಪನಯನದ ಹಾಡುಗಳು ಊ) ಮದುವೆಯ ಹಾಡುಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಮೂರನೇ ಅಧ್ಯಾಯದಲ್ಲಿ ಕಥನಗೀತೆಗಳು ಎಂಬ ಶೀರ್ಷಿಕೆಯಲ್ಲಿ ಕಥನಗೀತೆಗಳಲ್ಲಿ ಬರುವ ಹಂತಗಳನ್ನು ವಿವರಿಸುತ್ತಾ ನನ್ನ ಅಧ್ಯಯನದಲ್ಲಿ ಮೂರು ವಿಭಾಗಗಳ ಕಥನಗೀತೆಯನ್ನು ಪೌರಾಣಿಕ. ಸಾಮಾನ್ಯ. ಐತಿಹಾಸಿಕ. ಕಾಲ್ಪನಿಕ ಗೀತೆಗಳಾಗಿ ವಿಭಾಗಿಸಿ. ಗ್ರಂಥದಲ್ಲಿರುವ ಬಬ್ರುವಾಹನ ಕಾಳಗ, ದ್ರೌಪದಿಯ ವಸ್ತ್ರಾಪಹರ, ಲವಕುಶಕಾಳಗ, ರುದ್ರಾಕ್ಷಿಮಹಿಮೆ, ಕಮಲೆಯ ಹಾಡು, ಬಂಡಿಹಾಡುಗಳು. ಚೋರಕಥೆ ಹಾಡುಗಳನ್ನು ಸಾಂಸ್ಕೃತಿಕ. ಸಾಮಾಜಿಕ ದೃಷ್ಟಿಯಿಂದ ಅಧ್ಯಯನ ಮಾಡಲಾಗುತ್ತದೆ. ಹಿಂದಿನಿಂದಲೂ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ವಸ್ತು ಆಧಾರಿತ ಬೃಹತ್ ಕಾವ್ಯಗಳನ್ನು ಶಿಷ್ಟವಾಗಿ, ಶಿಸ್ತುಬದ್ಧವಾಗಿ ಕಲಿಯುವಲ್ಲಿ ಮತ್ತು ಕಲಿಸುವಲ್ಲಿ ಮಹಿಳೆ ಹಿಂದೆ ಬಿದ್ದಿರಲಿಲ್ಲ ಎಂಬುದಕ್ಕೆ ಈ ಗ್ರಂಥ ಹೇಗೆ ಸಾಕ್ಷಿಯಾಗಿದೆ. ಅಂದಿನ ಕಾಲದ ಮೌಲ್ಯಸಿದ್ಧಾಂತಗಳನ್ನು

ಸ್ತ್ರೀಯರು ಅರಿಯುವಲ್ಲಿ ಕಥನ ಗೀತೆಗಳು ಎಷ್ಟು ಸಹಾಯಕಾರಿಯಾಗಿದ್ದವು ಮುಂತಾದ ವಿಷಯಗಳು ಈ ಅಧ್ಯಾಯದಲ್ಲಿ ಅಭ್ಯಾಸಕ್ಕೆ ಒಳಪಡುತ್ತದೆ.

ನಾಲ್ಕನೇ ಅಧ್ಯಾಯದಲ್ಲಿ ಮಕ್ಕಳ ಸಾಹಿತ್ಯವನ್ನು ಕಾಣಬಹುದು. ಮಹಿಳೆಯರದೇ ರಚನೆ ಎಂದು ಹೇಳಲಾದ ಈ ಹಾಡುಗಳು ಮಕ್ಕಳ ಬೌದ್ಧಿಕವಾಗಿ. ಮಾನಸಿಕವಾಗಿ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಹೇಗೆ ಸಹಕಾರಿಯಾಗಿದೆ ಎಂಬುದನ್ನು ಅಧ್ಯಯನ ಮಾಡಲಾಗುತ್ತದೆ.

ಐದನೇ ಅಧ್ಯಾಯದಲ್ಲಿ ಸಂಪ್ರದಾಯದ ಹಾಡುಗಳ ರಚನಕಾರರನ್ನು ಕುರಿತು ಪರಿಚಯಿಸಲಾಗುತ್ತದೆ. ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಾಡುಗಳನ್ನು ರಚಿಸಿದವರು ಇಂತಹವರೇ ಎಂದು ಹೇಳಲಾಗುವುದಿಲ್ಲ. ಆದರೆ ಕೆಲವರು ತಮ್ಮ ಹಾಡುಗಳಲ್ಲಿ ಬಳಸಿರುವ ಅಂಕಿತಗಳ ಹಿನ್ನೆಲೆಯಲ್ಲಿ ಅವರನ್ನು ಗುರುತಿಸಲಾಗಿದೆ.

ವ್ಯಾಪ್ತಿ :-

ವಾಗೀಶ್ವರಿ ಶಾಸ್ತ್ರೀಯವರ 'ಹೃದಯಸಂಪುಟ' ಗ್ರಂಥವನ್ನು ಪ್ರಧಾನವಾಗಿ ನನ್ನ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಆ ಗ್ರಂಥದಲ್ಲಿರುವ ಬ್ರಾಹ್ಮಣ ಸಂಪ್ರದಾಯದ ಆಚರಣೆಯನ್ನು ಸ್ಥೂಲವಾಗಿ ವಿಶ್ಲೇಷಣೆಗೊಳಪಡಿಸುತ್ತಿದ್ದೇನೆ. ಅದರಲ್ಲಿ ಬರುವ ಸಾಮಾಜಿಕ. ಸಾಂಸ್ಕೃತಿಕ. ಸಾಂಪ್ರದಾಯಿಕ ಅಂಶಗಳು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿರುತ್ತದೆ.

ಅಡಿ ಟಿಪ್ಪಣಿ

೧. ಡಾ.ನಂ.ತಪಸ್ವೀಕುಮಾರ್ : ಕನ್ನಡ ಜನಪದಗೀತೆಗಳ ಸಾಂಸ್ಕೃತಿಕ ಅಧ್ಯಯನ. ಪುಟ-೧. ೧೯೮೨

ಅಧ್ಯಾಯ – ೨

ವಾಗೀಶ್ವರಿ ಶಾಸ್ತ್ರಿಯವರ ಜೀವನ ಪರಿಚಯ

ಮನುಷ್ಯನಿಂದಲೇ ಪ್ರಪಂಚದ ಎಲ್ಲಾ ಕಲೆಗಳು ರೂಪತಳೆದಿವೆ. ಎಲ್ಲಾ ಕಲೆಗಳಿಗೆ ಮೂಲ ಲಲಿತಕಲೆ. ಇದು ಅನುಭವ ಮತ್ತು ಅಭಿವ್ಯಕ್ತಿಯಿಂದ ಸಾಕಾರಗೊಳ್ಳುತ್ತದೆ. ಅಮೂರ್ತತೆಯಿಂದ ಮೂರ್ತರೂಪವನ್ನು ಪಡೆದ ಕಲೆಯು ವಿವಿಧ ಅವಸ್ಥಾಂತರಗಳಿಗೆ ಕಾಲಾನುಕ್ರಮದಲ್ಲಿ ಒಳಗಾಗುತ್ತದೆ. ಹೊಸ ರೂಪ ಪಡೆಯುತ್ತದೆ. ಮನುಷ್ಯನ ಚಿಂತನಾ ಕ್ರಮದಲ್ಲಿನ ನಾವೀನ್ಯತೆ. ನಿರಂತರ ಅವಿಷ್ಕಾರದ ತುಡಿತ, ಕಲೆಯಲ್ಲಿ ಈ ಬಗೆಯ ಸ್ಥಿತ್ಯಂತರಗಳಿಗೆ ಕಾರಣ.

ಸಾಹಿತ್ಯ ಕ್ಷೇತ್ರದಲ್ಲಿ ರಚನೆಯಾದ ಎಲ್ಲಾ ಕೃತಿಗಳೂ ಉತ್ಕೃಷ್ಟವಾಗಿರುವುದಿಲ್ಲ. ಒಬ್ಬ ಸಹೃದಯನ ಚಿತ್ತಭಿತ್ತಿಯಲ್ಲಿ ನೆಲೆಯೂರುವಷ್ಟು ಯೋಗ್ಯವಾಗಿರಬೇಕು. ಆಗ ಮಾತ್ರ ಒಂದು ಕೃತಿ. ಕಲೆ, ಸಾಹಿತ್ಯ ಮಾನ್ಯಗೊಳ್ಳುತ್ತದೆ. ಒಟ್ಟಾರೆಯಾಗಿ ಈ ಎಲ್ಲಾ ಚಟುವಟಿಕೆಯ ಹಿಂದೆ ರಚನಾಕಾರನ ಪಾತ್ರ ಬಹುಮುಖ್ಯ. ಇಲ್ಲಿ ನಡೆಯುವ ನಿರಂತರ ಕೃಷಿಯಲ್ಲಿ ಹಳೆಯ ಕಲೆ ಮತ್ತು ಕಲೆಗಾರ, ಸಾಹಿತ್ಯ ಮತ್ತು ಸಾಹಿತಿ ಬದಲಾಗುತ್ತಿರಬಹುದು, ಹೊಸದು ಬರಬಹುದು. ಇದಕ್ಕೆ ಯಾರೂ ಆಕ್ಷೇಪಣೆ ಮಾಡುವುದಿಲ್ಲ. ಕಾರಣ ಕಲೆ, ಸಾಹಿತ್ಯಗಳೆರಡೂ ಆಯಾ ಕಾಲದ ಗತಿಬಿಂಬಗಳು. ಇವು ಉಳಿಯಲೇಬೇಕಾದ ಅನಿವಾರ್ಯತೆ ಸಹೃದಯನಿಗೆ ಇದೆ. ಹಾಗಾಗಿ ಇಲ್ಲಿ ನಿರಂತರ ಕೃಷಿ ನಡೆಯುತ್ತಲೇ ಇರುತ್ತದೆ. ಈ ಸಂದರ್ಭದಲ್ಲಿ ಅನೇಕ ಮಂದಿ ಕಲೆಗಾರರು ಬಂದು ಹೋಗಬಹುದು. ಆದರೆ ಸಹೃದಯನ ಮನಸ್ಸಿನಲ್ಲಿ ಉಳಿಯುವುದು ಅವರ ಕಲಾಸೇವೆಯಿಂದ ಸಮಾಜಕ್ಕೆ ನೀಡಿದ ಕೊಡುಗೆಯಿಂದ ಮಾತ್ರ. ಕೆಲವರು ತಾವಾಗಿಯೇ ತಮ್ಮ ಕೊಡುಗೆಯನ್ನು ಪ್ರಚುರಪಡಿಸಿಕೊಳ್ಳಬಹುದು. ಇನ್ನು ಕೆಲವರು ಎಲೆಮರೆಕಾಯಿಯಂತಿದ್ದು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಕಲೆ, ಸಾಹಿತ್ಯದ ಉಳಿವಿಗಾಗಿ ಮಾತ್ರ ಶ್ರಮಿಸುವಂತಹವರನ್ನು ಕಾಣಬಹುದು. ಈ ತರಹದ ವ್ಯಕ್ತಿಗಳ ಸಾಲಿಗೆ ಸೇರುವವರು ಶ್ರೀಮತಿ.ವಾಗೀಶ್ವರಿ ಶಾಸ್ತ್ರಿಯವರು. ತಮ್ಮಲ್ಲಿನ ಕಲೆಯ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಉನ್ನತವಾಗಿಸುವಲ್ಲಿ ಶ್ರಮಿಸಿದವರು. ಅದರಲ್ಲೂ ನಶಿಸುವ ಹಂತದಲ್ಲಿರುವಂತಹ ಸಂಪ್ರದಾಯ ಸಾಹಿತ್ಯವನ್ನು ಮುಂದಿನ ಪೀಳಿಗೆಗಾಗಿ ಸಂರಕ್ಷಿಸಬೇಕೆಂಬ ಹಂಬಲವನ್ನು ಇಟ್ಟುಕೊಂಡವರು. ಅದರಂತೆಯೇ ನಡೆದುಕೊಂಡವರು. ತಮ್ಮ ಬದುಕು ಅರ್ಥವಂತಿಕೆಯ ಮೂಲಕ ಸಾರ್ಥಕಗೊಳ್ಳಬೇಕು ಎನ್ನುವ ಹಿರಿಯ ಜೀವ ವಾಗೀಶ್ವರಿ ಶಾಸ್ತ್ರಿಯವರು. ವಯಸ್ಸು ಈಗ ಎಂಭತ್ತೈದು ವರ್ಷಗಳು. ತೆರೆಯ ಹಿಂದಿದ್ದುಕೊಂಡೇ ಸಾಧನೆಗೈದ ಲೇಖಕಿಯ ಜೀವನ ಪರಿಚಯವನ್ನು ಮಾಡಿಕೊಳ್ಳುವುದು ಮುಖ್ಯವಾದ ಸಂಗತಿ ಎನ್ನುವುದು ನನ್ನ

ಅಭಿಪ್ರಾಯ. ಲೇಖಕಿಯ ಬದುಕು-ಬರಹ ಆದರ್ಶಗಳನ್ನು ಅವರ ಜೀವನ ಪರಿಚಯದ ಮೂಲಕ ತಿಳಿಯಬಹುದು.

ಸಂಪ್ರದಾಯದ ಹಾಡುಗಳು ಜನಪದ ಸಾಹಿತ್ಯದ ಒಂದು ಭಾಗ. ಇದರ ವ್ಯಾಪ್ತಿ ಇಂತಿಷ್ಟೇ ಎಂದು ಹೇಳುವುದು ಅಸಾಧ್ಯದ ಮಾತು. ಇಂತಹ ಅಗಾಧವಾದ ಸಾಹಿತ್ಯರಾಶಿಯನ್ನು ಉಳಿಸಿ-ಬೆಳೆಸುವಲ್ಲಿ ವಾಗೀಶ್ವರಿ ಶಾಸ್ತ್ರಿಯವರು ಅಗ್ರಸ್ಥಾನವನ್ನು ಪಡೆದಿದ್ದಾರೆ ಎಂದರೆ ತಪ್ಪಾಗಲಾರದು. ಶಿಷ್ಟ ಸಮಾಜದ ಮಹಿಳೆಯರ ನಡುವೆ ಉಳಿದು ಬೆಳೆದು ಬಂದ ಸಂಪತ್ತು ಸಂಪ್ರದಾಯದ ಹಾಡುಗಳು. ಇತರ ಜನಪದ ಸಾಹಿತ್ಯದಂತೆ ಮೌಖಿಕ ಸಂಪ್ರದಾಯದ ಮೂಲಕ ಉಳಿದುಬಂದ ಈ ಹಾಡುಗಳು ಈಗ ಅವನತಿಯ ಅಂಚಿನಲ್ಲಿದೆ. ಇವುಗಳ ಸಂರಕ್ಷಣೆಗಾಗಿ ವಾಗೀಶ್ವರಿ ಶಾಸ್ತ್ರಿಯವರು ಸಾಕಷ್ಟು ಶ್ರಮಿಸಿದ್ದಾರೆ.

ಇವರ ಜನನ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ೨೬-೭-೧೯೨೬ರಲ್ಲಿ. ಹೊಳೆನರಸೀಪುರದ ಕಣತೂರು ರಾಮಸ್ವಾಮಿ ಶಾಸ್ತ್ರೀಗಳು ಹಾಗೂ ಶ್ರೀಮತಿ.ನರಸಮ್ಮನವರ ಹಿರಿಯಮಗಳಾದ ಅನ್ನಪೂರ್ಣಮ್ಮನವರು ಮತ್ತು ಸಕಲೇಶಪುರದ ರಾಮಭಟ್ಟರ ಮಂಜಯ್ಯನವರ ಮತ್ತು ಶ್ರೀಮತಿ ಕೋಣನೂರು ಸುಬ್ಬಮ್ಮನವರ ಮಗ ವೆಂಕಟೇಶಯ್ಯನವರ ನಾಲ್ಕನೇ ಮಗಳಾಗಿ ವಾಗೀಶ್ವರಿ ಶಾಸ್ತ್ರಿಯವರು ಜನಿಸಿದರು. ತಂದೆ ವೆಂಕಟೇಶಯ್ಯನವರು ಕಾಮಗಾರಿ ಇಲಾಖೆಯಲ್ಲಿ ಸಬ್ ಓವರ್‌ಸೀಯರ್ ಆಗಿದ್ದರು. ವಾಗೀಶ್ವರಿಶಾಸ್ತ್ರಿಯವರು ಹೆಸರಿಗೆ ತಕ್ಕಂತೆ ವಾಕ್ ಈಶ್ವರಿಯೇ ಆಗಿದ್ದಾರೆ. ಇವರಿಗೆ ಈ ಹೆಸರು ಇಟ್ಟಿದ್ದು ಅವರ ಅಜ್ಜಿ ಕೋಣನೂರು ಸುಬ್ಬಮ್ಮನವರು. ಆಗಾಗಲೇ ಮೂರು ಹೆಣ್ಣುಮಕ್ಕಳಿಗೆ ಜನ್ಮ ನೀಡಿದ್ದ ಅನ್ನಪೂರ್ಣಮ್ಮನವರು ನಾಲ್ಕನೇ ಮಗುವಾದರೂ ಗಂಡಾಗಲಿ ಎಂಬ ನಿರೀಕ್ಷೆಯಲ್ಲಿದ್ದರು. ಆದರೆ ವಿಧಿಲಿಖಿತವೆಂಬಂತೆ ನಾಲ್ಕನೆಯ ಮಗುವಾಗಿ ವಾಗೀಶ್ವರಿಯವರು ಜನಿಸಿದಾಗ ಸ್ವಲ್ಪಮಟ್ಟಿಗೆ ತಾಯಿಯಿಂದ ತಿರಸ್ಕಾರಕ್ಕೆ ಒಳಗಾದರು. ಆಗ ಸೊಸೆಯನ್ನು ಸಮಾಧಾನ ಪಡಿಸಿ ಹೆಣ್ಣಾದರೆ ಏನಂತೆ ಇದು ಮಗುವಲ್ಲವೇ ಎಂದು ಮಗುವನ್ನು ತಾವೇ ಸಲಹಿದರು.

ಸುಬ್ಬಮ್ಮನವರು ವಾಗೀಶ್ವರಿಯವರನ್ನು ಇತರ ಮೊಮ್ಮಕ್ಕಳಿಗಿಂತ ಹೆಚ್ಚು ಹಚ್ಚಿಕೊಳ್ಳಲು ಕಾರಣವಿದೆ. ಅದೇನೆಂದರೆ, ತಮ್ಮನ್ನು ಅಗಲಿಹೋದ ಮಗಳನ್ನು ವಾಗೀಶ್ವರಿಯಲ್ಲಿ ಕಾಣುವ ಪ್ರಯತ್ನ. ಅದಕ್ಕಾಗಿಯೇ ತಮ್ಮ ಮಗಳ ಹೆಸರನ್ನೇ ವಾಗೀಶ್ವರಿಶಾಸ್ತ್ರಿಯವರಿಗೆ ಇಟ್ಟರು. ತಮ್ಮ ಆರನೇ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡ ವಾಗೀಶ್ವರಿಯವರಿಗೆ ನೆಲೆಯಾಗಿ ನಿಂತದ್ದು ಅಜ್ಜಿ. ತಂದೆ ಕಾಮಗಾರಿ ಇಲಾಖೆ ಕೆಲಸಗಾರರಾದ್ದರಿಂದ ಯಾವಾಗಲೂ ವರ್ಗಾವಣೆಗೊಂಡು ಕಾಡು ಮೇಡುಗಳ ಮಧ್ಯದಲ್ಲಿ ವಾಸಿಸುವುದೇ ಹೆಚ್ಚು. ಜೊತೆಗೆ ಸುಬ್ಬಮ್ಮನವರ ಪತಿ ಕೋಣನೂರು ಶ್ರೀಕಂಠಶಾಸ್ತ್ರೀಗಳು

ತೀರಿಕೊಂಡ ಅನಂತರ ಸುಬ್ಬಮ್ಮನವರ ಬದುಕು ಬಹಳ ಕಷ್ಟವೆನಿಸಿತು. ಗಂಡ ತೀರಿಕೊಂಡ ಮೇಲೆ ಬದುಕು ಆ ಕಾಲದ ಮಹಿಳೆಯರೆಲ್ಲರಿಗೂ ನೋವೇ ಆಗಿದ್ದಿತು. ಸಮಾಜದಲ್ಲಿ ಒಬ್ಬ ವಿಧವೆಗೆ ನೀಡುವ ಸ್ಥಾನಮಾನ ಅಷ್ಟು ಆರೋಗ್ಯಕರವಾಗಿದ್ದಿರಲಿಲ್ಲ. ಅವಳನ್ನು ದೈಹಿಕವಾಗಿ, ಮಾನಸಿಕವಾಗಿ ಅಂಕೆಯಲ್ಲಿಡುವ ಪ್ರಯತ್ನವನ್ನು ರೂಪಿಸಿಬಿಟ್ಟಿದ್ದವು. ವಿಧವೆಗೆ ಕೇಶಮುಂಡನ ಮಾಡಿಸಿ, ಅಡುಗೆ ಮನೆಯ ಒಂದು ಮೂಲೆಯಲ್ಲಿ ಕೂರಿಸಿ ಎಲ್ಲರೊಂದಿಗೆ ಒಡನಾಟವನ್ನು ನಿಷೇಧಿಸಿ ಒಂದು ಗೃಹಬಂಧನವನ್ನು ಪ್ರಾಪ್ತಗೊಳಿಸಲಾಗುತ್ತಿತ್ತು. ಇಂತಹ ಜೀವನವನ್ನು ಸವೆಸುವ ಸಲುವಾಗಿ ವಾಗೀಶ್ವರಿಯವರನ್ನು ತಮ್ಮ ಬಳಿಯಲ್ಲೇ ಇಟ್ಟುಕೊಳ್ಳುವ ಯೋಚನೆಯನ್ನು ಸುಬ್ಬಮ್ಮನವರು ಮಾಡಿದರು. ಆ ಸಂದರ್ಭದಲ್ಲಿ ಮೊಮ್ಮಗಳ ಅಪಾರವಾದ ಜ್ಞಾಪಕಶಕ್ತಿಯ ಬಗೆಗೆ ಅರಿತ ಅಜ್ಜಿ ತಮ್ಮಲ್ಲಿನ ಎಲ್ಲಾ ಹಾಡುಗಳನ್ನು ಕಲಿಸಲು ಮುಂದಾದರು.

ಬೆಳಗ್ಗೆ ಎದ್ದ ತಕ್ಷಣ ತಾನು ಹೇಳುವವರೆಗೂ ಮಾತನಾಡದಂತೆ ಹೇಳಿ ಪೂರ್ವಾಭಿಮುಖವಾಗಿ ಕೂರಿಸಿ ತನ್ನ ಬಾಯನ್ನೇ ಗಮನಿಸುವಂತೆ ಹೇಳಿ ಹಾಡುಗಳನ್ನು ಹೇಳಿಕೊಡಲು ಪ್ರಾರಂಭಿಸಿದರು. ಇದೇ ರೀತಿ ಬೆಳಗ್ಗೆ ಎರಡು ಸಾರಿ, ಸಂಜೆ ಎರಡು ಸಾರಿ ಹೇಳಿಕೊಡುತ್ತಿದ್ದರು.

ವಾಗೀಶ್ವರಿ ಶಾಸ್ತ್ರಿಯವರು ಅಜ್ಜಿಯ ಕೃಪೆಯಿಂದ ತಮ್ಮ ಐದನೇ ವಯಸ್ಸಿನಲ್ಲೇ ಯಕ್ಷಗಾನದ ಧಾಟಿಯಲ್ಲಿ ಬಬ್ರುವಾಹನ ಕಾಳಗದಂತಹ ಮಹಾಕಾವ್ಯವನ್ನು ಯಾವುದೇ ಭಯವಿಲ್ಲದೆ ನಿರಾತಂಕವಾಗಿ ಹಾಡುವಂತಾದರು. ಕಲಿತ ಹಾಡುಗಳನ್ನು ಮರೆಯದಂತೆ ಹಾಗೇ ನೆನಪಿನಲ್ಲಿಟ್ಟು ಕೊಳ್ಳಲು ಏಕಾದಶಿ, ಶಿವರಾತ್ರಿ ಮುಂತಾದ ದಿನಗಳಲ್ಲಿ ಉಪವಾಸವಿದ್ದು, ನಿದ್ದೆಮಾಡಬಾರದಾದ್ದರಿಂದ ಅಂತಹ ಸಮಯದಲ್ಲಿ ಎಲ್ಲ ಹೆಂಗಸರು ಇವರ ಮನೆಗೆ ಬರುತ್ತಿದ್ದರು. ಆಗ ಈ ಹಾಡುಗಳನ್ನು ಒಂದೊಂದಾಗಿ ಹೇಳಿಸುತ್ತಿದ್ದರು. ವಾಗೀಶ್ವರಿಯವರ ಜ್ಞಾಪಕಶಕ್ತಿ ಎಷ್ಟಿತ್ತೆಂದರೆ ಒಂದು ನೆಲೆಯನ್ನು ಒಂದು ಎರಡು ದಿವಸಗಳಲ್ಲಿ ಕಲಿತು ಬಿಡುತ್ತಿದ್ದರು. ಹೀಗೆ ಅಜ್ಜಿಯ ಪಾಠ ಮುಂದುವರೆದಂತೆ ಅವರಲ್ಲಿ ಹಾಡುಗಳನ್ನು ಕಲಿಯುವ ಹುಮ್ಮಸ್ಸು ಹೆಚ್ಚಿತು. ಹಾಡಿನ ನೆಲೆಗಳ ರಾಗಗಳ ಪರಿಚಯವು ಆಗಿ ಹಾಡು ಕಲಿಯುವುದರಲ್ಲಿ ಪ್ರಾವೀಣ್ಯರಾದರು. ಅನಾರೋಗ್ಯದಿಂದ ಕಾಲವಾದ ಅನ್ನಪೂರ್ಣಮ್ಮನವರ ಏಳು ಜನ ಮಕ್ಕಳನ್ನು ಸಾಕುವ ಹೊಣೆ ಅಜ್ಜಿ ಸುಬ್ಬಮ್ಮನವರದಾಯಿತು. ಇಂತಹ ಸಂದರ್ಭದಲ್ಲಿ ಅಜ್ಜಿ ಐದು ಜನ ಹೆಣ್ಣು ಮಕ್ಕಳಿಗೂ ಅವರವರ ಆಸೆ, ಕಂಠ ಮತ್ತು ಕಲಿಕೆಗೆ ತಕ್ಕಂತೆ ಹಾಡುಗಳನ್ನು ಹೇಳಿಕೊಡುತ್ತಿದ್ದರಂತೆ. ಮೊದಲ ಇಬ್ಬರಿಗೆ ವ್ರತ, ಕತೆಗಳು, ಪೂಜೆ–ಪುನಸ್ಕಾರ, ಸೀತಾಕಲ್ಯಾಣ ಮುಂತಾದ ಹಾಡುಗಳನ್ನು ಹೇಳಿಕೊಡುತ್ತಿದ್ದರೆ, ಮೂರನೆಯವರಿಗೆ

ಒಂದೇ ಧ್ವನಿಯ ರುಕ್ಮಾಂಗದ ಚರಿತೆ, ವಾಗೀಶ್ವರಿಯವರಿಗೆ ಬಬ್ರುವಾಹನ ಕಾಳಗದಂತಹ ಮಹಾಕಾವ್ಯ, ತಂಗಿಗೆ ಪ್ರಮೀಳಕಾಳಗವನ್ನು ಹೇಳಿಕೊಡುತ್ತಿದ್ದರು.

ವಾಗೀಶ್ವರಿಯವರ ಸ್ಮರಣಶಕ್ತಿ ಎಷ್ಟು ಗಾಢವಾಗಿತ್ತು ಎನ್ನುವುದಕ್ಕೆ ಸಾಕ್ಷಿ ಅಜ್ಜಿ. ಎಲ್ಲಾ ಮಕ್ಕಳಿಗೂ ಹೇಳಿಕೊಡುತ್ತಿದ್ದ ಹಾಡುಗಳನ್ನು ಕಲಿಯಲು ಅವರು ಕಷ್ಟಪಡುತ್ತಿದ್ದರೆ ಶ್ರೀಮತಿ.ಶಾಸ್ತ್ರಿಯವರು ತಮಗೆ ಹೇಳಿಕೊಟ್ಟ ಹಾಡಿನ ಜೊತೆಗೆ, ಇತರರಿಗೆ ಹೇಳಿಕೊಟ್ಟ ಹಾಡುಗಳನ್ನು ಕಲಿತುಬಿಡುತ್ತಿದ್ದರು. ಈ ಹಾಡುಗಳನ್ನು ನೆರೆಮನೆಯಲ್ಲಿ ಯಾರಾದರು "ಬಸುರಿಯರಿದ್ದರೆ, ಋತುಮತಿಯರಾಗಿದ್ದರೆ, ಹಬ್ಬ ಹರಿದಿನಗಳಿದ್ದರೆ ಹೋಗಿ ಆ ಸಂದರ್ಭಕ್ಕೆ ತಕ್ಕಂತೆ ಹಾಡುಗಳನ್ನು ಹಾಡುತ್ತಿದ್ದರು. ಮಕ್ಕಳಿಂದ ಹಾಡುಗಳನ್ನು ಹೇಳಿಸುತ್ತಾ ಅಜ್ಜಿ ಅವುಗಳಿಗೆ ವ್ಯಾಖ್ಯಾನವನ್ನು ಮಾಡುತ್ತಿದ್ದರು.

ವಿದ್ಯಾಭ್ಯಾಸ :-

ಶಿಕ್ಷಣದ ದೃಷ್ಟಿಯಿಂದ ವಾಗೀಶ್ವರಿಯವರ ಜೀವನ ಅಷ್ಟು ಚೆನ್ನಾಗಿರಲಿಲ್ಲವೆಂದೇ ಹೇಳಬೇಕು. ಕಾರಣ ತಂದೆ ಕಾಮಗಾರಿ ಆಫೀಸಿನಲ್ಲಿ ಕೆಲಸಗಾರರಾಗಿದ್ದರಿಂದ ಒಂದೊಂದು ಕೆಲಸ ಕೇವಲ ೫-೬ ತಿಂಗಳು ಮಾತ್ರ ಇರುತ್ತಿತ್ತು. ಅನಂತರ ಇನ್ನೊಂದು ಜಾಗಕ್ಕೆ ವರ್ಗಾವಣೆಯಾಗುತ್ತಿತ್ತು. ವಾಸಕ್ಕಾಗಿ ಕಾಡು ಮೇಡುಗಳ ಮಧ್ಯೆ ಕ್ವಾಟ್ರಸ್‌ನ್ನು ನೀಡಲಾಗುತ್ತಿತ್ತು. ಅದು ನಗರ ಪ್ರದೇಶದ ಸೌಲಭ್ಯಗಳಿಂದ ಹೊರತಾಗಿದ್ದಿತ್ತು. ಪ್ರಾರಂಭದಲ್ಲಿ ಅಜ್ಜಿಯ ಬಳಿಯೇ ಇದ್ದರಿಂದ ಅವರ ಚಿಕ್ಕಪನ ಮನೆಯ ಬೀದಿಯಲ್ಲೇ ಇದ್ದ ವಾಣಿವಿಲಾಸ ಪ್ರೈಮರಿ ಶಾಲೆಯಲ್ಲಿ ಮೊದಲ ತರಗತಿಗೆ ಸೇರಿಸಿದರು. ಇದರ ಜೊತೆಗೆ ಅಜ್ಜಿಯ ಹಾಡುಗಳೇ ಇವರಿಗೆ ವಿದ್ಯಾಭ್ಯಾಸವಾಗಿತ್ತು. ಏಕೆಂದರೆ ಜೀವನದ ಮೌಲ್ಯಗಳು ಆ ಹಾಡಿನಲ್ಲಿ ಅಡಗಿದ್ದವು. ಅನಂತರದಲ್ಲಿ ತಂದೆಗೆ ಮಂಡ್ಯಕ್ಕೆ ವರ್ಗಾವಣೆಯಾದ್ದರಿಂದ ತಮ್ಮ ತಂದೆಯೊಂದಿಗೆ ೧೯೩೬ರಲ್ಲಿ ಮಂಡ್ಯಕ್ಕೆ ಬಂದು ನೆಲೆಸಿದರು. ಅಲ್ಲಿ ಅವರಿಗೆ ವಿದ್ಯಾಭ್ಯಾಸದ ದೃಷ್ಟಿಯಿಂದ ಸ್ವಲ್ಪ ನಿರಾಳವೆನಿಸಿತು. ಸಂಗೀತಾಭ್ಯಾಸಕ್ಕೂ ಅನುಕೂಲವಾಯಿತು. ಮಂಡ್ಯದಲ್ಲಿ ಪ್ರೈಮರಿ ನಾಲ್ಕನೇ ಕ್ಲಾಸಿಗೆ ಸೇರಿದರು. ಅಲ್ಲೇ ಮಿಡಲ್ ಸ್ಕೂಲ್‌ನ್ನು ಮುಗಿಸಿದರು. ಹೀಗೆ ನಾಲ್ಕುವರ್ಷಗಳು ಸಂದವು. ಅಷ್ಟರಲ್ಲಾಗಲೇ ವಾಗೀಶ್ವರಿಗೆ ೧೪ ವರ್ಷವಾಗಿದ್ದರಿಂದ ವಿವಾಹ ಬಂಧನಕ್ಕೆ ಒಳಪಡಿಸಿದರು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ತೇರ್ಗಡೆಯಾಗಿದ್ದರು. ವಿವಾಹದ ಸಂದರ್ಭದಲ್ಲೂ ಸುಬ್ಬಮ್ಮನವರು ತಮ್ಮ ಮೊಮ್ಮಗಳ ಬಗೆಗೆ ತಾವೇ ಕಾಳಜಿಯನ್ನು ವಹಿಸಿ ಸಂಬಂಧವನ್ನು ಗೊತ್ತುಪಡಿಸಿದರು. ತಮ್ಮ ಊರಿನವರೇ ಆದ ಸುಸಂಸ್ಕೃತ ಕುಟುಂಬಕ್ಕೆ ತಮ್ಮ ಮೊಮ್ಮಗಳನ್ನು ಸೊಸೆಯಾಗಿ ಧಾರೆಯೆರೆದರು.

ಅರಮನೆಯ ವಿದ್ವಾಂಸರಾಗಿದ್ದ ಹರಿಕಥಾ ವಿದ್ವಾನ್ ಕೋಣನೂರು ಶ್ರೀಕಂಠಶಾಸ್ತ್ರಿಗಳ ಎರಡನೇ ಮಗ ಕೋಣನೂರು ರಾಮಕೃಷ್ಣಶಾಸ್ತ್ರಿಯವರೊಂದಿಗೆ ವಿವಾಹವಾಯಿತು. ಇವರು ಮಿಡ್ಲ್ ಸ್ಕೂಲ್‌ನಲ್ಲಿ ಶಿಕ್ಷಕರಾಗಿದ್ದರು. ಬ್ರಾಹ್ಮಣ ಸಂಪ್ರದಾಯದಲ್ಲಿ ಹೆಚ್ಚಾಗಿ ಬಾಲ್ಯವಿವಾಹ ರೂಢಿಯಲ್ಲಿತ್ತು. ಬಾಲ್ಯದಲ್ಲಿ ವಿವಾಹವಾದರೂ ಹುಡುಗಿಯೂ ಋತುಮತಿಯಾಗುವವರೆಗೂ ಗಂಡನ ಮನೆಗೆ ಕಳಿಸುವಂತಿರಲಿಲ್ಲ. ಹಾಗಾಗಿ ವಾಗೀಶ್ವರಿಯವರು ಅಜ್ಜಿಯ ಮನೆಯಲ್ಲೇ ಉಳಿದರು. ಓದನ್ನು ಮುಂದುವರೆಸಬೇಕೆಂಬ ಹಂಬಲ ಇತ್ತಾದರೂ ಅಲ್ಲಿ ಹುಡುಗರು ಓದುವ ಶಾಲೆಯಾದ್ದರಿಂದ ಚಿಕ್ಕಪ್ಪನವರು ಹಾಸನದಲ್ಲಿದ್ದ ಬಾಲಕಿಯರ ಶಾಲೆಗೆ ಸೇರಿಸುವ ಸಲುವಾಗಿ ವಾಗೀಶ್ವರಿಯವರನ್ನು ಹಾಸನದ ತಮ್ಮ ಮನೆಗೆ ಕರೆತಂದರು. ಆದರೆ ಇದಕ್ಕೆ ಚಿಕ್ಕಮ್ಮನವರು ಬೇಸರ ತಾಳಿದ್ದರಿಂದ ಮತ್ತೆ ಅಜ್ಜಿ ಕರೆದುಕೊಂಡು ಬಂದರು. ಆಗ ಖ್ಯಾತ ನಿಘಂಟು ತಜ್ಞ ಜಿ.ವೆಂಕಟಸುಬ್ಬಯ್ಯನವರ ಪತ್ನಿ ಲಕ್ಷ್ಮೀದೇವಿ ವಾಗೀಶ್ವರಿಯವರ ಸಹಪಾಠಿಯಾಗಿದ್ದರು. ೧೯೪೨ರಲ್ಲಿ ರಾಮಕೃಷ್ಣಶಾಸ್ತ್ರಿಗಳಿಗೆ ಹಾಸನದಿಂದ ಕುಣಿಗಲ್ಲಿಗೆ ವರ್ಗಾವಣೆಯಾಯಿತು. ವಾಗೀಶ್ವರಿಯವರಿಗೆ ಎಂಟು ಜನ ಮಕ್ಕಳು ಜನಿಸಿದರು. ಕುಟುಂಬ ದೊಡ್ಡದಾದಂತೆ ಸಂಸಾರದ ಜವಬ್ದಾರಿ ದೊಡ್ಡದಾಯಿತು. ಅಷ್ಟು ಜನ ಮಕ್ಕಳ ಲಾಲನೆ-ಪಾಲನೆ ಆರ್ಥಿಕ ದೃಷ್ಟಿಯಿಂದ ಕಷ್ಟವಾದರೂ ಸಹ ಸಂಸಾರ ನಿರ್ವಹಣೆಯನ್ನು ಯಶಸ್ವಿಯಾಗಿ ನಿಭಾಯಿಸಿದರು. ಕುಣಿಗಲ್‌ಗೆ ಬಂದು ಒಂದು ವರ್ಷ ತುಂಬುತ್ತಿದ್ದಂತೆ ರಾಮಕೃಷ್ಣ ಶಾಸ್ತ್ರಿಗಳಿಗೆ ಪ್ರೈಮರಿಯಿಂದ ಮಿಡಲ್ ಶಾಲೆಗೆ ಪ್ರೊಮೋಷನ್ ಆಗಿ ಗುಬ್ಬಿಗೆ ವರ್ಗಾವಣೆ ಆಯಿತು. ಅಲ್ಲಿಯವರೆಗೂ ಎಲೆಮರೆಯ ಕಾಯಿಯಂತಿದ್ದ ವಾಗೀಶ್ವರಿಯವರ ಕಲಾಶಕ್ತಿಯ ಸುದ್ಧಿ ನಾಲ್ಕಾರು ಜನರಿಗೆ ತಿಳಿಯುವಂತಾಯಿತು.

ಗುಬ್ಬಿಯಲ್ಲಿ ನಾಟಕಕಾರ ಗುಬ್ಬಿವೀರಣ್ಣನವರ ಮನೆಯ ಪಕ್ಕದಲ್ಲಿ ವಾಗೀಶ್ವರಿಯವರ ಮನೆ ಕೂಡ ಇತ್ತು. ಹಾಗಾಗಿ ವೀರಣ್ಣನವರ ಮಕ್ಕಳಿಗೆ ರಾಮಕೃಷ್ಣಶಾಸ್ತ್ರಿಗಳು ಸಂಗೀತವನ್ನು ಹೇಳಿಕೊಡುತ್ತಿದ್ದರು. ಒಂದು ಸಾರಿ ಶ್ರೀಕೃಷ್ಣಪಾರಿಜಾತ ನಾಟಕವನ್ನು ಗುಬ್ಬಿವೀರಣ್ಣನವರ ಮಕ್ಕಳಿಗೆ ನಾಟಕವನ್ನು ಹೇಳಿಕೊಟ್ಟು, ಕಲಿಸಿ ನಾಟಕ ಮಾಡಿಸಿದರು. ಕಾರ್ಯಕ್ರಮದ ಅಂತ್ಯದಲ್ಲಿ ನಾಟಕವನ್ನು ನಿರ್ದೇಶಿಸಿದವರು ವಾಗೀಶ್ವರಿ ಶಾಸ್ತ್ರಿಯವರು ಎಂದು ತಿಳಿದಾಗ ಸಾಕಷ್ಟು ಪ್ರಶಂಸೆ, ಪ್ರೋತ್ಸಾಹಗಳನ್ನು ಪಡೆದರು. ಅಲ್ಲಿಂದ ಮೈಸೂರಿನ ಕೃಷ್ಣನಗರಕ್ಕೆ ಬಂದು ನೆಲೆಸಿದರು. ಇಲ್ಲಿ ಒಂಭತ್ತು ವರ್ಷಗಳ ಕಾಲ ನೆಲೆಸಿದರು. ಆ ಸಂದರ್ಭದಲ್ಲಿ ಮಹಾನ್ ವಿದ್ವಾಂಸರು, ನಾಟಕಕಾರರು, ಸಾಹಿತಿಗಳ, ಲೇಖಕರ ವಿಶ್ವಾಸವನ್ನು ಗಳಿಸುವಲ್ಲಿ ಯಶಸ್ವಿಯಾದರು. ಗೊರೂರಿನಲ್ಲಿ ಇದ್ದ ಸಮಯದಲ್ಲಿ ತಮ್ಮ ದೊಡ್ಡ ಮಗಳ ಮದುವೆ ನೆರವೇರಿತು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮನೆಯಲ್ಲಿ ಎಷ್ಟೋ ಸಲ ವಾಗೀಶ್ವರಿಯವರು ಹೋಗಿ ಹಾಡುತ್ತಿದ್ದರು. ಮೈಸೂರಿನಲ್ಲಿ ವಾಗೀಶ್ವರಿಯವರ ಮನೆಯ ಎದುರಲ್ಲೇ

ನಾಟಕದವರೆಲ್ಲಾ ಉಳಿದುಕೊಂಡಿದ್ದರು. ರಾಮಕೃಷ್ಣಶಾಸ್ತ್ರಿಗಳು ತಮ್ಮ ತಂದೆಯ ಆಸೆಯಂತೆ ಸಂಗೀತದಲ್ಲೇ ಸಾಧನೆಗೈಯಬೇಕೆಂಬುದಕ್ಕೆ ನಿಷ್ಠರಾಗಿದ್ದರು. ಹಾಗಾಗಿ ತಮಗೆ ಬೇರೆ ಎಲ್ಲಾ ಕ್ಷೇತ್ರದಲ್ಲೂ ಪ್ರಾವಿಣ್ಯತೆ ಅವಕಾಶಗಳಿದ್ದರೂ ಸಹ ತಮ್ಮ ಸಂಗೀತವೃತ್ತಿಯನ್ನು ಹೊರತು ಬೇರೆ ಯಾವುದರಲ್ಲೂ ಬೆಳೆಯಲು ಇಚ್ಛಿಸಲಿಲ್ಲ. ಆದರೆ ಎಲ್ಲೇ ನಾಟಕ ನಡೆದರೂ ನಾಟಕಕಾರರಿದ್ದರೂ ಅಲ್ಲಿ ಹೋಗಿ ಅವರೊಂದಿಗೆ ಬೆರೆತು ಹಾರ್ಮೋನಿಯಂ ಬಾರಿಸುವುದು, ಹಾಡು ಹೇಳುವುದು ಅವರಿಗೆ ತುಂಬಾ ಇಷ್ಟ. ಹಾಗಾಗಿ ವಾಗೀಶ್ವರಿಯವರು ಬೇಡಾ ಎಂದರೂ ತಮ್ಮ ಮನೆಯ ಎದುರಲ್ಲೇ ವಾಸಿಸುತ್ತಿದ್ದಂತಹ ನಾಟಕಕಾರರ ಬಳಿ ಹೋಗಿ ಸಂಗೀತ ಪಾಠವನ್ನು ಹೇಳುತ್ತಿದ್ದರು. ಅವರಿಂದ ಸಂಗೀತವನ್ನು ಹೇಳಿಸಿಕೊಂಡವರಲ್ಲಿ ನಾಟಕಕಾರ, ಚಿತ್ರನಟ ರಾಜ್‌ಕುಮಾರ್ ಕೂಡ ಒಬ್ಬರು. ನಾಟಕದವರೊಂದಿಗಿನ ಅತಿಯಾದ ಒಡನಾಟ ವಾಗೀಶ್ವರಿಯವರಿಗೆ ಇಷ್ಟವಾಗದ ಕಾರಣ ಮನೆಯನ್ನು ಅಲ್ಲಿಂದ ಬೇರೆಡೆಗೆ ವರ್ಗಾಯಿಸುವಂತೆ ಒತ್ತಡ ಹೇರಿದರು.

ವಾಗೀಶ್ವರಿಯವರು ಹಾಡು ಹಾಡುವುದನ್ನು ಮದುವೆ-ಸಮಾರಂಭಗಳಲ್ಲಿ ಮುಂದುವರೆಸುತ್ತಿದ್ದರು. ಆಗಿನ ಸಂದರ್ಭದಲ್ಲಿ ಆರ್ಥಿಕವಾಗಿ ಸ್ವಲ್ಪ ಕೊರತೆಯಿದ್ದರೂ ಸಹ ತಮ್ಮ ಎಲ್ಲಾ ಮಕ್ಕಳಿಗೂ ಉನ್ನತ ವಿದ್ಯಾಭ್ಯಾಸ ಕೊಡಿಸಿದ್ದರು. ಅವರ ಜೀವನದ ಆಸೆ ಕೂಡ ಅದೇ ಆಗಿತ್ತು. ಮಕ್ಕಳು ಉತ್ತಮ ವಿದ್ಯಾವಂತರಾಗಬೇಕು. ಸಮಾಜ ಸೇವೆಯಲಿ ತೊಡಗಬೇಕು. ಉದ್ಯೋಗಸ್ಥರಾಗಬೇಕು ಎಂಬುದಾಗಿತ್ತು.

ವಾಗೀಶ್ವರಿಯವರು ಮತ್ತೊಂದ ಆಸೆ ಹಾಡುವುದರ ಮೂಲಕವೇ ದೇವರನ್ನು ಕಾಣುವ ಹಂಬಲ. ಇವರಲ್ಲಿದ್ದ ಹಾಡುಗಳ ಪ್ರಕಟಣೆಗೆ ಪರೋಕ್ಷವಾಗಿ ಮೊದಲು ಉತ್ತೇಜನ ನೀಡಿದವರು ತಮ್ಮ ಮಗ ಓದುತ್ತಿದ್ದ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಪ್ರೊ.ಅಶ್ವತ್ಥನಾರಾಯಣರವರು. ಇವರ ಹಾಡುಗಳನ್ನೆಲ್ಲಾ ಕೇಳಿದ ಅವರು ಎಲ್ಲಾ ಹಾಡುಗಳನ್ನು ಬರೆದಿಡುವಂತೆ ಸಲಹೆ ಕೊಟ್ಟರು. ಈ ಕಾರ್ಯದಲ್ಲಿ ವಾಗೀಶ್ವರಿಯವರ ಪತಿ ರಾಮಕೃಷ್ಣಶಾಸ್ತ್ರಿಗಳು ಸಹ ಸಾಕಷ್ಟು ಹಾಡುಗಳನ್ನು ರಾಗ-ತಾಳ-ಲಯಬದ್ಧವಾಗಿ ಬರೆದುಕೊಟ್ಟರು. ಮದುವೆಯ ಆರಂಭದಿಂದಲೂ ಸಹ ತಮ್ಮ ಪತ್ನಿಯ ಹಾಡುವಿಕೆಗೆ ಪ್ರೋತ್ಸಾಹ ನೀಡುತ್ತಲೇ ಬಂದರು. ಜೊತೆ ಆ ಹಾಡುಗಳನ್ನು ಸಂಗೀತ ಬದ್ಧ ರೂಪಕ್ಕೆ ತಂದರು. ಸಂಪ್ರದಾಯದ ಹಾಡುಗಳನ್ನು ಒಂದು ಗ್ರಂಥ ರೂಪಕ್ಕೆ ತಂದು ಪ್ರಕಟಿಸಬೇಕು ಎಂದು ವಾಗೀಶ್ವರಿಯವರ ಮನಸ್ಸು ಸದಾ ತುಡಿಯುತ್ತಿತ್ತು. ಇದಕ್ಕೆ ಕಾರಣ, ಹಾಡುಗಳನ್ನು ತಪ್ಪಾದ ರೀತಿಯಲ್ಲಿ ಅರ್ಥೈಸುವ ಮೂಲಕ ಮೂಲ ಅರ್ಥಕ್ಕೆ ಒದಗುವ ಧಕ್ಕೆ ಇದಕ್ಕೆ ಉದಾಹರಣೆಯಾಗಿ ಅವರೇ ಹೇಳುವ ಒಂದು ಪ್ರಸಂಗವನ್ನು ಗಮನಿಸಬಹುದು. ಆಕಾಶವಾಣಿಯಲ್ಲಿ ಹಸೆಶಾಸ್ತ್ರಕ್ಕೆ ಸಂಬಂಧಿಸಿದಂತಹ ಹಾಡನ್ನು ದ್ರೌಪದಿಯ ಸೀರೆ ಸೆಳೆವ ಹಾಡು ಎಂದು ತಪ್ಪಾಗಿ

ನಿರೂಪಕರೊಬ್ಬರು ವ್ಯಾಖ್ಯಾನಿಸಿದ್ದರು. ಇಂತಹ ಹಲವು ಕಾರಣಗಳು "ಹೃದಯ ಸಂಪುಟದಂತಹ ಬೃಹತ್ ಗ್ರಂಥವನ್ನು ಪ್ರಕಟಿಸಲು ಪ್ರೇರಣೆಯನ್ನುಂಟು ಮಾಡಿದವು. ಆಕಾಶವಾಣಿಯಲ್ಲಿ ಸಂಪ್ರದಾಯದ ಹಾಡುಗಳನ್ನು ಪ್ರಸಾರ ಮಾಡಬೇಕೆಂದು ಬಯಸಿದರು. ಅದನ್ನು ಆಕಾಶವಾಣಿಯಲ್ಲೇ ಕೆಲಸ ಮಾಡುತ್ತಿದ್ದ ಸಂಬಂಧಿಕರೊಬ್ಬರ ಬಳಿ ಹೇಳಿಕೊಂಡರೂ ಒಂದು ಅವಕಾಶವನ್ನು ಅವರಿಗೆ ನೀಡಲಿಲ್ಲ. ಆದರೆ ವಾಗೀಶ್ವರಿಯವರ ಪ್ರತಿಭೆ, ಸಾಮರ್ಥ್ಯ ಅವರನ್ನು ಆಕಾಶವಾಣಿಯಲ್ಲಿ ಹಾಡಿಸುವಂತೆ ಮಾಡಿತು. ನಿಧಾನವಾಗಿ ಅವಕಾಶ ಒದಗಿತು.

ಸುಧಾ, ಸಂಯುಕ್ತ ಕರ್ನಾಟಕ, ವನಿತಾ ಪತ್ರಿಕೆಗಳಲ್ಲಿ ಸುಮಾರು ವರ್ಷಗಳ ಕಾಲ ಸಾಕಷ್ಟು ಲೇಖನಗಳನ್ನು, ಸಂಪ್ರದಾಯದ ಹಾಡುಗಳನ್ನು ಅದಕ್ಕೆ ವಿವರಣೆಯನ್ನು ಬರೆದರು. 'ದಾಸರ ಅವತಾರ ಮಹಿಳೆಯರ ಉದ್ಧಾರ' ಎಂಬ ಲೇಖನದ ಮೂಲಕ ದಾಸರು ಸ್ತ್ರೀಯರಿಗೆ ನೀಡಿದ್ದ ಸ್ಥಾನಮಾನವನ್ನು ತಿಳಿಸಿದರು. ಸಂಪ್ರದಾಯದ ಹಾಡುಗಳ ಹಾಡುವಿಕೆಯಲ್ಲಿ ಹೆಸರು ಮಾಡಿದ್ದ ಮೈಸೂರು ನಾಗಮ್ಮನವರ ಬದುಕು-ಸಾಧನೆಯನ್ನು ಕುರಿತು ಒಂದು ಲೇಖನವನ್ನು ಬರೆದರು. ಹೀಗೆ ಅವರ ಹಲವು ಲೇಖನಗಳು ಮನ್ನಣೆಯನ್ನು ಪಡೆದವು. ವಾಗೀಶ್ವರಿಯವರ ಬದುಕು-ಬರಹ ಎಲ್ಲರಿಗೂ ಆದರ್ಶಪ್ರಾಯವಾದಂತಹದ್ದು. ಅವರು ಕೇವಲ ಸಂಪ್ರದಾಯದ ಹಾಡುಗಳಿಗೆ ಮಾತ್ರ ಸೀಮಿತವಾಗದೆ ತಮ್ಮ ಸುತ್ತಲಿನ ಪರಿಸರ ವ್ಯಕ್ತಿಗಳ ಬಗೆಗೆ ಅವರಿಗಿದ್ದ ಸೂಕ್ಷ್ಮವಾದ ದೃಷ್ಟಿಯಿಂದ ಸಮಾಜವನ್ನು ಅರಿತು ಸಮಾಜದಲ್ಲಿ ಹಲವು ಸಮಸ್ಯೆಗಳನ್ನು ವಸ್ತುವಾಗಿಸಿಕೊಂಡು ಸುಲಭ ಸಾಂಪ್ರದಾಯಿಕ ವಿವಾಹ", "ಚಿತೆಯಿಂದ ಚಿಂತೆಗೆ", "ಸಿರಿಸಿಂಗಾರದ ಸಿಂಗಾಪುರ" ಕೋಣನೂರು ಶ್ರೀಕಂಠಶಾಸ್ತ್ರಿಗಳ ಜೀವನ ಚರಿತೆ ಕೃತಿಗಳನ್ನು ರಚಿಸಿದ್ದಾರೆ. ಸಂಪ್ರದಾಯಸ್ಥ ಕುಟುಂಬದ ಹೆಣ್ಣುಮಗಳಾಗಿದ್ದು ಸಹ ಅದನ್ನು ಬದುಕಿನಲ್ಲಿ ಅನುಸರಿಸುತ್ತಿದ್ದರೂ ಪ್ರತಿಯೊಂದನ್ನು ವೈಚಾರಿಕ ದೃಷ್ಟಿಯಿಂದ ಆಲೋಚಿಸಿ ಅವಲೋಕಿಸುವಂತಹ ವ್ಯಕ್ತಿತ್ವ ವಾಗೀಶ್ವರಿಯವರದ್ದು. ಕೇವಲ ಬರಹದಲ್ಲಷ್ಟೇ ಅಲ್ಲದೆ, ಅವರ ಬದುಕಿನಲ್ಲೂ ಸಹ ಅರ್ಥವಂತಿಕೆಯನ್ನು ಕಂಡುಕೊಂಡವರು. ತಮ್ಮ ಅಕ್ಕ ತೀರಿಕೊಂಡಾಗ ಅವರ ಮಕ್ಕಳನ್ನು ಹಾಗೂ ತಮ್ಮನ ಮಕ್ಕಳೆಲ್ಲರನ್ನೂ ತಾವೇ ಸಾಕಿ ವಿದ್ಯಾಭ್ಯಾಸ ಕೊಡಿಸಿ ಸಲಹಿದ್ದಾರೆ. ಸಮಾಜಕ್ಕೆ ಏನಾದರೂ ಕೊಡುಗೆಯನ್ನು ನೀಡಬೇಕೆಂಬ ಬಯಕೆ "ಸಂಪ್ರದಾಯದ ಹಾಡುಗಳು, "ಹೃದಯ ಸಂಪುಟ"ವೆಂಬ ಗ್ರಂಥ ಹಾಗೂ ಇತರೆ ಕೃತಿಗಲ ರಚನೆಗೆ ಪ್ರೇರಣೆ.

ವಾಗೀಶ್ವರಿಯವರ ನಿಜವಾದ ಸಾಹಿತ್ಯಸೇವೆ ಆರಂಭವಾಗುವ ಹೊತ್ತಿಗೆ ಅವರಿಗೆ ಅರವತ್ತು ವರ್ಷ ಸುಮಾರು ೧೯೮೦ರ ದಶಕದಲ್ಲಿ ಬರವಣಿಗೆಯನ್ನು ಆರಂಭಿಸಿದರು. ೬೦ರ ಅನಂತರ ಅರಳೋ-ಮರುಳೋ ಎಂಬ ಗಾದೆ ಮಾತು ವಾಗೀಶ್ವರಿಯವರ ದೃಷ್ಟಿಯಲ್ಲಿ ಸುಳ್ಳಾಯಿತು.

ತಮ್ಮ ಸ್ಮರಣ ಬುತ್ತಿಯಲ್ಲಿ ಅಡಗಿದ್ದ ಹಾಡುಗಳನ್ನು ಹೆಕ್ಕಿ ತೆಗೆಯುವ ಕೆಲಸವನ್ನು ಮಾಡಿದ್ದಾರೆ. ಅವರು ತಮ್ಮ ಬರವಣಿಗೆಯನ್ನು ಆರಂಭಿಸಿದ್ದು ೨೫ ವರ್ಷಗಳಿಂದೀಚೆಗೆ. ಇವರು "ಹೃದಯಸಂಪುಟ" ಕೃತಿಯ ಪ್ರಕಟಣೆಗೆ ಸಾಕಷ್ಟು ಶ್ರಮ ಪಟ್ಟಿದ್ದಾರೆ. ಅದಕ್ಕಾಗಿ ಒಂದೆರಡು ಕಡೆ ತಮ್ಮ ಬರಹಗಳನ್ನಿಟ್ಟುಕೊಂಡು ತಿರುಗಿದ್ದಾರೆ. ಕೊನೆಗೆ ತಾವೇ ಸ್ವತಂತ್ರವಾಗಿ ಪ್ರಕಟಿಸಲೇಬೇಕೆಂಬ ನಿರ್ಧಾರಕ್ಕೆ ಬಂದರು. ಯಾರೋ ಕೊಟ್ಟ ಸಲಹೆಯ ಮೇರೆಗೆ ಸಂಸ್ಕೃತಿ ಇಲಾಖೆಯನ್ನು ಸಂಪರ್ಕಿಸಿದರು. ಅಲ್ಲಿ ಶ್ರೀ.ನಾನಾಕಟಾವಿ ಅವರ ಮುಂದೆ ತಮ್ಮ ಫೈಲುಗಳನ್ನು ಇಟ್ಟರು. ಅವರು ಧನಸಹಾಯವನ್ನು ನೀಡುವ ಭರವಸೆ ಕೊಟ್ಟರಾದರೂ ಸ್ವಲ್ಪ ದಿನಗಳಲ್ಲಿ ಕಾಲವಾದರು. ಅನಂತರ ಅವರ ಜಾಗಕ್ಕೆ ಬಂದ ಐ.ಎಂ.ವಿಠಲಮೂರ್ತಿ ಅವರು ೧೫ ಸಾವಿರ ರೂಪಾಯಿ ಧನಸಹಾಯ ಬಿಡುಗಡೆ ಮಾಡಿದರು. ಜೊತೆಗೆ ಕೆನರಾ ಬ್ಯಾಂಕಿನಲ್ಲಿ ೫೦ ಸಾವಿರ ರೂಪಾಯಿಗಳನ್ನು ಸಾಲ ಪಡೆದರು. ಮೂರು ತಿಂಗಳಲ್ಲಿ ಬೃಹತ್ ಗ್ರಂಥವನ್ನು ಹೊರತಂದರು. ಕೃತಿ ಬಿಡುಗಡೆಯಾದ ಕೆಲವೇ ತಿಂಗಳುಗಳಲ್ಲಿ ಎಲ್ಲವೂ ಖರ್ಚಾದವು. ಕಾರಣ ಅದೊಂದು ಮಹತ್ವದ ಕೃತಿಯಾದ್ದರಿಂದ. ಇವರ ಈ ಸಾಧನೆ ಬಗ್ಗೆ ಅನೇಕ ವಿದ್ವಾಂಸರುಗಳಾದ ಗೊರೂರು, ಡಾ.ಜೀ.ಶಂ.ಪರಮಶಿವಯ್ಯ, ಎಂ.ವಿ.ಸೀತಾರಾಮ್ಯ, ಬಿ.ನಾ.ಮಂಗಳ, ನಿಟ್ಟೂರು ಶ್ರೀನಿವಾಸರಾವ್. ಕೆ.ಎಸ್.ನಿಸಾರ್ ಅಹಮದ್ ಮುಂತಾದವರು ಸಾಕಷ್ಟು ಪ್ರಶಂಸಿಸಿ ಕೃತಿಯನ್ನು ಕುರಿತಂತೆ ಉತ್ತಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ತರಂಗ, ವನಿತಾ, ಮುಂತಾದ ಪತ್ರಿಕೆಗಳಲ್ಲಿ ಇವರ ಸಾಧನೆಯನ್ನು, ಹೃದಯಸಂಪುಟ ಗ್ರಂಥವನ್ನು ಕುರಿತು ವಿಮರ್ಶೆಗಳು ಬಂದವು. ಜೊತೆಗೆ ಸಾಕಷ್ಟು ಪ್ರಶಸ್ತಿ ಪುರಸ್ಕಾರ, ಸನ್ಮಾನಗಳು ಪ್ರಾಪ್ತವಾದವು.

ಹೆಣ್ಣುಮಕ್ಕಳು ಸ್ವತಃ ಹಾಡುವುದನ್ನು ಕಲಿತುಕೊಳ್ಳಲಿ ಎಂಬ ಆಸೆಯಿಂದ ಹನ್ನೆರಡು ಕ್ಯಾಸೆಟ್‌ಗಳನ್ನು ಹೊರತಂದರು. ಅವುಗಳಲ್ಲಿ 'ಜೋ ಜೋ ಕಂದ' ಮೊದಲನೆಯದಾಗಿದೆ. ಆ ನಂತರದಲ್ಲಿ 'ಅಕ್ಷರ ಕಲಿ ನೀ ಕಂದ', 'ಸುಲಗ್ನಾಸ್ಸಾವಧಾನ', 'ಮದುವೆಯ ಮೋಜಿನ ಹಾಡುಗಳು', 'ಗೌರಿಹಬ್ಬದ ಹಾಡುಗಳು', 'ಎದ್ದು ಬಾ ಮುದ್ದು ಗಣಪತಿ', 'ಆರತಿಯ ಮಗಳು'. 'ಲಲಿತಾ ಪೂಜಾ ವಿಧಾನ', 'ವ್ರತಕಥಾಮಾಲಿಕೆ', ಮುಂತಾದ ಧ್ವನಿ ಸುರುಳಿಗಳನ್ನು ಸಿದ್ಧಪಡಿಸಿದ್ದಾರೆ. ಈ ಹಾಡುಗಳನ್ನು ತಮ್ಮ ಮಕ್ಕಳಿಂದಲೇ ಹಾಡಿಸಿದ್ದಾರೆ.

"ಹೃದಯ ಸಂಪುಟ" ಗ್ರಂಥಕ್ಕೆ ೧೯೮೫ರ "ಕಾವ್ಯಾನಂದ" ಪುರಸ್ಕಾರ, ೧೯೯೨ರ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಮತ್ತು ೧೯೯೪ರಲ್ಲಿ ಶಾಶ್ವತಿ ಸಂಸ್ಥೆಯಿಂದ "ಕರ್ನಾಟಕ ಕಲ್ಪವಲ್ಲಿ" ಎಂಬ ಪ್ರಶಸ್ತಿಗಳು ದೊರೆತಿವೆ. ೧೯೯೫ ಸೆಪ್ಟೆಂಬರ್ ಅಮೆರಿಕಾ ಪ್ರವಾಸ ಕೈಗೊಂಡಾಗ

ನ್ಯೂಯಾರ್ಕ್   ಕನ್ನಡ ಕೂಡದವರು ಇವರನ್ನು ಸನ್ಮಾನಿಸಿ ಫಲಕ ನೀಡಿದ್ದಾರೆ. ಹೀಗೆ ಅಂತರರಾಷ್ಟ್ರೀಗಳಲ್ಲೂ ಗೌರವವನ್ನು ಪಡೆದಿದ್ದಾರೆ.

೧೯೯೯ರಲ್ಲಿ ಮೈಸೂರಿನ ಕಾವ್ಯರಂಜಿನಿ ಸಭೆ. ೨೦೦೨ರಲ್ಲಿ ಬೆಂಗಳೂರು ಮುಲಕನಾಡು ಸಭೆ. ೨೦೦೩ರಲ್ಲಿ ಮಹಿಳಾ ದಿನದ ಅಂಗವಾಗಿ ಲಯನ್ಸ್ ಕ್ಲಬ್‌ನವರು, ೨೦೦೪ರಲ್ಲಿ ಭಾರತೀಯ ಶಿಕ್ಷಣ ಮಂಡಲಿಯವರು ಮೈಸೂರಿನಲ್ಲಿ ತ್ಯಾಗರಾಜ ಸಂಗೀತ ಸಭೆಯವರು ಹೀಗೆ ಅನೇಕ ಸಂಘಸಂಸ್ಥೆಗಳು ಶ್ರೀಮತಿ ವಾಗೇಶ್ವರಿ ಶಾಸ್ತ್ರಿಯವರನ್ನು ಗೌರವಿಸಿದ್ದಾರೆ.

ಅಧ್ಯಾಯ – ೩

ಸಂಪ್ರದಾಯದ ಹಾಡುಗಳು

ಅ. ಹಸೆಗೆ ಕರೆತರುವ ಹಾಡುಗಳು

ಆ. ಆರತಿಯ ಹಾಡುಗಳು

ಇ. ಹೆಣ್ಣು ಮಕ್ಕಳು ಮೈ ನೆರೆದಾಗ ಹಾಡುವ ಹಾಡುಗಳು

ಈ. ಹೆಣ್ಣು ಮಕ್ಕಳು ಬಸುರಿಯಾದಾಗ ಹಾಡುವ ಆಚರಣೆಯ ಹಾಗೂ ಬಯಕೆಯ ಹಾಡುಗಳು

ಉ. ಚೌಲೋಪನಯನದ ಹಾಡುಗಳು

ಊ. ಮದುವೆಯ ಹಾಡುಗಳು

ಋ. ದೇವರ ಹಾಡುಗಳು

- ಕ. ದೇವರ ಹಬ್ಬಗಳಲ್ಲಿ ಹಾಡುವ ಹಾಡುಗಳು
- ಖ. ಮಂಗಳ–ಆರತಿಯ ಹಾಡುಗಳು
- ಗ. ದೇವಿಯ ಹಾಡುಗಳು
- ಘ. ತುಳಸಿಯ ಹಾಡುಗಳು

ಎ. ವ್ರತಕಥೆಗಳ ಹಾಡುಗಳು

ಅಧ್ಯಾಯ – ೨

ಸಂಪ್ರದಾಯದ ಹಾಡುಗಳು

ಜನಪದ ಸಾಹಿತ್ಯ ಶಿಷ್ಟ ಸಾಹಿತ್ಯಕ್ಕೆ ಮೂಲ. ಶಿಷ್ಟ ಕವಿಗಳೆಲ್ಲ ಜಾನಪದ ಪ್ರಭಾವ ಪ್ರೇರಣೆಯಿಂದ ಹುಟ್ಟಿಕೊಂಡಿರುವವರೇ. ಜನಪದ ಸಾಹಿತ್ಯದ ಭಾಷೆ ಆಡು ಭಾಷೆಯಾದರೂ ಅದು ಪ್ರಭಾವಶಾಲಿಯಾಗಿದ್ದು ಹೇಳುವುದನ್ನು ಕೇಳುಗರ ಮನಮುಟ್ಟುವಂತೆ ಉವಾಚಿಸುತ್ತದೆ. ಇಲ್ಲಿ ನುಡಿಗಟ್ಟು, ಗಾದೆ, ಒಗಟು, ಬೈಗುಳ, ದೃಷ್ಟಾಂತ ಮೊದಲಾದವು ವಿಫುಲವಾಗಿ ಬಳಕೆಯಾಗುತ್ತದೆ.

ಶಿಷ್ಟ ಕಾವ್ಯಗಳು ಏಕವ್ಯಕ್ತಿ ದೃಷ್ಟಿಕೋನದಿಂದ ರಚನೆಗೊಂಡರೆ ಜನಪದ ಕಾವ್ಯಗಳು ಸಮಷ್ಟಿದೃಷ್ಟಿಕೋನದಿಂದ ರೂಪುಗೊಂಡಿರುತ್ತದೆ. ಜನಪದ ಸಾಹಿತ್ಯದ ಬಹುಪಾಲು ಸೃಷ್ಟಿ ಅನಕ್ಷರಸ್ಥರಿಂದಲೇ ಹೊರತು ಅಕ್ಷರಸ್ಥರಿಂದಲ್ಲ. ಜಗತ್ತಿನ ಪ್ರತಿಯೊಂದು ದೇಶವು ತನ್ನದೆ ಆದ ಮಹಾಕಾವ್ಯಗಳನ್ನು ರಚಿಸಿಕೊಂಡಿವೆ. ಈ ಮಹಾಕಾವ್ಯಗಳನ್ನು ರಚಿಸಿ ಗ್ರಂಥಸ್ಥ ರೂಪಕ್ಕೆ ತಂದವರು ವಿದ್ವಾಂಸರು. ಸಾಹಿತ್ಯದ ಬಗ್ಗೆ ಜ್ಞಾನ, ಆಸಕ್ತಿ ಇವೆರಡನ್ನು ಹೊಂದಿದವರು. ಹಾಗೆಂದ ಮಾತ್ರಕ್ಕೆ ಬರವಣಿಗೆ ರೂಪುಗೊಳ್ಳುವುದಕ್ಕೆ ಮುಂಚೆ ಸಾಹಿತ್ಯ ಎಂಬುದು ಇರಲಿಲ್ಲವೇ? ಎಂಬ ಪ್ರಶ್ನೆಗಳು ಮಾಡುವುದು ಸಹಜ. ಈ ಪ್ರಶ್ನೆಗಳಿಗೆ ಉತ್ತರವಾಗಿ ಲಿಖಿತವಲ್ಲದ ಮೌಖಿಕ ಸ್ವರೂಪದ ಸಾಹಿತ್ಯವೊಂದನ್ನು ಕಾಣಬಹುದು. ಅದುವೇ ಜನಪದ ಸಾಹಿತ್ಯ.

ಜನಪದ ಸಾಹಿತ್ಯವು ಪ್ರಧಾನವಾಗಿ ಮೂರು ಸಂಗತಿಗಳನ್ನು ಒಳಗೊಂಡು ರಚನೆ ಗೊಂಡಿರುವಂತಹದ್ದು. ಅವುಗಳೆಂದರೆ ಆಚರಣೆ, ನಂಬಿಕೆ, ಸಂಪ್ರದಾಯ. ಈ ಅಂಶಗಳು ಜನಪದ ಸಾಹಿತ್ಯವನ್ನು ಅರಿಯುವಲ್ಲಿ ಸಹಾಯಕವಾಗುತ್ತವೆ. ಇವುಗಳ ಅರಿವಿಲ್ಲದ ಜಾನಪದ ಅಧ್ಯಯನ ಅಪೂರ್ಣ. ಆಚರಣೆ, ನಂಬಿಕೆ, ಸಂಪ್ರದಾಯ ಮೂರು ಮೇಲ್ನೋಟಕ್ಕೆ ತತ್‌ಕ್ಷಣ ಒಂದೇ ಎನಿಸಿದರೂ ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳಲ್ಲಿನ ಒಳ ವ್ಯತ್ಯಾಸಗಳನ್ನು, ಸಾಮ್ಯಗಳನ್ನೂ, ತಿಳಿಯಬಹುದು. ವಿದ್ವಾಂಸರ ವ್ಯಾಖ್ಯಾನಗಳಿಂದ ಈ ಅಂಶ ಸ್ಪಷ್ಟೀಕರಣಗೊಳ್ಳುತ್ತದೆ. ಇವು ಒಂದಕ್ಕೊಂದು ಪೂರಕವೂ, ಪ್ರೇರಕವೂ ಆಗಿವೆ. ಆಚರಣೆ ಕೆಲವೊಂದು ನಂಬಿಕೆಗಳನ್ನು ಆಧರಿಸಿ ನಿರ್ದಿಷ್ಟವಾದ ವಿಶೇಷ ಸಂದರ್ಭಗಳಲ್ಲಿ ನಡೆಸಿಕೊಂಡು ಬರುವ ಆಚಾರ–ವಿಚಾರವೇ 'ಆಚರಣೆ' ಆಚರಣೆ ಎಂಬ ಪದವು ಶಾಬ್ದಿಕವಾಗಿ ಹಿಂಬಾಲಿಸುವಿಕೆ ನಡತೆ, ರೂಢಿ, ಎಂಬ ಅರ್ಥವನ್ನು ಒಳಗೊಂಡಿದೆ. ಈ ಪದವು ವಿಶಾಲ ಅರ್ಥವನ್ನು ಒಳಗೊಂಡಿದ್ದು ಧಾರ್ಮಿಕವಾದ, ಸಾಮಾಜಿಕವಾದ, ಕೌಟುಂಬಿಕವಾದ ಕ್ರಿಯಾ ವಿಧಿಗಳಿಗೆ ಸಂಬಂಧಿಸಿದಂತೆ ತನ್ನದೇ ಆದ ಅಸ್ತಿತ್ವವನ್ನು ಹೊಂದಿದೆ. ಇಂಗ್ಲೀಷಿನ "Ritual" ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ "ಆಚರಣೆ" ಎಂಬ

ಪದವನ್ನು ಬಳಸಲಾಗುತ್ತದೆ. ಆಚರಣೆಯನ್ನು ಸಂಪ್ರದಾಯಕ್ಕಿಂತ ಭಿನ್ನವೆಂದು ಹೇಳಲಾಗುತ್ತದೆ. ಇದಕ್ಕೆ ಕಾರಣವಾದ ಭಿನ್ನಾಂಶಗಳೆಂದರೆ

೧. ಆಚರಣೆಯು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಹಾಗೂ ಪ್ರತಿಫಲಾಪೇಕ್ಷೆಯನ್ನು ಬಯಸುತ್ತದೆ.

೨. ಇದು ಹೆಚ್ಚಾಗಿ ಪ್ರಾದೇಶಿಕತೆಯನ್ನು ಬಿಂಬಿಸುತ್ತದೆ. ವೈಯಕ್ತಿಕತೆಯನ್ನು ಇಲ್ಲಿ ಕಡಿಮೆ ಕಾಣಬಹುದು. ಸಂಪ್ರದಾಯದಲ್ಲಿ ಹೆಚ್ಚಾಗಿ ಒಂದೇ ಸಮುದಾಯದ ಕುಟುಂಬಕ್ಕೆ ಸಂಬಂಧಿಸಿರುತ್ತದೆ.

ಆಚರಣೆಗಳು ವಸ್ತು, ಸ್ಥಿತಿ ಕಾಲಾನುಕ್ರಮಕ್ಕೆ ಅನುಗುಣವಾಗಿ ಅವಶ್ಯಕತೆಯನ್ನು ಆಧರಿಸಿ ರೂಪಾಂತರಗೊಳ್ಳುತ್ತದೆ. ಕೆಲವೊಮ್ಮೆ ತಿರಸ್ಕಾರಕ್ಕೆ ಒಳಗಾಗಿ ಗೌಣವಾಗುತ್ತದೆ. ಆಚರಣೆಗಳ ವಿಧಾನದಲ್ಲಿ ಪ್ರಾದೇಶಿಕವಾಗಿ, ಲಿಂಗಾನುಸಾರವಾಗಿ, ನಂಬಿಕೆಗಳಿಗೆ ಅನುಗುಣವಾಗಿ ವೈವಿಧ್ಯತೆಯನ್ನು ಕಾಣಬಹುದು. ಆಚರಣೆಯ ಹುಟ್ಟನ್ನು ಕುರಿತಂತೆ ಜಾನಪದ ಸ್ವರೂಪ ಮತ್ತು ಸಾಹಿತ್ಯ ಕೃತಿಯಲ್ಲಿ ಹೀಗೆ ಹೇಳಲಾಗಿದೆ. "ಬಹುತೇಕ ಆಚರಣೆಗಳು ಇಡೀ ಸಮುದಾಯದ ಕಾಲಮಾನದಲ್ಲಿ ಆತಂಕದ ಸಂದರ್ಭಗಳಿಗೆ ಸಂಬಂಧಿಸಿವೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ವ್ಯಕ್ತಿ ಬದುಕಿನಲ್ಲಾಗಲಿ, ಸಾಮಾಜಿಕ ಬದುಕಿನಲ್ಲಾಗಲೀ, ಅನೇಕ ರೀತಿಯ ಸಂಕ್ರಮಣಗಳು ನಡೆಯುತ್ತವೆ. ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಬದಲಾವಣೆಯಾಗುವುದು ಈ ಸಂಕ್ರಮಣದ ಲಕ್ಷಣ. ಇದೊಂದು ಮಹತ್ವದ ಬದಲಾವಣೆಯಾದ್ದರಿಂದ ಅದು ಸುಸೂತ್ರವಾಗಿ ಜರಗಬೇಕು. ಅದಕ್ಕೆ ಯಾವುದೇ ವಿಘ್ನವಾಗಬಾರದು ಎಂದು ಮನುಷ್ಯ ಕಾಳಜಿವಹಿಸುತ್ತಾನೆ. ಈ ಎಚ್ಚರ ಮತ್ತು ಕಾಳಜಿಗಳೇ ವಿವಿಧ ರೂಪದ ಆಚರಣೆಗಳ ಹುಟ್ಟಿಗೆ ಪ್ರೇರಕ" ಸಂಪ್ರದಾಯ ಆಚರಣೆಯಿಂದ ಭಿನ್ನವಾದದ್ದು. ಆಚರಣೆಯ ಒಂದು ಭಾಗವಾಗಿ ಸಂಪ್ರದಾಯ ಕಂಡುಬರುತ್ತದೆ ಎಂಬುದನ್ನು ಈ ಹೇಳಿಕೆಯು ಸ್ಪಷ್ಟಪಡಿಸುತ್ತವೆ. ಆಚರಣೆಯ ಚೌಕಟ್ಟಿನ ಒಂದು ಭಾಗವಾಗಿ ಸಂಪ್ರದಾಯ ರೂಪುಗೊಂಡಿದೆ. ಜನಪದ ಗೀತೆಗಳಲ್ಲಿ ಸಂಪ್ರದಾಯ ಪ್ರಮುಖ ವಸ್ತುವಾಗಿದೆ. ಇಂಗ್ಲೀಷಿನ 'Convention' ಎಂಬ ಪದಕ್ಕೆ ಮೊದಲಿನಿಂದ ಬಂದ 'ಪದ್ಧತಿ', 'ಕಟ್ಟಳೆ', 'ರೂಢಿ', 'ಬಳಕೆ', 'ನಡವಳಿಕೆ' ಎಂಬ ಅರ್ಥವನ್ನು ಹೇಳಲಾಗಿದೆ. ಯಾವುದೋ ಒಂದು ಸಮುದಾಯ ಅಥವಾ ಜನಾಂಗದಲ್ಲಿ ಅಂಗೀಕೃತವಾದ ಬಹಳ ಹಿಂದಿನಿಂದಲೂ ನಡೆಸಿಕೊಂಡು ಬಂದಿರುವ ಒಂದು ಪದ್ಧತಿಯೇ 'ಸಂಪ್ರದಾಯ'.

ಕಾಡು-ಮೇಡುಗಳನ್ನು ಅಲೆಯುತ್ತಾ ಗೆಡ್ಡೆ, ಗೆಣಸನ್ನು ತಿನ್ನುತ್ತಾ ಪ್ರಾಣಿಗಳಂತೆ ಜೀವನ ನಡೆಸುತ್ತಿದ್ದ ಮನುಷ್ಯ ತನ್ನ ನಿರಂತರ ಚಿಂತನೆಯ ಫಲವಾಗಿ ಹೊಸ ಅವಿಷ್ಕಾರಗಳಿಗೆ ಮುಂದಾದನು. ಇದು ಅವನಲ್ಲಿ ಒಂದು ರೀತಿಯ ಶಿಸ್ತುಬದ್ಧವಾದ ಅಲೋಚನಾ ಪೂರಿತವಾದ ಜೀವನಕ್ಕೆ ನಾಂದಿಯಾಯಿತು. ಅದುವರೆಗೂ ಇತರ ಪ್ರಾಣಿಗಳಂತೆಯೇ ಜೀವಿಸುತ್ತಿದ್ದನು. ನಂತರ ಅದಕ್ಕೆ

ಭಿನ್ನವಾದ ನಾಗರೀಕ ಜೀವನವನ್ನು ಪ್ರಾರಂಭಿಸಿದನು. ಪ್ರಾಣಿತನದಿಂದ-ಮನುಷ್ಯತನವನ್ನು ಪಡೆದುಕೊಳ್ಳುವ ಮಧ್ಯೆ ಸಾಕಷ್ಟು ಕಾಲಾವಕಾಶವನ್ನು ಬಳಸಿಕೊಂಡಿದೆ. ಈ ಸಂದರ್ಭದಲ್ಲಿ ಹಲವು ರೀತಿಯ ಪದ್ಧತಿಗಳು ಹುಟ್ಟಿಕೊಂಡಿವೆ. ಅದುವೇ "ಸಂಪ್ರದಾಯ" ಸಂಪ್ರದಾಯ ಒಂದು ಜನಾಂಗದ, ಸಮುದಾಯದ, ದೇಶದ ಸಾಂಸ್ಕೃತಿಕವಾದ ಬೆಳವಣಿಗೆಯ ಹಾದಿಯನ್ನು ಸೂಚಿಸುತ್ತದೆ. ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಾದ ಸ್ಥಿತ್ಯಂತರಗಳನ್ನು ಆಯಾ ಜನಾಂಗದ ಸಂಸ್ಕೃತಿಯನ್ನು ಸಂಪ್ರದಾಯ ಬಿಂಬಿಸುತ್ತದೆ. ಪ್ರತಿಯೊಂದು ಸಂಸ್ಕೃತಿಯಲ್ಲಿ ಅದರದ್ದೇ ಆದ ವಿಶಿಷ್ಟವಾದ ಸಂಪ್ರದಾಯಗಳಿರುತ್ತವೆ. ಪ್ರದೇಶ, ಲಿಂಗ, ಜಾತಿ, ವೃತ್ತಿ, ನಂಬಿಕೆಗಳಿಗೆ ಅನುಗುಣವಾಗಿ ಸಂಪ್ರದಾಯದಲ್ಲಿ ಒಂದು ಸಂಸ್ಕೃತಿಗಿಂತ ಇನ್ನೊಂದರಲ್ಲಿ ಭಿನ್ನತೆಯನ್ನು ವೈವಿಧ್ಯತೆಯನ್ನು ಕಾಣಬಹುದು.

ಉದಾ:-

ಅ. ಧರ್ಮವಾರು ಸಂಪ್ರದಾಯಗಳು :- ಹಿಂದೂ ಸಂಪ್ರದಾಯ, ಮುಸ್ಲಿಂ ಸಂಪ್ರದಾಯ, ಕ್ರಿಶ್ಚಿಯನ್ ಸಂಪ್ರದಾಯ ಇತ್ಯಾದಿ.

ಆ. ಜಾತಿವಾರು ಸಂಪ್ರದಾಯಗಳು : ಬ್ರಾಹ್ಮಣರ ಸಂಪ್ರದಾಯ, ಒಕ್ಕಲಿಗರ ಸಂಪ್ರದಾಯ, ಲಿಂಗಾಯಿತರ ಸಂಪ್ರದಾಯ, ಕುರುಬರ ಸಂಪ್ರದಾಯ ಇತ್ಯಾದಿ.

ಇ. ಪ್ರದೇಶವಾರು ಸಂಪ್ರದಾಯ : ಗ್ರಾಮೀಣ ಸಂಪ್ರದಾಯ, ಬುಡಕಟ್ಟು ಸಂಪ್ರದಾಯ, ನಗರ ಸಂಪ್ರದಾಯ ಇತ್ಯಾದಿ.

ಬದುಕಿನ ಪ್ರತಿಯೊಂದು ಹೆಜ್ಜೆಯಲ್ಲೂ ಸಂಪ್ರದಾಯ ಹಾಸುಹೊಕ್ಕಾಗಿದೆ. ತನಗಿಂತ ಭಿನ್ನವಾದುದರಿಂದ ಪ್ರತ್ಯೇಕತೆಯನ್ನು ಹೊಂದುವುದರಲ್ಲಿ ಸಂಪ್ರದಾಯ ಪ್ರಮುಖವಾದದ್ದು. ಇದು ಒಂದು ಸಣ್ಣ ಕ್ರಿಯೆಯಿಂದ ಹಿಡಿದು ದೇಶಿಯತೆಯವರೆಗೂ ವ್ಯಾಪಿಸಿದೆ. ಸಂಪ್ರದಾಯ ನಿಂತ ನೀರಲ್ಲ. ಹರಿಯುವ ನದಿಯಂತೆ. ಹಾಗಾಗಿ ಸಂಪ್ರದಾಯ ಯಾವುದೋ ಒಂದು ಕಾಲಘಟ್ಟದ ಜನಾಂಗಕ್ಕೆ ಸೀಮಿತವಾದುದಲ್ಲ. ಸದಾ ಮುಂದುವರೆಯುತ್ತಿರುತ್ತದೆ. ಸಂಪ್ರದಾಯಗಳು ಆಯಾ ಕಾಲದ ಪ್ರಭಾವ ಪ್ರೇರಣೆಗಳಿಗೆ ತಕ್ಕಹಾಗೆ ಬದಲಾವಣೆಯನ್ನು ಹೊಂದುತ್ತವೆ. ಇಂತಹ ಸಂದರ್ಭದಲ್ಲಿ ಹಿಂದಿನ ಸಂಪ್ರದಾಯ ಸ್ವಲ್ಪಮಟ್ಟಿಗೆ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಉದಾಹರಣೆಗೆ: ಬ್ರಿಟಿಷರ ಆಕ್ರಮಣನೀತಿ, ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರದ ಮೇಲೆ ಮಾತ್ರವಲ್ಲದೆ ಸಾಂಸ್ಕೃತಿಕ ರಂಗದ ಮೇಲೂ ಆಯಿತು. ಸಂಸ್ಕೃತಿಯ ಅಂಗವಾದ ಸಂಪ್ರದಾಯಗಳು ಇದರಿಂದ ಹೊರತಾಗಲಿಲ್ಲ. ಆಗ ಹಿಂದೂ ಸಂಪ್ರದಾಯದಲ್ಲಿ ಕೆಲವು ಆಚರಣೆಗಳಲ್ಲಿ ವಿರೋಧವನ್ನು ಹೊಂದಿದ್ದ ಮನಸ್ಸುಗಳು ಪಾಶ್ಚಾತ್ಯ ಸಂಪ್ರದಾಯವನ್ನು ಸ್ವೀಕರಿಸಲು ಮುಂದಾದವು. ಅನಂತರದಲ್ಲಿ

ಸಂಸ್ಕೃತಿ. ಸಂಪ್ರದಾಯ ಎಂಬ ಪದಗಳು ಸಮಾಜದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡು ಮನುಷ್ಯನ ಪ್ರತಿಯೊಂದು ಕ್ರಿಯೆಯನ್ನು ಈ ಪದಗಳಿಂದಲೇ ಗುರುತಿಸಲು ಪ್ರಾರಂಭವಾಯಿತು. ಇದು ಮಾನವನ ಸಾಂಸ್ಕೃತಿಕ ವಿಕಾಸದ ಹಂತಗಳನ್ನು ಗುರುತಿಸುವುದಕ್ಕೆ ಅಗತ್ಯವಾದ ಮಾಹಿತಿಗಳನ್ನು ಒದಗಿಸುತ್ತದೆ.

ಜಾನಪದ ಸಾಹಿತ್ಯ. ಸಂಸ್ಕೃತಿ, ಕಲೆಗಳ ದೃಷ್ಟಿಯಿಂದ ಶಿಷ್ಟಕ್ಕೆ ಮೂಲ. ದೈನಂದಿನ ಬದುಕಿನ ಆಗು–ಹೋಗುಗಳ, ಆಚರಣೆಗಳು, ಸಂಪ್ರದಾಯಗಳು ಇವು ಜನಪದ ಸಾಹಿತ್ಯದ ವಸ್ತುಗಳು. ಕಾಲ್ಪನಿಕ ಪ್ರಪಂಚದಲ್ಲಿ ಸಾಹಿತ್ಯ ಸೃಷ್ಟಿಗಿಂತ ನೈಜ ಬದುಕಿನ ಸಂಗತಿಗಳು ಸಾಹಿತ್ಯದಲ್ಲಿ ಹೊರ ಹೊಮ್ಮುತ್ತವೆ. ಬಹುಶಃ ಇದು ಸಾಹಿತ್ಯವೆಂದು ಸ್ವತಃ ಜಾನಪದಿಯರೇ ಭಾವಿಸಿರಲಿಕ್ಕಿಲ್ಲ. ಬದಲಾಗಿ ಸಂಪ್ರದಾಯದ ಹಾಡುಗಳ ಹಾಡುವಿಕೆಯನ್ನೇ ಒಂದು ಸಂಪ್ರದಾಯವಾಗಿ ಪಾಲಿಸುತ್ತಿದ್ದರು. ಜನಪದ ಸಾಹಿತ್ಯವನ್ನು ಶುದ್ಧ ಜಾನಪದ ಮತ್ತು ಶಿಷ್ಟ ಜಾನಪದವೆಂದು ವರ್ಗೀಕರಿಸಿಕೊಳ್ಳಲಾಗಿದೆ. ಜಾನಪದಲ್ಲಿ ಜನರಾಡುವ ಭಾಷೆ ಅನುಸರಿಸುವ ಸಂಪ್ರದಾಯ. ಆಚರಣೆಗಳು. ವೃತ್ತಿಗಳು ಎಲ್ಲವನ್ನು ಒಳಗೊಂಡು ಇಡಿಯಾಗಿ ಮಂಡಿಸುವಿಕೆ. ಬರವಣಿಗೆ ರೂಪುಗೊಳ್ಳುವುದಕ್ಕೆ ಮುಂಚೆ ಮನುಷ್ಯ ತನ್ನೊಳಗಿನ ಅನುಭವ ಅನಿಸಿಕೆಗಳನ್ನು ಹಂಚಿಕೊಳ್ಳಲು ಮಾತನ್ನು ಮಾಧ್ಯಮವನ್ನಾಗಿಸಿಕೊಂಡನು. ಕುಣಿಯುವುದು. ಹಾಡುವುದನ್ನು ಕಲಿತನು. ತನ್ನ ಪರಿಸರದ ಜೀವನವನ್ನೇ ಕಲಾತ್ಮಕವಾಗಿ ಹೇಳುತ್ತಾ ಮೌಖಿಕ ಸಾಹಿತ್ಯವನ್ನು ಸೃಷ್ಟಿಸಿದ. ಈಗಲೂ ಇದು ಗ್ರಾಮೀಣ. ಬುಡಕಟ್ಟು ಜನರಲ್ಲಿ ಮಾತ್ರ ಇದೆ. ಶುದ್ಧ ಜಾನಪದ ಸಾಹಿತ್ಯವಾಗಿದೆ ಎಂದು ಸಂಶೋಧಕರು. ವಿದ್ವಾಂಸರು. ವಿಶ್ವವಿದ್ಯಾಲಯಗಳು ಇದನ್ನು ಮಾತ್ರವೇ ಜನಪದ ಸಾಹಿತ್ಯ ಎಂದು ಪರಿಗಣಿಸಲಾಗಿತ್ತು. ಹಾಗಾಗಿ ಸಂಪ್ರದಾಯಗಳನ್ನು ಕುರಿತಾದ ಹಾಡುಗಳನ್ನು ಜಾನಪದ ಸಾಹಿತ್ಯದಿಂದ ದೂರದಲ್ಲೇ ಇಡಲಾಗಿತ್ತು. ಏಕೆಂದರೆ. ಗ್ರಾಮೀಣ ಪರಿಸರದಲ್ಲಿ ಹುಟ್ಟಿದ ಜನಪದ. ಸಾಹಿತ್ಯವು ಸಾಮಾಜಿಕವಾಗಿ. ಆರ್ಥಿಕವಾಗಿ ಕೃಷಿಯನ್ನು ಪ್ರಧಾನವಾಗಿಸಿಕೊಂಡು ಕೆಳಸ್ತರದ ಜೀವನವನ್ನು ನಡೆಸುವ ಜನರಲ್ಲಿ ಬಳಕೆಯಲ್ಲಿರುವಂತಹದ್ದು. ಇವರು ತಮ್ಮ ಕಾಯಕದ ವೇಳೆಯಲ್ಲಿ ಹಾಡುಗಳನ್ನು ಹಾಡುತ್ತಾರೆ. ಹಾಗೇ ಕಟ್ಟುತ್ತಾರೆ. ಶ್ರಮಜೀವಿಗಳಾದ್ದರಿಂದ ಕೆಲಸದಿಂದ ಒದಗುವ ಆಯಾಸವನ್ನು, ಬೇಸರವನ್ನು ಹಾಡಿನ ಮೂಲಕ ಹೋಗಲಾಡಿಸಿಕೊಳ್ಳುತ್ತಾ ಮರೆಯುತ್ತಾ. ದುಡಿಮೆಯಲ್ಲಿ ತೊಡಗುತ್ತಾರೆ. ಇದನ್ನು ಬಿಟ್ಟರೆ ಮದುವೆ. ಒಸಗೆ. ಪೂಜೆ ಸಂದರ್ಭದಲ್ಲಿ ಹಾಡುತ್ತಾರೆ. ಇಲ್ಲಿ ಸಾಮೂಹಿಕವಾಗಿ ಎಲ್ಲರೂ ಹಾಡಿನಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಶಿಷ್ಟ ಜಾನಪದವು ಸಾಮುದಾಯಿಕ ಗುಣವನ್ನು ಹೊಂದಿಲ್ಲ. ಜೊತೆಗೆ ಸಂಪ್ರದಾಯ ಹಾಡುಗಳ ಉದ್ದೇಶ ಬೇರೆಯಾಗಿದೆ. ಒಂದು ಸೀಮಿತವಾದ ಚೌಕಟ್ಟನ್ನು ಮಾತ್ರ ಸಂಪ್ರದಾಯದ ಹಾಡುಗಳು ಹೊಂದಿವೆ.

ಹೀಗಾಗಿ ಇದು ಶುದ್ಧ ಜಾನಪದವಲ್ಲ ಎನ್ನಲಾಗಿತ್ತು. ಇದರಲ್ಲಿ ಸಾಮುದಾಯಿಕ ಹಾಗೂ ಸಾರ್ವತ್ರಿಕ ಗುಣವಾಗಲಿ ಸ್ವೀಕಾರ ಪ್ರಕ್ರಿಯೆಯಾಗಲಿ ನಡೆಯುವುದು ಕಡಿಮೆ. ಕೇವಲ ಒಂದು ವರ್ಗದ ಗೃಹಿಣಿಯರಲ್ಲಿ ಮಾತ್ರ ಬಳಕೆಗೊಳ್ಳುವಂತಹದ್ದು ಎಂಬ ಅಪವಾದವಿತ್ತು. ಇತ್ತೀಚಿನ ದಿನಗಳಲ್ಲಿ ಇದನ್ನು ಅಲ್ಲಗಳೆದ ವಿದ್ವಾಂಸರು ಸಂಪ್ರದಾಯದ ಹಾಡುಗಳಿಗೆ ಜನಪದ ಸಾಹಿತ್ಯದಲ್ಲಿ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಸಂಪ್ರದಾಯದ ಹಾಡುಗಳು ಹೆಚ್ಚಾಗಿ ಕಂಡು ಬರುವುದು ಅವಿದ್ಯಾವಂತ ಶಿಷ್ಟ ಬ್ರಾಹ್ಮಣ ಸ್ತ್ರೀಯರಲ್ಲಿ. ಇವುಗಳಲ್ಲಿ ಕೊಡು-ಕೊಳ್ಳುವಿಕೆ ಇಲ್ಲದಿದ್ದರೂ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದು ಬಂದಿದೆ. ಇತರ ಜನಪದ ಸಾಹಿತ್ಯದಂತೆ ಸಂಪ್ರದಾಯ ಹಾಡುಗಳು ಕರ್ತೃಗಳು ಬಹುಪಾಲು ಅಜ್ಞಾತವಾಗಿಯೇ ಉಳಿದಿದ್ದಾರೆ. ಒಂದೋ-ಎರಡೋ ಸಂದರ್ಭಗಳಲ್ಲಿ ಕರ್ತೃಗಳನ್ನು ಕಾಣಬಹುದು. ಅವರನ್ನು ಓದುಗರಿಗೆ ಪರಿಚಯಿಸುವಂತ ಮಹತ್ವದ ಕೆಲಸವನ್ನು ವಾಗೀಶ್ವರಿಶಾಸ್ತ್ರಿಯವರು ಮಾಡಿದ್ದಾರೆ.

ಸಂಪ್ರದಾಯದ ಹಾಡುಗಳು ಶುದ್ಧ ಜನಪದ ಸಾಹಿತ್ಯದಂತೆ ಮೌಖಿಕ ಪರಂಪರೆ. ಅಜ್ಞಾತ ಕರ್ತೃತ್ವ. ಪ್ರಸರಣಗುಣ. ಸಾಮೂಹಿಕ ಪುನರ್ಸೃಷ್ಟಿ ಹಾಗೂ ಗೀತೆ ಕಥಾಪ್ರಕಾರಗಳನ್ನು ಹೊಂದಿದೆ ಎಂದು ಡಾ.ಜೀ.ಶಂ.ಪರಮಶಿವಯ್ಯನವರು ಸಂಪ್ರದಾಯದ ಹಾಡುಗಳು, "ಹೃದಯ ಸಂಪುಟ" ಗ್ರಂಥವನ್ನು ಕುರಿತು ತಮ್ಮ ಅಭಿಪ್ರಾಯವನ್ನು ಹೇಳುವಲ್ಲಿ ಇದು 'ಶಿಷ್ಟಜಾನಪದ ಸಾಹಿತ್ಯ' ಎಂದು ಹೇಳಿದ್ದಾರೆ.

ಒಂದು ನಿರ್ದಿಷ್ಟ ಜನಾಂಗದ ಸಾಮಾಜಿಕ ಸಂಬಂಧಗಳು, ಆಚರಣೆಗಳು, ವಿಧಿವಿಧಾನಗಳು. ಸಾಂಸ್ಕೃತಿಕ ಅಂಶಗಳನ್ನು ತನ್ಮೂಲಕ ಸಂಪ್ರದಾಯದ ಹಾಡುಗಳು ಬಿಂಬಿಸುತ್ತವೆ. ಆಯಾಯ ಸಂದರ್ಭಕ್ಕೆ ಆಚರಣೆಗೆ ಅನುಗುಣವಾಗಿ ಹಾಡುಗಳನ್ನು ರಚಿಸುತ್ತಾರೆ. ಬೆಳಗ್ಗೆ ಎದ್ದಾಗಿನಿಂದ ಹಿಡಿದು ರಾತ್ರಿ ಮಲಗುವವರೆಗಿನ ನಡುವೆ ನಡೆಯುವ ಕ್ರಿಯೆಗಳು ಈ ಸಾಹಿತ್ಯದ ವಸ್ತುವಾಗಿ ಬಳಕೆಗೊಳ್ಳುತ್ತದೆ. ಸಂಪ್ರದಾಯದ ಹಾಡುಗಳನ್ನು ಹಾಡುವವರು ಮಹಿಳೆಯರು.

ಹೆಂಗಸರಿಗೆ-ಪುರುಷರಂತೆ ಹೊರಗಿನ ಪ್ರಪಂಚವನ್ನು ಅರಿಯುವಲ್ಲಿ ಅವರಿಗೆ ಅವಕಾಶಗಳೇ ಇರುತ್ತಿರಲಿಲ್ಲ. ಅದರಲ್ಲೂ ವೈದಿಕ ಸಂಪ್ರದಾಯದ ಮಹಿಳೆಯರಲ್ಲಿ ಇದು ಹೆಚ್ಚು. ಏಕೆಂದರೆ ಬಾಲ್ಯದಲ್ಲೇ ವಿವಾಹ ಮಾಡುವುದು, ಚಿಕ್ಕಂದಿನಿಂದಲೇ ಸಂಸಾರದ ಜವಾಬ್ದಾರಿ. ಒಂದು ವೇಳೆ ವಿಧವೆಯಾದರೆ ನಾಲ್ಕು ಗೋಡೆಗಳ ಮಧ್ಯೆ ಬಂಧನ. ಹೀಗೆ ಬೇರೆ ಬೇರೆ ಕಾರಣಗಳಿಂದ ಗೃಹಬಂಧನವೇ ಸಾಮಾನ್ಯವಾಗಿ ಇರುತ್ತಿತ್ತು. ಇದರಿಂದಾಗಿ ಗಂಡ, ಮಕ್ಕಳು, ಅತ್ತೆ, ಮಾವ, ಸಂಬಂಧಿಕರು, ಆಚರಣೆಗಳು, ಪದ್ಧತಿಗಳು ಇವುಗಳೊಂದಿಗಿನ ಒಡನಾಟವಷ್ಟೇ ಇವಳ ಹಾಡಿನ ವಸ್ತುವಾಯಿತು. ದೇವರನ್ನು ಕುರಿತು ಹಾಡುವುದು, ಗಂಡು-ಹೆಣ್ಣನ್ನು ಹಸೆಗೆ ಕರೆತರುವಾಗ.

ಸಣ್ಣಮಕ್ಕಳನ್ನು ಹಸೆಗೆ ಕರೆತರುವಾಗ. ದೇವರಿಗೆ, ವಧು–ವರರಿಗೆ, ಚಿಕ್ಕಮಕ್ಕಳಿಗೆ ಆರತಿ ಮಾಡುವಾಗ, ಮದುವೆ ಸಂದರ್ಭದಲ್ಲಿ. ಹಬ್ಬ–ಹರಿದಿನಗಳಲ್ಲಿ. ಹೀಗೆ ವಿವಿಧ ಸಾಂಪ್ರದಾಯಿಕ ಆಚರಣೆಗಳ ವೇಳೆಯಲ್ಲಿ ಹಾಡುತ್ತಿದ್ದ ಹಾಡನ್ನೇ "ಸಾಂಪ್ರದಾಯಿಕ ಹಾಡು" ಎಂದು ಕರೆಯಲಾಯಿತು.

ವೈದಿಕ ಬ್ರಾಹ್ಮಣರಲ್ಲಿ ಮಡಿ–ಮೈಲಿಗೆ. ಆಚಾರ–ವಿಚಾರ, ಸಂಪ್ರದಾಯಗಳು ಹೆಚ್ಚಾಗಿದ್ದು ವಾಗೀಶ್ವರಿಯವರು ರಚಿಸಿರುವ 'ಹೃದಯ ಸಂಪುಟ' ಗ್ರಂಥದಲ್ಲಿ ವೈದಿಕ ಸಂಸ್ಕೃತಿಯನ್ನು ತಿಳಿಸುವ ಅಗಾಧವಾದ ಸಂಪ್ರದಾಯದ ಹಾಡುಗಳಿವೆ. ವಾಗೀಶ್ವರಿ ಶಾಸ್ತ್ರಿಯವರು ಮಹಿಳೆಯರಿಗೆಂದೇ ಸೃಷ್ಟಿಸಿದ ಸಂಪ್ರದಾಯ ಮತ್ತು ಸಂಪ್ರದಾಯದ ಹಾಡುಗಳ ಹುಟ್ಟನ್ನು ಕುರಿತು ಹೀಗೆ ಹೇಳುತ್ತಾರೆ. "ಪರಕೀಯರ ಪ್ರವೇಶದಿಂದ ನಮ್ಮ ದೇಶದಲ್ಲಿ ಸ್ತ್ರೀ ಸ್ವಾತಂತ್ರ್ಯ ಅಳಿದು, ಅವಳನ್ನೂ, ಅವಳ ಮಾನವನ್ನು ರಕ್ಷಿಸುವ ಸಲುವಾಗಿ ಅನೇಕ ಕಟ್ಟುಕಟ್ಟಳೆಗಳು ಪ್ರಾಪ್ತವಾಯಿತು. ಇದರಿಂದ ನಮ್ಮ ಹಿಂದಿನ ಮಹಿಳೆ ಬರುಬರುತ್ತಾ ಮನೆಯಲ್ಲಿಯೇ ಸೆರೆಯಾಗುವ ಸ್ಥಿತಿಯುಂಟಾಯಿತು. ಹೀಗೆ ವಿದ್ಯಾರ್ಜನೆಯಿಲ್ಲದೆ ಅಜ್ಞಾನಿಯೂ. ಅಸುಖಿಯೂ ಆಗಿ ವ್ಯರ್ಥ ಜೀವನ ನಡೆಸಿ ಶಾಂತಿ ಸುಖಗಳಿಗೆ ಎರವಾಗಿ. ಅಧೋಗತಿಗೆ ಇಳಿಯುವ ಗತಿಯಾಯಿತು. ಅವಳ ಈ ಬವಣೆಯನ್ನು ಕಂಡ ಹಿರಿಯರು ಸಂಸಾರದ ಹೊಣೆ ಹೊತ್ತ ಆಕೆಗೂ. ಜನರಂಜನೆ. ಮನರಂಜನೆ ಅವಶ್ಯಕತೆ ಇದೆಯೆಂದು ಚಿಂತಿಸಿ ಅವಳ ಜೀವನಕ್ಕೊಳಪಡುವ ಅಂದರೆ ಗೃಹಧರ್ಮಕ್ಕೆ ಅನುಗುಣವಾಗಿ ಕೆಲವು ಆಚರಣೆಗಳನ್ನು ತಂದರು. ಈ ಆಚಾರ, ಆಚರಣೆಗಳ ಸಮೂಹವೇ ಸಂಪ್ರದಾಯವೆನ್ನಬಹುದು[೧]"

"ಸಂಪ್ರದಾಯಕ್ಕೆ ಬದ್ಧವಾಗಿ ಯಾವ ಯಾವ ಸಂದರ್ಭದಲ್ಲಿ ಹೇಗೆ ಹೇಗೆ ನಡೆದುಕೊಳ್ಳಬೇಕು. ಏನೇನು ಆಚರಸಿಬೇಕೋ. ಅವುಗಳನ್ನು ಅನುಸರಿಸಿ ಅದರಂತೆ ನಡೆಸಲು ಸೂಚನೆಗಳೋ ಎಂಬಂತೆ ಅನೇಕ ಹಾಡುಗಳು ರಚಿತವಾಗಿವೆ. ಇವುಗಳಲ್ಲಿ ಸಾಮಾನ್ಯವಾಗಿ ಸದಾಚಾರ ಸನ್ನಡತೆಯ ಗೃಹಿಣಿಯರೇ ಆಸಕ್ತಿವಹಿಸಿ ಪಾತ್ರವಹಿಸುವವರಾದ್ದರಿಂದ ಅಂತಹ ಸಂಪ್ರದಾಯಗಳನ್ನು ಬಲ್ಲ ಗೃಹಿಣಿಯರೂ ತಮ್ಮ ಅನುಭವ, ಅನಿಸಿಕೆಗಳನ್ನು ಹಾಡಿನ ರೂಪದಲ್ಲಿ ರಚಿಸಿ ಬೆಳಕಿಗೆ ತಂದಿದ್ದಾರೆ.[೨]"

ಸಂಪ್ರದಾಯದ ಹಾಡುಗಳ ಹುಟ್ಟಿಗೆ ಮೇಲಿನ ಅಂಶಗಳೇ ಕಾರಣ ಎಂದು ಸಂಪೂರ್ಣವಾಗಿ ನಂಬಲಾಗದು. ಇದು ಕಾರಣಗಳಲ್ಲಿ ಒಂದು ಎಂದು ಭಾವಿಸಬಹುದು. ಏಕೆಂದರೆ ಇದು ಕೇವಲ ಶಿಷ್ಟ ಸಂಪ್ರದಾಯದ ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ವಿಷಯ ಮಾತ್ರವಲ್ಲ. ಬೇರೆ ವರ್ಗದ ಹೆಣ್ಣುಮಕ್ಕಳಿಗೆ ಪರಕೀಯರಿಂದ ತೊಂದರೆ ಆಗುತ್ತಿರಲಿಲ್ಲವೇ? ಬೇರೆ ವರ್ಗಗಳಲ್ಲಿ ಹೆಣ್ಣು ಮಕ್ಕಳಿಗಾಗಿಯೇ ಎಂದು ಸೃಷ್ಟಿಸಲಾದ ಸಂಪ್ರದಾಯ ಹಾಡುಗಳು ಆಚರಣೆ ಕಡಿಮೆ. ಬದಲಿಗೆ, ದುಡಿಮೆ, ಆಚರಣೆಗಳಿಗೆ ಸಂಬಂಧಿಸಿದಂತೆ ಹಾಗೂ ಸಂಪ್ರದಾಯವನ್ನು ಸಹ ಒಳಗೊಂಡಂತೆ

ಹಾಡುಗಳಿವೆ. ಇಲ್ಲಿ ಕೃಷಿಸಂಬಂಧಿಸಿತ ವ್ಯಕ್ತಿಗಳು ಇರುತ್ತಾರೆ. ಇಲ್ಲಿ ಗಂಡು ಹೆಣ್ಣುಗಳಿಬ್ಬರೂ ಹಾಡುವಿಕೆಯಲ್ಲಿ ಪಾಲ್ಗೊಳ್ಳುತ್ತಾರೆ. ಗ್ರಾಮೀಣ ಪರಿಸರದ ಹೊಲಗದ್ದೆಗಳಲ್ಲಿ ಶುದ್ಧ ಜನಪದ ಸಾಹಿತ್ಯ ನಳನಳಿಸುತ್ತದೆ. ಒಂದು ವೇಳೆ ವಾಗೀಶ್ವರಿಯವರು ಹೇಳಿದಂತೆ ಪರಕೀಯರ ಆಕ್ರಮಣದ ಕಾಲದಲ್ಲಿ ಸಂಪ್ರದಾಯದ ಹಾಡುಗಳು ರಚನೆಯಾಯಿತು ಎನ್ನುವುದಾದರೆ, ಸಂಪ್ರದಾಯ ಹಾಡುಗಳ ರಚನೆ ಕಾಲ ಇತ್ತೀಚಿನದು. ತೀರಾ ಹಿಂದಿನದು ಎಂದು ಹೇಳಲು ಸಾಧ್ಯವಿಲ್ಲ. ಸಾಕಷ್ಟು ಸಂಪ್ರದಾಯಗಳು ಹುಟ್ಟಿರುವುದು ನಂಬಿಕೆಗಳ ಹಿನ್ನೆಲೆಯಲ್ಲಿ. ಸಂಪ್ರದಾಯದ ಹಾಡುಗಳಲ್ಲಿ ಬಳಕೆಯಾಗಿರುವ ಸಂಸ್ಕೃತ ಪದಗಳು, ಭಾಷೆ, ಆಚರಣೆಗಳು ಗಮನಿಸಿದಾಗ ತೀರಾ ಹಿಂದಿನಿಂದಲೇ ರಚಿಸಲಾಗಿದೆ ಎಂದು ತಿಳಿದುಬರುತ್ತದೆ. ಜನಪದ ಸಾಹಿತ್ಯವು ಸದಾ ಪುನರ್ ಸೃಷ್ಟಿಗೊಳ್ಳುವ ಗುಣವನ್ನು ಹೊಂದಿರುವುದರಿಂದ ಕಾಲಾಂತರಗಳಲ್ಲಿ ಮುಂದುವರೆದು ಕೊಂಡುಬಂದಿದೆ. ತಮ್ಮ ಬದುಕು ಆದಷ್ಟು ಸುಸೂತ್ರವಾಗಿ ನಡೆಯಲಿ ಎಂಬ ನಂಬಿಕೆಯಿಂದಲೂ ಕೆಲವೊಂದು ಆಚರಣೆಗಳನ್ನು ತಂದಿರಬಹುದು. ಉದಾಹರಣೆ: ವ್ರತದ ಹಾಡುಗಳು, ಬಸಿರು-ಬಾಣಂತನದ ಹಾಡುಗಳು, ನಿತ್ಯಪಾರಾಯಣದ ಹಾಡುಗಳು ಇತ್ಯಾದಿ.

ಸಂಪ್ರದಾಯದ ಹಾಡುಗಳು ಹೆಚ್ಚಾಗಿ ಕಂಡು ಬರುವಂತಹದ್ದು ಶಿಷ್ಟ ಸಂಪ್ರದಾಯದವರಲ್ಲಿ. ಮಡಿ-ಮೈಲಿಗೆಯ ದೃಷ್ಟಿಯಿಂದ ಇದು ಇತರರಿಗೆ ತಲುಪಲು ಸಾಧ್ಯವಿರಲಿಲ್ಲ. ಎಲೆಯ ಹಿಂದೆ ಅವಿತಿರುವ ಕಾಯಿಯಂತೆ ಇದ್ದ ಹಾಡುಗಳನ್ನು ವಾಗೀಶ್ವರಿಶಾಸ್ತ್ರಿಯವರು 'ಹೃದಯ ಸಂಪುಟ' ಎಂಬ ಗ್ರಂಥದ ಮೂಲಕ ಸಂಪ್ರದಾಯ ಹಾಡುಗಳನ್ನು ಸಾಹಿತ್ಯ ಪ್ರೇಮಿಗಳಿಗೆ ನೀಡಿದ್ದಾರೆ. ಒಂದು ಜನಾಂಗದ ಸಂಸ್ಕೃತಿಯನ್ನು ರಕ್ಷಿಸುವಲ್ಲಿ ಶ್ರಮಿಸಿದ್ದಾರೆ. ಮಹಿಳೆಯರನ್ನು ದೃಷ್ಟಿಕೋನದಲ್ಲಿಟ್ಟು ಕೊಂಡು ರಚಿಸಲಾಗಿ, ಈ ಹಾಡುಗಳು ಒಂದು ಬೃಹತ್ ಗ್ರಂಥವಾಗಿವೆ. ಪ್ರಧಾನವಾಗಿ ಸಂಪ್ರದಾಯ ಹಾಡುಗಳ ಮಹತ್ವ, ಅವಶ್ಯಕತೆಯನ್ನು ಈ ಅಧ್ಯಾಯದಲ್ಲಿ ವಿವಿಧ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗುತ್ತದೆ.

ಸಂಪ್ರದಾಯ ಎಂದಾಕ್ಷಣ ನೆನಪಿಗೆ ಬರುವುದು ಒಂದು ನಿರ್ದಿಷ್ಟ ಜನಾಂಗದವರಲ್ಲಿ ಅನುಸರಿಸುವ, ಆಚರಿಸುವ ಪದ್ಧತಿಗಳು, ಬ್ರಾಹ್ಮಣ ಸಂಪ್ರದಾಯದಲ್ಲಿ ಇರುವ ಸಂಪ್ರದಾಯಗಳನ್ನು ಕುರಿತಾದ ಹಾಡುಗಳನ್ನು ಹೀಗೆ ವಿಂಗಡಿಸಬಹುದು.

೧. ಮಾನವರು ಹುಟ್ಟಿದಾಗಿನಿಂದ ಹಿಡಿದು ಸಾಯುವರೆಗೆ ಆಚರಿಸುವ ವಿವಿಧ ಶಾಸ್ತ್ರದ ಹಾಡುಗಳು. ಇದನ್ನು ಅಕ್ಕರಾಸ್ತೆಯ ಹಾಡುಗಳು ಎನ್ನಲಾಗುತ್ತದೆ.

೨. ದೇವತಾ ಕಾರ್ಯಗಳಿಗೆ ಸಂಬಂಧಿಸಿದಂತ ಹಬ್ಬ-ಹರಿದಿನಗಳ ಹಾಡುಗಳು

೩. ವ್ರತ ಕಥೆಗಳಿಗೆ ಸಂಬಂಧಪಟ್ಟಂತೆ ಸ್ವಲ್ಪ ವಿಸ್ತಾರವಾದ ಹಾಡುಗಳು.

ಅಕ್ಕರಾಸ್ತೆಗಾಗಿ ರಚಿಸಿದ ಶಾಸ್ತ್ರದ ಹಾಡುಗಳು :-

ಇಲ್ಲಿ ಮನುಷ್ಯನ ಹುಟ್ಟಿದಾಗಿನಿಂದ ಹಿಡಿದು ಮರಣದವರೆಗೆ ಅನುಸರಿಸುವ ಮದುವೆ. ಮುಂಜಿ. ಬಸಿರು. ಬಾಣಂತನ. ಋತುಸಂಸ್ಕಾರ. ಹಸೆಗೆ ಸಂಬಂಧಿಸಿದಂತ ಅನೇಕ ಶಾಸ್ತ್ರಗಳನ್ನು ಸಂಪ್ರದಾಯ ಹಾಡುಗಳ ಮೂಲಕ ಹಾಡಲಾಗುತ್ತಿತ್ತು. ಇವುಗಳಲ್ಲಿ ಆರತಿಯ ಹಾಡುಗಳು ಪ್ರಮುಖವಾದದ್ದು. ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಹಲವು ಒಳ ಹಂತಗಳನ್ನು ಕಾಣಬಹುದು.

ಅ. ಹಸೆಗೆ ಕರೆತರುವ ಹಾಡು :-

ಹಸೆಗೆ ಕರೆತರುವ ಹಾಡುಗಳು ಸಂಪ್ರದಾಯ ಹಾಡುಗಳಲ್ಲಿ ಪ್ರಮುಖಸ್ಥಾನವನ್ನು ಹೊಂದಿದೆ. ಬಹಳ ಹಿಂದಿನಿಂದಲೂ ಕೆಲವೊಂದು ವಿಶೇಷ ಸಂದರ್ಭದಲ್ಲಿ ಮದುವೆಯಾಗುತ್ತಿರುವ ಗಂಡು-ಹೆಣ್ಣುಗಳನ್ನು ಚಿಕ್ಕ ಮಕ್ಕಳನ್ನು ಹಸೆಗೆ ಕರೆತರುವ ಪದ್ಧತಿ ರೂಢಿಯಲ್ಲಿದೆ. ಹಸೆ ವೇದಿಕೆಗಾಗಿಯೇ ಮನೆಯಲ್ಲಿ ನಿರ್ದಿಷ್ಟ ಜಾಗವನ್ನು ಮೀಸಲಿಡಲಾಗುತ್ತಿತ್ತು. ಆ ಜಾಗವನ್ನು ರಂಗೋಲಿಯಿಂದ ಸಿಂಗರಿಸಿ. ಅಲ್ಲಿ ಮಣೆ ಹಾಕಿ ಅದರ ಮೇಲೆ ಬಟ್ಟೆಯನ್ನು ಹಾಸಲಾಗುತ್ತದೆ. ಈಗಾಗಲೇ ನಿರ್ಧರಿಸಲ್ಪಟ್ಟಿದ್ದ ವ್ಯಕ್ತಿಯನ್ನು ಮಾತ್ರ ಅಲ್ಲಿ ಕೂರಿಸಲಾಗುತ್ತದೆ. ಆ ವ್ಯಕ್ತಿಗಳು ಕೆಲವು ನಿಯಮಗಳನ್ನು ಅಂದು ಪಾಲಿಸಬೇಕಾಗಿರುತ್ತಿತ್ತು. ಇತರ ವ್ಯಕ್ತಿಗಳಿಗಿಂತ ಹೆಚ್ಚು ಕಾಳಜಿ. ಪ್ರಾಮುಖ್ಯತೆ ಆ ವ್ಯಕ್ತಿಗಳಿಗೆ ನೀಡಲಾಗುತ್ತದೆ. ಅವರನ್ನು ದೈವತ್ವದೊಂದಿಗೆ ಹೋಲಿಸಿ ಕಾಣಲಾಗುತ್ತದೆ. ಹಸೆಗೆ ಕೂರುವ ವ್ಯಕ್ತಿ ಗಂಡಾದರೆ ರಾಮ. ಕೃಷ್ಣ. ಶಿವನ ಹೆಸರಿನಿಂದ ಹಸಗ ಕರೆಯುತ್ತಾ. ಹೆಣ್ಣಾದರೆ ಲಕ್ಷ್ಮೀ. ಪಾರ್ವತಿ. ಸರಸ್ವತಿ ಮುಂತಾದ ದೇವರುಗಳ ಹೆಸರಿನಿಂದ ಹಸೆಗೆ ಕರೆಯುತ್ತಾ ಅವರಲ್ಲಿನ ಆದರ್ಶಗುಣಗಳು ಹಸೆಯಲ್ಲಿ ಕೂರುವ ವ್ಯಕ್ತಿಗೆ ಲಭಿಸಲಿ ಎಂದು ಹಾರೈಸಲಾಗುತ್ತದೆ. ಈ ಹಾಡುಗಳಿಗೆ ರಾಮಾಯಣ. ಮಹಾಭಾರತವನ್ನು ವಸ್ತುವಾಗಿ ಬಳಸಿಕೊಳ್ಳಲಾಗಿದೆ. ಇದು ವ್ಯಕ್ತಿಯು ತಾನು ಎದುರುಗೊಳ್ಳಲು ಹೊರಟಿರುವಂತಹ ಮದುವೆ. ಉಪನಯನ. ಇತ್ಯಾದಿ ಸಂದರ್ಭವನ್ನು ಯಾವುದೇ ಹಿಂಜರಿಕೆಯಿಲ್ಲದೆ ನಿರ್ಭೀತಿಯಿಂದ ಸ್ವೀಕರಿಸಲು ಮಾನಸಿಕವಾಗಿ ಸ್ಫೂರ್ತಿಯನ್ನು ನೀಡುತ್ತಿದ್ದವು. ಹೆಣ್ಣುಮಕ್ಕಳನ್ನು ಹಸೆಗೆ ಕರೆತರುವ ಹಾಡುಗಳಲ್ಲಿ ಶಾರದಾಂಬೆ. ಭಾಮಿನಿ. ಗೌರಿ. ಸೀತೆಯರ ಗುಣ ಅವತಾರಗಳನ್ನು ಹಾಡಿ ಹೊಗಳುತ್ತಾರಾದರೂ, ಅವರು ಹೇಳುತ್ತಿರುವುದು ಹಸೆ ಮೇಲೆ ಕೂತ ವ್ಯಕ್ತಿಗೆ ಎಂಬುದನ್ನು ಮರೆಯುವಂತಿಲ್ಲ.

ಉದಾಹರಣೆಗೆ: ಶಾರದಾಂಬೆ ಬಾರೆ ಪೀಠಕ್ಕೆ । ಓ

ಸಾರ ಸಾಕ್ಷಿಯೇ ॥ಪ॥

ಸೃಷ್ಟಿಗಧಿಕ ಶೃಂಗೇರಿ ಪುರದಲಿ

ಶ್ರೇಷ್ಠಳೆನಿಸಿದ ಕರ್ತೃ ಜನನಿಯೆ ।

ಭಕ್ತಾಜನರಿಗೆ ನೀ । ಮುಕ್ತಿಕೊಡುವಂಥ

ಹಸ್ತದಿ ಪುಸ್ತಕ ।ಶಿಸ್ತಲಿ ಪಿಡಿದಿಹ

ಮೇಲಿರುವ ಹಾಡುಗಳ ಸಾಲು ವಿದ್ಯಾದಿದೇವತೆ ಸರಸ್ವತಿಯನ್ನು ಕುರಿತ ವರ್ಣನೆಯಾಗಿದೆ. ಸೃಷ್ಟಿಯಲ್ಲಿ ಶೃಂಗೇರಿ ವಿಶಿಷ್ಟವಾದದ್ದು. ಸೃಷ್ಟಿಯಲ್ಲಿ ಶ್ರೇಷ್ಠಳು ಎನಿಸಿದಂತಹ ಶಾರದಾಂಬೆ ನಿನ್ನ ಭಕ್ತರನ್ನು ಹರಸು ಎಂದೆಲ್ಲಾ ವರ್ಣಿಸಲಾಗಿದೆ. ಇಂತಹ ಹಾಡುಗಳನ್ನು ಹಸೆಯಲ್ಲಿ ಕೂರುವವರಿಗೆ ಹೇಳುತ್ತಾರೆ. ಎಂದರೆ ಅವರನ್ನು ಸಹ ದೈವರೂಪದಲ್ಲಿ ಕಾಣುತ್ತಾರೆ ಎಂದು ಅರ್ಥವಾಗುತ್ತದೆ.

ಗಂಡು ಮಕ್ಕಳನ್ನು ಹಸೆಗೆ ಕರೆತರುವ ಹಾಡು

ಗೋವಿಂದ ಗೋವಿಂದ । ಬಾರೆಲೊ ಹಸೆಗೆ ನೀ

ಭಾಮೆಯರು ಕರೆಯುವರು ॥ ಪ॥

ಗೋಕುಲದೊಳು ನೀ । ಗೋವುಗಳ ಕಾಯ್ದವನೇ

ಗೋಪ ಸ್ತ್ರೀಯರ ಕೂಡೆ । ನಲಿದಾಡುವವನೇ ।

ಶ್ರೀ ಪತಿ ಅರಸನೇ । ರುಕ್ಮಿಣಿಲೋಲನೇ॥

ಮಾಧವನೆ ಬಾರೆಂದು । ಹಸೆಗೆ ಕರೆಯುವರೂ ॥

ಇಲ್ಲಿ ಶ್ರೀಕೃಷ್ಣನ ನಾನಾ ರೂಪಗಳನ್ನು, ಲೀಲೆಗಳನ್ನು, ಹಾಡಿಹೊಗಳಲಾಗಿದೆ. ಹಸೆಯಲ್ಲಿ ಕೂತ ವ್ಯಕ್ತಿಯು ಕೃಷ್ಣನ ಹಾಗೆ ಬುದ್ಧಿಯಲ್ಲಿ ಚಾತುರ್ಯವನ್ನು, ಪ್ರೌಢಿಮೆಯನ್ನು ಗಳಿಸಲಿ ಎಂಬ ಬಯಕೆಯ ಹಾಡುಗಳನ್ನು ಹಾಡುವವರದ್ದಾಗಿರುತ್ತದೆ. ಯಾವುದೇ ವ್ಯಕ್ತಿಯು ದೈವತ್ವಕ್ಕೇರಲು ಸಾಧ್ಯವಿಲ್ಲ. ಆದರೆ ತನ್ನನ್ನು ಆ ರೀತಿ ಹೊಗಳಿ ಹಾಡಿದಾಗ ತಾನು ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂಬ ಯೋಚನೆ ಬರದೆ ಇರಲಾರದು. ಈ ನಿಟ್ಟಿನಲ್ಲಿ ಹಸೆಗ ಕರೆಯುವ ಹಾಡು ಪ್ರಾಯೋಗಿಕ ಅಸ್ತ್ರವಾಗಿದೆ.

ಮಕ್ಕಳನ್ನು ಹಸೆಗೆ ಕರೆತರುವ ಹಾಡು:–

ಯಾಕೆ ಕಿರ್ಕಿ ಮಾಡ್ತಿ ರಂಗ । ಎಷ್ಟು ಛಲ ಹೊರುತೀ ॥

ಮಕ್ಕಳು ಮಾಣಿಕ್ಯವಲ್ಲವೆ ರಂಗಯ್ಯ ।

ಬಟ್ಟಲು ಬಾರಿಸಲೇನೋ ಶ್ರೀ । ಕೃಷ್ಣಾ ಬಾ ಹಸೆಗೇ–ಕರೆದಾರು ॥

ಚಿಕ್ಕಮಕ್ಕಳನ್ನು ಒಂದೆಡೆ ಕೂರಿಸುವುದು ಕಷ್ಟ. ಪ್ರತಿಯೊಂದನು ಕಲಿತು. ಮಾಡಿ ಸಂತೋಷಪಡುವ ವಯಸ್ಸಾದ್ದರಿಂದ ಅದು ತನ್ನದೇ ಆದ ಪ್ರಪಂಚನ್ನು ಸೃಷ್ಟಿಸಿಕೊಂಡು. ಅದರಲ್ಲೇ ತಲ್ಲೀನನಾಗುತ್ತಾ ಹಠ, ಚಂಡಿಯನ್ನು ಮಾಡುವುದು ಸ್ವಾಭಾವಿಕ. ಇಂತಹ ಸಂದರ್ಭದಲ್ಲಿ ಹಾಡುಗಳ ಮೂಲಕ ಮಗುವನ್ನು ಸಮಾಧಾನ ಪಡಿಸಲು ಯತ್ನಿಸುತ್ತಾರೆ.

ಆ. ಆರತಿಯ ಹಾಡುಗಳು:-

ಹಿಂದೂ ಸಂಪ್ರದಾಯದಲ್ಲಿ ಎಲ್ಲಾ ವರ್ಗ, ಜನಾಂಗಗಳಲ್ಲಿ ಕೆಲವು ಆಚರಣೆಗಳು ಸಂಪ್ರದಾಯಗಳು ಸಾಮಾನ್ಯವಾಗಿ ಒಂದೇ ಆಗಿರುತ್ತವೆ. ಅಂತಹ ಒಂದು ಸಂಪ್ರದಾಯದಲ್ಲಿ ಆರತಿ ಮಾಡುವುದು ಒಂದಾಗಿದೆ. ಆದರೆ ಬ್ರಾಹ್ಮಣ ಸಂಪ್ರದಾಯದಲ್ಲಿ ಶಾಸ್ತ್ರ ವಿಚಾರಗಳಿಗೆ ಹೆಚ್ಚು ಒತ್ತನ್ನು ನೀಡುತ್ತಾರೆ. ಆರತಿ ಎತ್ತುವುದು ಅಥವಾ ಮಾಡುವುದು ಗೌರವ ಸೂಚಿಸುವಿಕೆಯೂ ಹೌದು. ಏಕೆಂದರೆ ಆರತಿ ಮಾಡುವುದನ್ನು ವ್ಯಂಗ್ಯ ಮಾಡಲು ಬಳಸಿಕೊಳ್ಳುತ್ತೇವೆ. ಉದಾಹರಣೆಗೆ: "ಸರಿಯಾಗಿ ಮಂಗಳಾರತಿ ಆಯಿತಾ ಅಂದರೆ ಮರ್ಯಾದೆ ಸಿಕ್ಕಿತಾ, ಅಗೌರವವಾಯಿತಾ ಎಂಬುದಾಗಿದೆ" ಮದುವೆ ಸಮಾರಂಭದಲ್ಲಿ ಗಂಡುಹೆಣ್ಣಿಗೆ, ಹೆಣ್ಣುಮಕ್ಕಳು ಮೈನೆರೆದಾಗ. ಬಸುರಿಯಾದ ಸಮಯದಲ್ಲಿ ನೆರವೇರಿಸುವ ಕಾರ್ಯಗಳಲ್ಲಿ. ಚಿಕ್ಕಮಕ್ಕಳಿಗೆ. ದೇವರಿಗೆ ಪೂಜೆ ಮಾಡುವಾಗ ಉಪನಯನ ಮಾಡುವಾಗ ಮುಂತಾದ ಸಮಯದಲ್ಲಿ ಈ ಪದ್ಧತಿಯನ್ನು ಮಾಡಲಾಗುತ್ತದೆ. ಆರತಿಯನ್ನು ಗಂಡುಮಕ್ಕಳಿಗೆ, ಹೆಣ್ಣುಮಕ್ಕಳಿಗೆ, ದಂಪತಿಗಳಿಗೆ, ತಾಯಿ-ಮಗುವಿಗೆ ಆರತಿ ಎತ್ತುತ್ತಾರೆ. ಇದನ್ನು ಉದಾಹರಣೆಯ ಮೂಲಕ ಗಮನಿಸಬಹುದು.

ಗಂಡಿಗೆ:

ಆರತಿಗೈವೆ । ಆರತಿಗೈವೆ । ನಾರಾಯಣಗೇ
ನಾರದ ಪ್ರಿಯ 'ಕರುಣಾಕರ ಹರಿಗೇ
ಮೇದಿನಿ ಪಾಲಿಪೊ। ಮೋದದಾಯಕಗೇ॥
ರಾಧಾವಲ್ಲಭ ರತಿಪತಿ ಪಿತನಿಗೆ ॥
ಸಾಧಿಸಿ ಕಂಸನ । ಶಿರ ತರಿವರಿಗೇ ॥
ಯಾದವೇಂದ್ರ ಮಧು। ಸೂದನಗೆ ।
ಅರ್ಥಿಯಿಂದ ಅಸುರಾಂತಕಗೇ ॥

ಸಂಪ್ರದಾಯದ ಹಾಡುಗಳಲ್ಲಿ ಕಂಡುಬರುವ ಮುಖ್ಯಸಂಗತಿ ಎಂದರೆ ಆಗಾಧವಾದ ಧಾರ್ಮಿಕ ಒಲವು ಇಲ್ಲಿ ಯಾವುದೇ ವ್ಯಕ್ತಿಯನ್ನು ಸ್ವವಿವರಗಳಿಂದ ಹೊಗಳುವುದಿಲ್ಲ. ಎಲ್ಲಾ ಕಾಲದಲ್ಲೂ ದೇವರನ್ನೇ ತಮ್ಮ ಹಾಡುಗಳಿಗೆ ಪ್ರಮುಖವಾಗಿ ಸ್ವೀಕರಿಸಿದ್ದಾರೆ.

ಹೆಣ್ಣಿಗೆ

ಆರತಿಯೆತ್ತೀರೇ । ನಾರಿಮಣಿಯರು ॥ ಮುತ್ತಿನಾ ॥
ಆರತಿಯೆತ್ತೀರೇ । ನಾರಿಮಣಿಯರು ॥ ಮುತ್ತಿನಾ ॥
ಜಾಹ್ನವೀಯ ತೀರವಂತೆ ಜನಕರಾಯನ ತನುಜೆಯಂತೆ ।

ಜಾನಕಿ ಸ್ವಯಂವರವಂತೆ । ಜಾಣೆ ನೀನು ಬರಬೇಕಂತ ।

ಕುಂಡಲದ ನಗರವಂತೆ । ಭೀಷ್ಮಕರಾಯನ ತನುಜೆಯಂತೆ ।

ಶಿಶುಪಾಲನ ಒಲ್ಲಳಂತೆ । ನಿನಗೆ ಓಲೆ ಬರೆದಳಂತೆ

ಕೌರವರು ಪಾಂಡವರಂತೆ । ದ್ಯೂತದಲ್ಲಿ ಸೋತರಂತೆ

ರಾಜ್ಯವನ್ನು ಬಿಟ್ಟರಂತೆ । ರಂಗವಿಠಲ ಬರಬೇಕಂತೆ

ಕಥನ ಗೀತೆಗಳನ್ನು ಬಿಟ್ಟರೆ ಸಂಪ್ರದಾಯಗಳಿಗೆ ಸಂಬಂಧಿಸಿದ ಸಣ್ಣಪುಟ್ಟ ಹಾಡುಗಳಲ್ಲಿಯೂ ರಾಮಾಯಣ. ಮಹಾಭಾರತವನ್ನು ಕೆಲವೇ ಸಾಲುಗಳಲ್ಲಿ, ವಿವರಿಸಿ ಸ್ತ್ರೀಯರು ಮಕ್ಕಳು. ಮಹಾಕಾವ್ಯವನ್ನು ತಿಳಿಯುವಂತೆ ಮಾಡುವಲ್ಲಿ ಈ ಹಾಡುಗಳು ಸಹಾಯಕಾರಿಯಾಗಿವೆ. ಹೀಗೆ ಆರತಿಯ ಹಾಡುಗಳು ಕೇವಲ ಸಾಂಪ್ರದಾಯಿಕವಾಗಲ್ಲದೆ, ಶೈಕ್ಷಣಿಕವಾಗಿಯೂ ಉಪಯುಕ್ತವಾಗಿದೆ.

ಇ. ಹೆಣ್ಣುಮಕ್ಕಳು ಮೈನೆರೆದಾಗ ಹಾಡುವ ಹಾಡುಗಳು :-

ಮನುಷ್ಯ ಹುಟ್ಟಿದಾಗಿನಿಂದ ಮೂರು ಸಂದರ್ಭದಲ್ಲಿ ಸೂತಕಗಳನ್ನು ಎದುರುಗೊಳ್ಳುತ್ತಾನೆ. ಇದು ಸಹ ಎಲ್ಲಾ ವರ್ಗದ ಜನರಲ್ಲಿ ಕಂಡುಬರುವ ಸಾಮಾನ್ಯವಾದ ಆಚರಣೆ, ಸಂಪ್ರದಾಯ. ಕನಿಷ್ಟ ಪಕ್ಷ ಹದಿನೈದು ದಿವಸಗಳ ಅವಧಿಯನ್ನು ಮೈಲಿಗೆ ಎಂದು ಘೋಷಿಸಿ. ಯಾವುದೇ ರೀತಿಯ ಪೂಜೆ-ಪುನಸ್ಕಾರಗಳನ್ನು ಮಾಡದೆ ವಿಧ-ವಿಧವಾದ ಆಚರಣೆಗಳನ್ನು ನಡೆಸುತ್ತಾರೆ. ಅಂತಹ ಸಂದರ್ಭಗಳೆಂದರೆ

೧. ಹೆಣ್ಣು ಮಕ್ಕಳು ಮೈ ನೆರೆದಾಗ

೨. ಮಗುವಿನ ಜನನ

೩. ಸಾವು ಸಂಭವಿಸಿದಾಗ

ಈ ಗ್ರಂಥದಲ್ಲಿ ಹೆಣ್ಣುಮಕ್ಕಳು ಮೈನೆರೆದಾಗ ಮತ್ತು ಮಗುವಿನ ಜನನ ನಂತರದಲ್ಲಿ ನಡೆಸುವ ಆಚರಣೆಗಳನ್ನು ಹಾಡುಗಳ ಮೂಲಕ ವಿವರಿಸುತ್ತಾರೆ. ಅವು ಹೆಚ್ಚಾಗಿ ವೈದಿಕ ಸಂಪ್ರದಾಯದ ಆಚರಣೆಗಳನ್ನು ಹೇಳುತ್ತವೆ. ಇವೆರಡು ಸಂಗತಿಗಳು ಹೆಂಗಸರಿಗೆ ಸಂಬಂಧಿಸಿದ್ದಾದ್ದರಿಂದ ಇವುಗಳ ರಚನೆ ಮಹಿಳೆಯ ದೃಷ್ಟಿಕೋನವನ್ನು ಒಳಗೊಂಡಿದೆ. ಹೆಣ್ಣು ಮೈನೆರೆದ ವೇಳೆಯಲ್ಲಿ ಮಾನಸಿಕವಾಗಿ, ಭಯ. ಭೀತರಾಗಿರುವುದು ಸಹಜ. ಆಗ ದೈಹಿಕವಾಗಿ, ಮಾನಸಿಕವಾಗಿ ಉಂಟಾಗುವ ಬದಲಾವಣೆಗಳು ಹೊಸತನವೊಂದನ್ನು ಸ್ವೀಕರಿಸುವಲ್ಲಿ ಗೊಂದಲಕ್ಕೆ ಈಡಾಗುತ್ತಾಳೆ. ಆ ಸಮಯದಲ್ಲಿ ಹಿರಿಯರ ಸಲಹೆ, ಕಾಳಜಿ. ಅದರಲ್ಲಿನ ಗೊಂದಲಗಳನ್ನು ದೂರ ಮಾಡುವಲ್ಲಿ ಬಹುಮುಖ್ಯ.

ಹೆಣ್ಣು ಮೈನೆರೆದ ಅವಧಿಯಲ್ಲಿ ಹೀಗೆ ಇದ್ದರೆ ಶುಭ, ಇಲ್ಲದಿದ್ದರೆ ಅಶುಭ ಎಂಬ ನಂಬಿಕೆಗಳಿವೆ. ಮೈನೆರೆದಾಗ ಹಾಡುವ ಹಾಡುಗಳ ಮಹತ್ವ ಅವಶ್ಯಕತೆಯನ್ನು ವಾಗೀಶ್ವರಿಯವರು ಈ

ರೀತಿ ವಿವರಿಸುತ್ತಾರೆ. "ಹೆಣ್ಣುಮಕ್ಕಳು ಎದ್ದಾಕ್ಷಣ ಯಾವುದೇ ವ್ರತಗಳಿದ್ದರೂ ಸಹ ಒಂದೆರಡು ಕಾಳು ಅಕ್ಕಿಯನ್ನೋ. ಅವಲಕ್ಕಿಯನ್ನೋ ಬಾಯಿಗೆ ಹಾಕಿಕೊಳ್ಳಬೇಕು. ಹೆಣ್ಣುಮಕ್ಕಳು ಬರೀ ಹೊಟ್ಟೆಯಲ್ಲಿದ್ದಾಗ ಮೈನೆರೆಯಬಾರದು. ಆ ವೇಳೆಯಲ್ಲಿ ಪೊರಕೆ ಇತ್ಯಾದಿ ವಸ್ತುಗಳನ್ನು ಹಿಡಿದಿರಬಾರದು. ಕೈಯಲ್ಲಿ ಶುಭಸೂಚಕವಾದ ಹೂವೋ, ಹಣ್ಣೋ ಹಿಡಿದಿರಬೇಕು ಎಂಬುದು ನಂಬಿಕೆ. ಏನಾದರೂ ಶುಭರೀತಿಯಲ್ಲಿ ಮೈ ನೆರೆಯದಿದ್ದಾಗ ದೋಷವಾದರೂ ಶುಭ ಶೋಭಾನೆಗಳನ್ನು ಸುಮಂಗಲಿಯರು ಹಾಡಿ ಒಳ್ಳೆಯದನ್ನೇ ಕೋರುವ ಸತ್ಸಂಪ್ರದಾಯವನ್ನು ಇಲ್ಲಿ ಕಾಣುತ್ತೇವೆ [^]" ಸಂಪ್ರದಾಯದ ಹಾಡುಗಳನ್ನು ಶುಭ ಸಮಾರಂಭದಲ್ಲಿ ಹಾಡುವುದರಿಂದ ಸುಮಂಗಲಿಯರಿಗೆ ಮಾತ್ರ ಪ್ರವೇಶವಿದ್ದು, ವಿಧವೆಯರ ಪಾಲ್ಗೊಳ್ಳುವಿಕೆ ಇರಲಿಲ್ಲ. ಮಕ್ಕಳಿಗೂ ಈ ಹಾಡುಗಳನ್ನು ಕಲಿಸಿ ಅವರಿಂದಲೂ ಹಾಡಿಸುತ್ತಿದ್ದರು.

'ಹೃದಯ ಸಂಪುಟ' ಗ್ರಂಥದಲ್ಲಿನ ಹಾಡುಗಳು ಬ್ರಾಹ್ಮಣ ಕುಟುಂಬದಲ್ಲಿನ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. ಈ ಹಾಡುಗಳು ಅವರ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ನೀಡುತ್ತವೆ.

ಪ್ರಾಚೀನ ಕಾಲದಲ್ಲಿ ಬಾಲ್ಯವಿವಾಹ ಪದ್ಧತಿಯನ್ನು ಅನುಸರಿಸಲಾಗುತ್ತಿತ್ತು. ಹತ್ತು ಹದಿನಾಲ್ಕು ವರ್ಷವಾಗುತ್ತಿದ್ದ ಹಾಗೆ ಮದುವೆ ಮಾಡುತ್ತಿದ್ದರು. ಅದು ಚಿಕ್ಕ ವಯಸ್ಸಾದ್ದರಿಂದ ಹೆಣ್ಣುಮಕ್ಕಳು ಮೈನೆರೆದ ನಂತರವೇ ಗಂಡನ ಮನೆಗೆ ಕಳುಹಿಸಿಕೊಡುವ ರೂಢಿಯಲ್ಲಿತ್ತು. ಬಾಲ್ಯದ ದಿನಗಳನ್ನು ಸಂಪೂರ್ಣವಾಗಿ ಕಳೆಯಲು ಅವಕಾಶ ಕಡಿಮೆಯಿದ್ದು. ಸಂಸಾರದ ಜವಾಬ್ದಾರಿಯನ್ನು ಹೊರಬೇಕಾಗಿತ್ತು. ಆಲೋಚನೆಯಲ್ಲಿ, ನಡವಳಿಕೆಯಲ್ಲಿ ಪ್ರಬುದ್ಧತೆಯನ್ನು ಅನಿವಾರ್ಯವಾಗಿ ಬೆಳೆಸಿಕೊಳ್ಳಬೇಕಾದ ಪರಿಸರ. ಋತುಮತಿಯ ಆಚರಣೆಗಳನ್ನೆಲ್ಲ ಮುಗಿಸಿ ಹುಡುಗಿಯು ಗಂಡನ ಮನೆಗೆ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾದ ದಿನಗಳನ್ನು ನೆನೆದು ಹುಡುಗಿಯು ಸಹಜವಾಗಿಯೇ ಅಧೀರಳಾಗುತ್ತಾಳೆ. ಈ ರೀತಿಯ ಆತಂಕಗಳ ನಿವಾರಣೆ ಹಿರಿಯರು ಶಾಸ್ತ್ರಗಳ ಮೂಲಕ ಸಲಹೆಯನ್ನು ನೀಡುವ ಸಲುವಾಗಿ. ತಂದೆ-ತಾಯಿಯರ ಪ್ರೀತಿಯನ್ನು ನೆನೆಸಿಕೊಳ್ಳುವ ಸಲುವಾಗಿ ಕೆಲವೊಂದು ಶಾಸ್ತ್ರಗಳನ್ನು ನಡೆಸುತ್ತಾರೆ. ಧಡುಮ ಹಾಸುವುದು. ಚಿಗುಳಿ ಕಟ್ಟುವುದು. ಉಪ್ಪಕ್ಕಿ ಮರೆಸುವುದು. ಚೆಟ್ಟು ಒಡಿಯುವುದು. ನಡೆಮುಡಿ ಹಾಡುವುದು ಮುಂತಾದ ಸಂಪ್ರದಾಯವನ್ನು ಹಾಡಿನಲ್ಲಿ ಹೇಳುತ್ತಾರೆ. ಸಂಪ್ರದಾಯದ ಹಾಡುಗಳು ಗ್ರಂಥದಲ್ಲಿ ಈ ಆಚರಣೆಗಳ ಬಗ್ಗೆ ವಿವರಿಸಿದ್ದಾರೆ. ಮುಂದಿನ ಪೀಳಿಗೆಗೆ ಈ ಗ್ರಂಥವು ಮಾರ್ಗದರ್ಶಕವಾಗಿದೆ.

ಧಡುಮವ ಹಾಸಿದರು ಭೂ ಸುತೆಗೆ । ಹಿತೆಗೆ । ನುತೆಗೆ

ಮಡದ ಮಣಿಯರಿಂದು । ಸಡಗರದಿಂದಲಿ

ಮೆರೆವರಿಸಿನದಿಂದ । ಕರಧೌತಾಂಬರದಲ್ಲಿ

ಬರೆದಷ್ಟದಳ ಪದ್ಮ । ದಿರವ ಸುಂದರಿಯರು

ಅಂಗನೆಯರು ನಾಲ್ವ । ರಿಂಗದ ಮದದಿಂದ

ತುಂಗ ಗೀತವ ಪಾಡಿ । ಶೃಂಗಾರ ಲಹರಿಗೆ

ನರಸಿಂಹ ರೂಪಶ್ರೀ । ಕರ ರಾಮಚಂದ್ರನ

ಅರಸಿ ಸೀತೆಗೆ ರಾಕಾ ।ಶರದಿಂದು ಮುಖಿಯರು.

ಹೆಣ್ಣು ನೆರೆದಾಗ ಬಿಳಿ ಬಟ್ಟೆಗೆ ಶಾಸ್ತ್ರದ ಬಣ್ಣವನ್ನು (ಅರಿಶಿನ, ಸುಣ್ಣಮಿಶ್ರಿತ ನೀರು) ಮಾಡಿ ಐದು ಜನ ಮುತ್ತೈದೆಯರಿಂದ ಐದು ಭಾಗದಲ್ಲಿ ಹಸ್ತವನ್ನು ಒತ್ತಿ ಅದನ್ನು ಹಸೆಗೆ ಹಾಸಿ ಕೂರಿಸುವುದು ವಾಡಿಕೆ. ಇಂತಹ ಶಾಸ್ತ್ರಗಳು ಮಾಡುವಾಗ ಹಾಡನ್ನು ಹಾಡುತ್ತಾರೆ. ಇದೇ ರೀತಿ ಚಿಗುಳಿಕುಟ್ಟುವ ಹಾಡನ್ನು ಹಾಡುತ್ತಾರೆ. ಎಳ್ಳಿನ ಉಂಡೆ, ಪುರಿ ಉಂಡೆ, ಕಡಲೆಉಂಡೆಗಳನ್ನು ಶಾಸ್ತ್ರದ ಆಚರಣೆಗಾಗಿ ಮಾಡುತ್ತಾರೆ. ಇದನ್ನೇ ಚಿಗುಳಿ ಕುಟ್ಟುವುದು ಎನ್ನಲಾಗುತ್ತದೆ. ಇಂತಹ ಸಂಪ್ರದಾಯವನ್ನು ಗ್ರಾಮೀಣ ಪರಿಸರದ ಬೇರೆ ಜನಾಂಗದವರ ಮದುವೆಯಲ್ಲಿ ಬತ್ತ ಕುಟ್ಟುವ ಶಾಸ್ತ್ರದಲ್ಲಿ ಕಂಡು ಬರುತ್ತದೆ. ಅಂದಿನ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಹಾಡುಗಳನ್ನು ಹಾಡುತ್ತಾರೆ.

ಬ್ರಾಹ್ಮಣ ಸಂಪ್ರದಾಯದ ಹಾಡುಗಳು ಬೇರೆ ಬೇರೆ ವರ್ಗದವರಲ್ಲಿನ ಸಂಪ್ರದಾಯಗಳಿಗೆ ಎಷ್ಟು ಸಾಮ್ಯತೆಯನ್ನು, ವೈವಿಧ್ಯತೆಯನ್ನು ಹೊಂದಿವೆ ಎಂಬುದು ಈ ಹಾಡುಗಳ ಅಧ್ಯಯನದಿಂದ ತಿಳಿದುಬರುತ್ತದೆ. ಸಂಪ್ರದಾಯದ ಹಾಡುಗಳು ಧಾರ್ಮಿಕ ಆಚರಣೆಯಲ್ಲಿ ಅಷ್ಟೇ ಅಲ್ಲದೇ ಕಾಯಕದಲ್ಲಿ (ಸಾಂಪ್ರದಾಯಿಕ ಆಚರಣೆಗೆ ಸಂಬಂಧಿಸಿದ) ತೊಡಗಿರುವಾಗ ಆ ಕೆಲಸಗಳಿಗೆ ಸಂಬಂಧಿಸಿದಂತೆ ಹಾಡುಗಳನ್ನು ಹಾಡುತ್ತಾರೆ. ಒಂದು ಸಂಪ್ರದಾಯದಲ್ಲಿ ಅನುಸರಿಸುವ. ಆಚರಿಸುವ ವಿಧಿ–ವಿಧಾನಗಳೆಲ್ಲವನ್ನು ಹಾಡುಗಳಿಂದ ತಿಳಿಯಬಹುದಾಗಿದೆ. ಇದು ಒಂದು ನಿರ್ದಿಷ್ಟ ಜನರ ಜೀವನವನ್ನು ತೋರುತ್ತದೆ.

ಭೇರಿ ಬಾರಿಸಿದಾಗ । ದ್ವಾರಕಾಪುರದಿ ಬೇಗ ।

ದೇವ ಸತಿಯರೆಲ್ಲರು ಬನ್ನಿರೆ । ಶೋಭಾನ ಪಾಡುತಾ

ದೇವಾದಿ ದೇವನಾ । ದೇವಿ ಮೈನೆರೆದಳೆಂದು

ಬೇಗದಿಂದ ನಾರಿಯರು । ಸಾಗುತೆಸೆದರೂ ।

ಈ ಹಾಡಿನ ಸಾಲನ್ನು ಗಮನಿಸಿದರೆ ಮೈನೆರೆದಾಗ ಮಾಡಬೇಕಾದ ಕರ್ಮಗಳನ್ನು, ರೀತಿ–ನೀತಿಗಳೆಲ್ಲವನ್ನು ಒಂದು ಹಾಡಿನ ಮೂಲಕ ತಿಳಿಸುವಿಕೆ ಎಂದು ಅರ್ಥೈಸುತ್ತದೆ. ಇಂದಿನ ಕಾಲದಲ್ಲಿ ನಗರ ಜೀವನಕ್ಕೆ ಒಗ್ಗಿಕೊಂಡು ಅವಿಭಕ್ತ ಕುಟುಂಬದಿಂದ ದೂರ ಉಳಿಯುವಂತಹವರಿಗೆ ಮನೆಯಲ್ಲಿ

ಯಾವುದಾದರೂ ಆಚರಣೆಗಳ ಸಂದರ್ಭ ಬಂದಾಗ ಅವುಗಳನ್ನು ನಿರ್ವಹಿಸುವ. ಆಚರಿಸುವ ಬಗೆಯೇ ತಿಳಿದಿರುವುದಿಲ್ಲ. ಆಗ ಈ ಹಾಡುಗಳು ಮಾರ್ಗದರ್ಶಕನಂತೆ ಮಾಡಬೇಕಾದ ಕಾರ್ಯವನ್ನು ಪರಿಚಯಿಸಲು ಸಹಾಯಕವಾಗಿದೆ.

"ಭೇರಿ ಬಾರಿಸಿದಾಗ । ದ್ವಾರಕಪುರದಿ ಜೇಗ" ಎಂಬ ಹಾಡಿನಲ್ಲಿ ಮೈನೆರೆದಾಗ ಜೋಯಿಸರ ಕರೆಸಿ ಗಳಿಗೆಯನ್ನು ಹೇಳಿ ಅದು ಶುಭವೋ, ಅಶುಭವೋ ತಿಳಿಯಬೇಕು. ಅವರಿಂದ ಫಲಾಫಲಗಳನ್ನು ಕೇಳಿದ ನಂತರ ಉಡುಗೊರೆಯನ್ನು ನೀಡಿ ಗೌರವಿಸಬೇಕು. ಪುಷ್ಪವತಿಯಾದ ಹುಡುಗಿಗೆ ಬಿಳಿಯ ಬಟ್ಟೆಯಿಂದ ಮಾಡಿದ 'ಧಡುಮ' ಬಟ್ಟೆಯನ್ನು ಹಾಸಿ ಹೂವನ್ನು ಮುಡಿಸುವ ಶಾಸ್ತ್ರ ಮಾಡಿ ಮುತ್ತೈದೆಯರಿಂದ ಮುಟ್ಟಿಸಿ ತಂದಿರುವ ಉಪ್ಪಕ್ಕಿ (ಮುತ್ತೈದೆಯರು ಉಪ್ಪು ಮತ್ತು ಅಕ್ಕಿಯನ್ನು ಮೆರೆಸಿ ತರುತ್ತಾರೆ) ತಂದು ಧೂಪವನ್ನು ಹಾಕಿ, ದೀಪ ಹಚ್ಚುವುದರ ಮೂಲಕ ಶಾಸ್ತ್ರವನ್ನು ಪೂರೈಸಬೇಕು. ಸಂಪೂರ್ಣ ಶಾಸ್ತ್ರವೊಂದನ್ನು ಹಾಡಿನಲ್ಲಿ ತಿಳಿಸಲಾಗಿದೆ.

ಈ. ಹೆಣ್ಣುಮಕ್ಕಳು ಬಸುರಿಯಾದಾಗ ಹಾಡುವ ಹಾಡುಗಳು (ಬಯಕೆಯ ಹಾಡುಗಳು):–

ಜಗತ್ತಿನಾದ್ಯಂತ ಸ್ತ್ರೀಯನ್ನು ಎರಡನೇ ದರ್ಜೆಯವಳಂತೆ ಬಹಳ ಹಿಂದಿನಿಂದಲೂ ನಡೆಸಿಕೊಂಡು ಬಂದಿದೆ. ಆರ್ಥಿಕವಾಗಿ ಗಂಡಿಗೆ ಸರಿಸಮಾನಳಾಗಿ ದುಡಿಯಲು ಸಾಧ್ಯವಿಲ್ಲ. ಅವಳ ಹೆರುವ, ಹೊರುವ ಕ್ರಿಯೆ ಇದಕ್ಕೆ ಅಡ್ಡಿಯಾಗಿದೆ. ದೈಹಿಕವಾಗಿ ಗಂಡಿಗಿಂತ ಕಡಿಮೆ ಸಾಮರ್ಥ್ಯವನ್ನು ಹೊಂದಿದವಳಾಗಿದ್ದಾಳೆ ಎಂಬ ಕಾರಣದಿಂದ ಲಿಂಗತಾರತಮ್ಯ ಹುಟ್ಟಿಕೊಂಡಿದ್ದು. ಮನೆಯ ಕೆಲಸ ಕಾರ್ಯಗಳಿಗೆ ಸೀಮಿತಗೊಂಡಿದೆ. ಹೆಣ್ಣಿಗೆ ತಾಯ್ತನದ ಕ್ರಿಯೆ ಪ್ರಕೃತಿದತ್ತವಾಗಿ ಲಭಿಸಿರುವಂತಹದ್ದು. ಮುಂದೆ ಇದನ್ನು ಶಾಸ್ತ್ರ ಸಂಪ್ರದಾಯದ ಪರಿಧಿಗೆ ಒಳಪಡಿಸಿ ಹೆಣ್ಣು ತಾಯಿಯಾದಾಗಲೇ ಅವಳ ಜನ್ಮ ಸಾರ್ಥಕತೆಯನ್ನು ಪಡೆದುಕೊಳ್ಳುವುದು. ಮುಕ್ತಿ ಲಭಿಸುವುದು. ಇಲ್ಲವಾದರೆ ಕಷ್ಟಗಳಿಗೆ ದೂಷಣೆಗಳಿಗೆ ಭಾಜನರಾಗುತ್ತಾರೆ ಎಂಬ ನಂಬಿಕೆ. ವೇದೋಪನಿಷತ್ತುಗಳಲ್ಲಿಯೂ ಈ ವಿಷಯವನ್ನು ಉಲ್ಲೇಖಿಸಲಾಗಿದೆ. ಅದರಲ್ಲೂ, ಗಂಡು ಮಗುವಿಗೆ ಜನ್ಮನೀಡದ ಹೊರತು ಮುಕ್ತಿ ಪ್ರಾಪ್ತವಾಗುವುದಿಲ್ಲ ಎನ್ನಲಾಗುತ್ತದೆ. ಆರ್ಥಿಕ ದೃಷ್ಟಿಯಿಂದಲೂ ಹೆಣ್ಣು ಹೊರೆಯೆಂಬ ಭಾವನೆ ಮೂಡಲಾರಂಭಿಸಿತು. ಈ ಭಾವನೆ ತಂದೆ–ತಾಯಿಗಳು ಸ್ವತಃ ಮಕ್ಕಳನ್ನು ತಾರತಮ್ಯದಿಂದ ನೋಡುವ ಪರಿಸರ ರೂಪುಗೊಂಡಿತು. ಗಂಡು ಮಗುವಿನ ಅಪೇಕ್ಷೆ ಎಷ್ಟೋ ಸಾರಿ ಬಹುಪತ್ನಿತ್ವಕ್ಕೂ ದಾರಿಯಾಗಿರುವುದುಂಟು. ಒಂದು ವೇಳೆ ಗಂಡುಸಂತಾನವಾಗದಿದ್ದರೆ ಗಂಡನಿಗೆ ಎರಡನೇ ಮದುವೆ ಮಾಡಲು ಮನೆಯವರು ಮುಂದಾಗುತ್ತಿದ್ದರು.

ಹಿಂದೆ ಬಾಲ್ಯವಿವಾಹ ಪದ್ಧತಿಯಿದ್ದರಿಂದ ಚಿಕ್ಕ ವಯಸ್ಸಿನಲ್ಲೇ ಗಂಡ. ಅತ್ತೆ. ಮಾವ. ಓರಗಿತ್ತಿ, ಭಾವ, ಮೈದುನ ಮುಂತಾದ ಸಂಬಂಧಗಳನ್ನು ಅರಿತುಕೊಂಡು ಬಾಳಬೇಕಾಗಿತ್ತು. ಬ್ರಾಹ್ಮಣ

ಸಂಪ್ರದಾಯದಲ್ಲಿ ಸ್ತ್ರೀಯರಿಗೆ ತೀರಾ ಸೀಮಿತವಾದ ಚೌಕಟ್ಟಿದ್ದು ಅವಿಭಕ್ತ ಕುಟುಂಬವಾದ್ದರಿಂದ ಮನೆಯಲ್ಲಿ ಎಲ್ಲರೊಂದಿಗೆ ಹೊಂದಿಕೊಂಡು ಹೋಗಬೇಕಾದ ಜವಾಬ್ದಾರಿ ಅವಳ ಮೇಲಿರುತ್ತಿತ್ತು. ಮನೆಮಂದಿಗೆಲ್ಲಾ ಅಚ್ಚುಮೆಚ್ಚಾಗಿ ನೆಚ್ಚಿನ ಸೊಸೆಯಾಗಿರಬೇಕಾಗಿತ್ತು. ಇದರೊಂದಿಗೆ ಮನೆಯವರನ್ನು ಸಂತೋಷಪಡಿಸುವ ಅವಕಾಶವೆಂದರೆ ಮಗುವನ್ನು ಹೆತ್ತು ಹೊಸ ಅತಿಥಿಯನ್ನು ಕುಟುಂಬಕ್ಕೆ ನೀಡುವುದು. ಆ ಸಂದರ್ಭದಲ್ಲಿ ಮನೆಯವರು ಕೂಡ ಸೊಸೆಯ ಬಗ್ಗೆ ಎಲ್ಲಿಲ್ಲದ ಕಾಳಜಿ, ಪ್ರೀತಿಯನ್ನು ತೋರುತ್ತಾರೆ. ಬಸುರಿಯನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ. ಪ್ರಾರಂಭದಿಂದ ಹಿಡಿದು ಮಗುವು ಜನಿಸಿ ವರ್ಷ ತುಂಬುವವರೆಗೂ ಇಬ್ಬರ ಆರೋಗ್ಯದ ಬಗ್ಗೆ ಎಡಬಿಡದೆ ವಿಚಾರಿಸುವರು. ಈಗಿನಂತೆ ಆಸ್ಪತ್ರೆಗಳು ಆ ಕಾಲದಲ್ಲಿ ಇಲ್ಲವಾದರೂ ಮನೆಯಲ್ಲಿಯೇ ಹೆರಿಗೆ ಮಾಡಿಸಲಾಗುತ್ತಿತ್ತು. ಔಷದೋಪಚಾರವನ್ನು ನೀಡುತ್ತಿದ್ದರು. ಮನೆಯಲ್ಲಿನ ಹಿರಿಯರು ಯಾವ ವೇಳೆಯಲ್ಲಿ ಎಂತಹ ಔಷಧವನ್ನು ನೀಡಬೇಕೆಂದು ತಮ್ಮ ಹಿರಿಯರಿಂದ ಬಳುವಳಿಯಾಗಿ ಪಡೆದು ತಿಳಿದುಕೊಂಡಿದ್ದರು. ಬಾಲ್ಯವಿವಾಹವಾದ್ದರಿಂದ ಚಿಕ್ಕ ವಯಸ್ಸಿನಲ್ಲೇ ಬಸಿರು, ಬಾಣಂತನಕ್ಕೆ ಒಳಗಾಗುತ್ತಿದ್ದರು. ವಯಸ್ಸು ಚಿಕ್ಕದಾದ್ದರಿಂದ ಬಯಕೆಗಳು ಅಪಾರವಿರುತ್ತಿದ್ದವು. ಅದಕ್ಕಾಗಿಯೇ ತಿಂಡಿ ತಿನಿಸುಗಳು, ಹಣ್ಣು ಹಂಪಲುಗಳು ಮತ್ತು ಬಗೆ ಬಗೆಯ ಅಲಂಕಾರಗಳನ್ನು ನೆರವೇರಿಸಲಾಗುತ್ತಿತ್ತು. ಇದಕ್ಕೆ ಇನ್ನೊಂದು ಕಾರಣವೆಂದರೆ ಮಗು ಜನಿಸಿದ ನಂತರ ತಾಯಿಯಾದವಳು ತನ್ನ ವೈಯಕ್ತಿಕ ಆಸೆಗಳನ್ನು ತೊರೆದು ಮಕ್ಕಳ ಆಸೆಗಾಗಿ ಬಾಳಬೇಕು. ಅದಕ್ಕಾಗಿ ಅವಳಿಗೆ ಇಷ್ಟವಾದಂತಹ ಬಗೆ ಬಗೆಯ ತಿಂಡಿ ತಿನಿಸುಗಳನ್ನು ಬಸುರಿಗೆ ನೀಡುತ್ತಿದ್ದರು. ಇದನ್ನು ಬಯಕೆಯ ಹಾಡುಗಳಲ್ಲಿ ತಿಳಿಯಬಹುದು. ಈ ವೇಳೆಯಲ್ಲಿ ಹಲವು ಶಾಸ್ತ್ರಗಳನ್ನು ಮಾಡಿ ನೆಂಟರಿಷ್ಟರಲ್ಲೆ ಸೇರಿ ತಾವು ಸಂತೋಷಪಟ್ಟು ಅವಳನ್ನು ಸಂತೋಷ ಪಡಿಸುತ್ತಿದ್ದರು. ಈ ಶಾಸ್ತ್ರಗಳಿಗೆಂದೇ ಕೆಲವು ಹಾಡುಗಳನ್ನು ರಚಿಸಲಾಗಿದೆ.

ವಾಗೀಶ್ವರಿ ಶಾಸ್ತ್ರಿಯವರು ಬಸುರಿಯ ಹಾಡುಗಳ ಅವಶ್ಯಕತೆಯನ್ನು ಕುರಿತು 'ಹೃದಯಸಂಪುಟ' ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ. "ಬಯಕೆಯ ಹಾಡುಗಳಲ್ಲಿ ಬಸುರಿ ಹೆಂಗಸಿನ ದೇಹಸ್ಥಿತಿಗಳನ್ನು ಅವಳ ಮನಸ್ಸಿನಲ್ಲಿ ಮೂಡುವ ಭಾವನೆಗಳನ್ನು, ಅನಿಸಿಕೆಗಳನ್ನು ತಿಳಿಸಲಾಗುತ್ತದೆ. ಹಾಗೆಯೇ ಬಸುರಿಯ ಬಯಕೆಯಲ್ಲಿ ಪ್ರಕೃತಿ ಸೌಂದರ್ಯದ ನೋಟ ಮತ್ತು ಒಡನಾಟಗಳಲ್ಲಿ ಹೆಚ್ಚು ಆಸಕ್ತಿಯಿದ್ದು ಇವು ವಯಸ್ಸಿನ ಮೇಲೆ ಪ್ರಭಾವ ಬೀರಿ, ಹರ್ಷಚಿತ್ತರನ್ನಾಗಿಸುವುದರಿಂದ ಹಿರಿಯರು ಇದನ್ನು ತಿಳಿದೇ ಅವಳ ಬಯಕೆ ತೀರಿಸಿ ಸಂತೋಷವಾಗಿಡಲು ಹೊಳೆಊಟ, ವನಭೋಜನ ಇತ್ಯಾದಿಗಳನ್ನು ಏರ್ಪಡಿಸುತ್ತಿದ್ದರೆನ್ನುವುದನ್ನು ಬಯಕೆ ಹಾಡುಗಳಿಂದ ತಿಳಿಯಬಹುದು.

ಈ ಹೇಳಿಕೆಯನ್ನು ಗಮನಿಸಿದಾಗ ಆಗಿನ ಕಾಲದಲ್ಲಿ ಯಾವ ವೈದ್ಯರು ಇಲ್ಲದಿದ್ದರೂ ಹಾಗೂ ವೈದ್ಯಕ್ಷೇತ್ರ ಇಂದಿನಷ್ಟು ಪ್ರಗತಿಯಲ್ಲಿಲ್ಲದಿದ್ದರೂ ಕೂಡ ಆರೋಗ್ಯದ ವಿಷಯಕ್ಕೆ ಸಂಬಂಧಿಸಿದಂತೆ ಪೂರ್ವಿಕರು ಔಷದೋಪಚಾರದಲ್ಲಿ ಪರಿಣತಿಯನ್ನು ಹೊಂದಿದ್ದರು. ಮನೋವೈಜ್ಞಾನಿಕ ದೃಷ್ಟಿಕೋನವನ್ನು ಹೊಂದಿದ್ದರು ಎಂಬುದು ಅರಿವಿಗೆ ಬರುತ್ತದೆ. ನೈಸರ್ಗಿಕವಾಗಿ ಹಾಗೂ ಮಾನಸಿಕವಾಗಿ ಗರ್ಭಿಣಿಯರಲ್ಲಿ ಉಂಟಾಗುವ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಿ ಅದಕ್ಕೆ ಅಗತ್ಯವಾದ ಕ್ರಮವನ್ನು ಕೈಗೊಳ್ಳುತ್ತಿದ್ದರು ಎಂಬುದಕ್ಕೆ ಬಯಕೆಯ ಹಾಡುಗಳೇ ಸಾಕ್ಷಿ. ಮೂರು ತಿಂಗಳಿಂದ ಒಂಭತ್ತನೇ ತಿಂಗಳವರೆಗೂ ಮೂರು-ನಾಲ್ಕು ಬಾರಿ ಶಾಸ್ತ್ರಗಳನ್ನು ಮಾಡುತ್ತಾರೆ. ಐದನೇ ತಿಂಗಳಲ್ಲಿ ಸೀಮಂತ ಹೀಗೆ ವಿವಿಧ ಶಾಸ್ತ್ರ, ಸಮಾರಂಭವನ್ನು ನಡೆಸಲಾಗುತ್ತದೆ. ಸಂಪ್ರದಾಯದ ಹಾಡುಗಳಲ್ಲಿ ಬಸುರಿಯರಿಗೆ ಸಂಬಂಧಿಸಿದಂತೆ ಬಯಕೆಯ ಹಾಡು. ಹೂ ಮುಡಿಸುವ ಹಾಡು, ಬಳೆಯನ್ನು ತೊಡಿಸಿದ ಹಾಡು, ಉಡಿ ತುಂಬಿದ ಹಾಡುಗಳಿವೆ.

ಬಯಕೆಯ ಹಾಡಿನಲ್ಲಿ ಸಂಪೂರ್ಣವಾಗಿ ಗರ್ಭಿಣಿಯರಿಗೆ ಯಾವ ಯಾವ ತಿಂಗಳಲ್ಲಿ ಯಾವ ರೀತಿಯ ಬಯಕೆಯುಂಟಾಗುತ್ತದೆ ಎಂಬುದರ ವಿವರಣೆ ಇದೆ.

ರಂಗನರಾಣೀ । ಮಂಜುಳವಾಣೀ ।

ಅಂಗನೆ ಗರ್ಭದ ಅಪೇಕ್ಷೆಗಳೂ

ಶರಣು ಬ್ರಹ್ಮನರಾಣಿ । ಶರಣು ವೀಣಾ ಪಾಣೀ

ಹೀಗೆ ಪ್ರಥಮ ತಿಂಗಳಿಂದ ಹಿಡಿದು ಎಂಟನೇ ತಿಂಗಳವರೆಗೆ ಉಂಟಾಗುವ ಹಲವು ತಿನಿಸುಗಳ ಬಯಕೆಯನ್ನು ಈ ಹಾಡಿನಲ್ಲಿ ಹೇಳಿದ್ದಾರೆ. ಮೂರನೇ. ಏಳನೇ. ಎಂಟನೇ ತಿಂಗಳಲ್ಲಿ ಮಾಡುವ ಶಾಸ್ತ್ರಗಳಲ್ಲಿ ಹಸೆಗೆ ಕರೆತಂದು ಹೂಮುಡಿಸುವರು. ಹೂ ಮುಡಿಸುವ ಶಾಸ್ತ್ರದಲ್ಲಿ ಐದು ಜಗೆಯ ಹೂವನ್ನು ಐದು ಜನ ಮುತ್ತೈದೆಯರು ಮುಡಿಸುವುದು ಸಂಪ್ರದಾಯ.

ಶ್ರೀ ರಮಣಿ ಮಣಿ । ರುಕ್ಮಿಣಿಗೆ ಶ್ರಿತ ।

ವಾರ ವಿಭವದ ಕೃ । ಪಾಕರಿಗೇ

ಸಾರಸಕಾರಿಗೇ । ಗೌರಿ ಶರೀರಗೇ ॥

ನಾರಿಯರೆಲ್ಲರು । ಹಾರೈಸುತ್ತಲೀ

ಪಾರೀಜಾತವನೂ । ಮುಡಿಸಿದರೂ

ಇದೇ ರೀತಿ ವರ್ಣಿಸುತ್ತಾ ಸಂಪಿಗೆ, ಮಲ್ಲಿಗೆ ಹೂವನ್ನು ಮುಡಿಸಿದರು ಎಂದು ಹಾಡಿ ಸಂಭ್ರಮಿಸುತ್ತಾರೆ. ಏಳನೇ ತಿಂಗಳಲ್ಲಿ ಬಳೆ ತೊಡಿಸುವ, ಎಂಟರಲ್ಲಿ ಉಡಿ ತುಂಬುವ ಶಾಸ್ತ್ರ ಮಾಡುತ್ತಾರೆ. ಹೆಣ್ಣಿಗೆ ತನ್ನ ಜೀವನದಲ್ಲಿ ಎರಡು ಸಾರಿ ಬಳೆ ತೊಡಿಸುವ ಮತ್ತು ಉಡಿ ತುಂಬುವ

ಶಾಸ್ತ್ರಕ್ಕೆ ಒಳಗಾಗುತ್ತಾಳೆ. ಒಂದು ಮದುವೆಯಲ್ಲಿ, ಎರಡು ಗರ್ಭಿಣಿಯಾಗಿರುವ ಸಂದರ್ಭದಲ್ಲಿ ನಡೆಸುವ ಶಾಸ್ತ್ರ ಸಂಪ್ರದಾಯದಲ್ಲಿ ಕಾಣಬಹುದು. ಗರ್ಭಿಣಿಯರಿಗೆ ಬಳೆತೊಡಿಸುವ ವೇಳೆ, ಉಡುಗ ತೊಡುಗೆಗಳಲ್ಲಿ ಎಲ್ಲವು ಹಸಿರು ಬಣ್ಣದ್ದಾಗಿರಬೇಕು ಎಂದು ಹಿರಿಯರು ಹೇಳುತ್ತಾರೆ. ಏಕೆಂದರೆ ಹಸಿರು ಬಣ್ಣವು ಶುಭವು. ಆಕರ್ಷಕವು ಆದ ಬಣ್ಣ. ಸಮೃದ್ಧಿಯ ಸಂಕೇತ. ಇದು ಮನಸ್ಸನ್ನು ಶಾಂತವಾಗಿಡಲು ಪ್ರೇರೇಪಿಸುತ್ತದೆ. ಬಳೆ ತೊಡಿಸಿದ ಹಾಡಿನಲ್ಲಿ ಬಳೆಯ ನೀಡಲು ಬರುವುದು. ಅದನ್ನು ನಿನಗೋಸ್ಕರವೇ ತರಲಾಗಿದೆ ಎಂದು ಹೇಳುವುದು. ಬಳೆಯನ್ನು ತೊಡಿಸಿದ ಪರಿ ಎಲ್ಲವನ್ನು ಹೇಳಲಾಗುತ್ತದೆ. ಈ ಹೊಗಳಿಕೆಯ ಮಾತುಗಳೆಲ್ಲವು ಗರ್ಭಿಣಿಯಲ್ಲಿ ತನ್ನ ಬಗೆಗೆ ಒಂದು ರೀತಿಯ ಅಭಿಮಾನ, ಗೌರವವನ್ನು ಮೂಡಿಸುತ್ತದೆ. ಹೀಗೆ ತಾಯಿಯ ಮನಸ್ಸನ್ನು ಸಂತೋಷವಾಗಿ ನೋಡಿಕೊಂಡು ಮಗುವಿನ ಆರೋಗ್ಯವು ಚೆನ್ನಾಗಿರುವಂತೆ ನೋಡಿಕೊಳ್ಳಲಾಗುತ್ತದೆ. ಏಕೆಂದರೆ ತಾಯಿಯ ಮನಸ್ಸಿನ ಪ್ರಭಾವ ಮಗುವಿನ ಮೇಲಾಗುತ್ತದೆ.

ಬಳೆಯನ್ನು ನೀಡಲು ಬಂದು ಈ ಹಾಡನ್ನು ಹೇಳುತ್ತಾರೆ.

ಬಳೆಯ ನೀಡಲು ಬಂದ । ರಜತಾದ್ರಿಯಿಂದ । ತನ್ನ

ಮಡದಿಯರರಿಯದಂತೆ । ವರದ ನಂಜುಂಡ।

ಹಾವಿಗೆಯನ್ನೇ ಮೆಟ್ಟಿ । ಹಾವು ಶಿರಕೆ ಸುತ್ತಿ

ಕಾವಿ ಬಟ್ಟೆಯನ್ನುಟ್ಟಿ । ಕೈಲಾಸ ಬಿಟ್ಟು

ಹೀಗೆ ಮುಂದುವರೆದು ಬಳೆಯು ಯಾವ ರೀತಿಯದು. ಹೇಗೆ ಚಿತ್ತಾರವಾಗಿದೆ ಇತ್ಯಾದಿ ವಿಷಯವನ್ನು ಹಾಡಿನಲ್ಲಿ ಹೇಳಲಾಗಿದೆ. ಬಳೆಯನ್ನು ತೊಡಿಸುವಾಗ ಹಾಡನ್ನು ಹಾಡುತ್ತಾರೆ.

ಬಳೆಯು ತೊಡಿಸಿದರು

ವಿಲಸಿತ ಗುಣಯುತೆ । ಗಿರಿಸುತೆಗೇ

ಕುಸುಮಾಸ್ತ್ರನ ಪಾಲಿಸಿ । ಜಸವಂ ತಳೆದಾ ಮಹಾ ।

ಬಿಸಜಾಯತ ಸೀತೆಗೆ । ಶಶಿಮಕುಟೆಗೆ ಸಂ । ತಸದಿಂದಲಿ

ಉಡಿ ತುಂಬುವಾಗ ಸೆರಗನ್ನು ಎಡಗೈಯಿಂದ ತಂದು ತೊಡೆಯ ಮೇಲೆ ಹಾಸಿ ಅದಕ್ಕೆ ಮಂಗಳದ್ರವ್ಯವನ್ನು (ತಿಂಡಿ. ತಿನಿಸು. ಹಣ್ಣು, ಹಂಪಲು, ಅರಿಶಿನ, ಕುಂಕುಮ) ತುಂಬುತ್ತಾರೆ.

ಮಡಲನು ತುಂಬಿದರ್ ಮಡದಿರನ್ನೆಗೆ ಬೇಗ

ಅರಿಶಿನ ಕೊನೆಗಳು । ಹೆರೆದ ಕೊಬ್ಬರಿಗಿಟುಕು

ಅಂದವಾದ ತಟ್ಟೆಯಲ್ಲಿ । ತೆಂಗಿನ ಫಲವನಿರಿಸಿ ।

ಬಿಳಿಯ ಚಕ್ಕೋತದಹಣ್ಣು । ಬೆಳೆದ ಮಾದಳಹಣ್ಣು

ಕಳಿತ ಕದಳಿ ಹಣ್ಣು । ಎಳೆಯ ವೀಳ್ಯವ ನಿರಿಸೀ

ಹಸಿದಹಲಸಿನ ಹಣ್ಣು । ರಸದ ದ್ರಾಕ್ಷಿಯ ಹಣ್ಣು

ರಸಪುರಿ ಮಾವಿನಹಣ್ಣು । ಕಸಿಯ ಸೀಬೆಹಣ್ಣು

ಕೊಬ್ಬರಿ, ಅರಿಶಿನ, ಕುಂಕುಮ, ಬೆಲ್ಲ, ವೀಳ್ಯದೆಲೆ, ಸೀರೆ, ರವಿಕೆ ಇವುಗಳನ್ನು ಮಂಗಳ ದ್ರವ್ಯಗಳೆಂದು ಕರೆಯಲಾಗುತ್ತದೆ. ಜಾನಪದ ಸಾಹಿತ್ಯದಲ್ಲಿ ನಿರಂತರ ಬದಲಾವಣೆ ಸಹಜ. ಏಕೆಂದರೆ, ನಾವು ಹೊಂದಿಕೊಂಡಿರುವ ಸಾಮಾಜಿಕ ಪರಿಸರ ಮತ್ತು ಸಂದರ್ಭಗಳು ನಮ್ಮ ದೃಷ್ಟಿಕೋನವನ್ನು ಬದಲಿಸಿಬಿಡುತ್ತದೆ. ಸಾಹಿತ್ಯ ರಚನಾಕಾರರು ತಮ್ಮ ವಲಯದಲ್ಲಿಯೇ ಉಳಿದು ಇನ್ನೊಂದು ವಲಯದ ಪರಿಕರಗಳನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಾರೆ. ಜನಪದ ಸಾಹಿತ್ಯವು ಇದರಿಂದ ದೂರ ಉಳಿದಿಲ್ಲ. ಇದಕ್ಕೆ ಆಧಾರವಾಗಿ ನಾವು ಸಂಪ್ರದಾಯದ ಹಾಡುಗಳಲ್ಲಿ ಹೊಸ ಬಗೆಯ ಸಂಪ್ರದಾಯಕ್ಕೆ ಹೊಂದಿಕೊಂಡಿರುವ ಹಾಡುಗಳನ್ನು ಕಾಣಬಹುದು. ಬದಲಾವಣೆ, ಸ್ವೀಕರಣೆ, ಅನುಕರಣೆ ಇವು ರಾಜಕೀಯ, ಆರ್ಥಿಕ, ಸಾಮಾಜಿಕ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಸರ್ವೇಸಾಮಾನ್ಯ. ಸಾಮಾನ್ಯ ಅಂಶಗಳನ್ನು ಒಳಗೊಂಡ ಜನಪದ ಹಾಡುಗಳಲ್ಲಿ ಬದಲಾವಣೆಯನ್ನು ಕಂಡರೂ ಕೆಲವು ಸಂಪ್ರದಾಯದ ಹಾಡುಗಳ ವಿಷಯದಲ್ಲಿ ಸ್ವಲ್ಪ ಬಿಗಿ ನೀತಿಯಿರುತ್ತದೆ. ಅದು ತನಗೆ ಒಗ್ಗದ ಭಿನ್ನವಾದ ಸಂಗತಿಗಳನ್ನು ದೂರವಿಡುತ್ತದೆ. ತನ್ನದೇ ಆದ ಚೌಕಟ್ಟಿನ ಒಳಗೆ ಬೆಳೆಯುತ್ತಿರುತ್ತದೆ. ಆದರೆ ಇಲ್ಲಿ ಸಂಪ್ರದಾಯದಂತಹ ಹಾಡುಗಳು ಕೂಡ ಆಧುನಿಕ ಭಾಷೆಯ ಶೈಲಿ, ಜೀವನ ವಿಕಾಸಕ್ಕೆ ತಕ್ಕ ಹಾಗೆ ರಚನೆ ಬದಲಾಗಿರುವುದನ್ನು ಕಾಣುತ್ತೇವೆ. ಆದರೂ ಸಂಪ್ರದಾಯದ ಮುಂದುವರಿಕೆ, ಆಚರಣೆ ಹಿಂದಿನದೇ ಆಗಿದೆ.

ಆಹಾ । ಈ ಕಲಿಯುಗ ಗರ್ಭಿಣಿಯರಪೇಕ್ಷೆ ಪರಿಯನೂ

ಸಿರಿ ಗಿರಿಜೆಯರು ಪೂರ್ವಯುಗವಲರಿಯರು

ಷಣ್ಮುಖನ ಭಜಿಸಿ ಶಾರದೆಯ ವಂದಿಸಿ

ಕನ್ನೆ ಗರ್ಭ ಚಿಹ್ನೆ ಸೂಚನೆಯನ್ನು ವಿರಚಿಸೀ

ಇಂದಿನ ಸ್ತ್ರೀಯರಿಗೆ ತಿಂಗಳಾಗಲು

ಕಂದಿ ಕಂದಿ ಬಳಲುತಾರು ತಿಂಗಳಾಗಲು

ರೂಬಿ ಕ್ಯಾಟ್ ಸೋಪು ಮುಖಕೆ ಹಾಟ್ ವಾಟರೂ

ಟೂತ್ ಬ್ರಷ್ ಹ್ಯಾಂಡ್ ಕರ್ಚೀಫ್ ವೈಟ್ ಪೌಡರೂ

ಕೇಸರಂಜನ ಕುಸುಮತೈಲ ರಾಣಿ ತೈಲವು

ಮಹಾರಾಣಿ ತೈಲ ಮಲ್ಲಿಗೆ ಚಂಪಕ ತೈಲವು

ಸಲಿಗೆ ಕಾಸಿನ ಸರವು ಕಾಪು ಗೊಲಸುತೋಡವು

ಪದಕ ನಾಗ ಮುರಿಗೆ ಮಂಗಳೂರ್ ಬಳೆಯ ಬಯಕೆಯು . . . .

ಮೇಲ್ನೋಟಕ್ಕೆ ಈ ಹಾಡು ಆಧುನಿಕ ಮಹಿಳೆಯೊಬ್ಬಳ ಬಯಕೆಯನ್ನು ಹೇಳುತ್ತಿದ್ದರೂ ಪರೋಕ್ಷವಾಗಿ ಪರಂಪರಾನುಗತವಾದ ಸಂಸ್ಕೃತಿ, ಸಂಪ್ರದಾಯವೊಂದರ ಅಳಿವನ್ನು ಸೂಚಿಸುತ್ತದೆ. ನಗರೀಕರಣ, ಪಾಶ್ಚಿಮಾತ್ಯ ಆಕ್ರಮಣ ಪ್ರಭಾವ, ಸ್ಥಳೀಯ ಸಂಸ್ಕೃತಿಯೊಂದನ್ನು ಹೇಗೆ ನಾಶಗೊಳಿಸುತ್ತದೆ ಎಂಬುದರ ಸೂಚಕವಾಗಿದೆ. ತಂತ್ರಜ್ಞಾನ, ವಿಜ್ಞಾನಗಳ ಬೆಳವಣಿಗೆಯನ್ನು ಸೂಚಿಸುತ್ತದೆ. ಆಧುನಿಕ ಯುಗದಲ್ಲಿ ಸಂಪ್ರದಾಯ ಹಾಡುಗಳನ್ನು ಮೂಲೆ ಗುಂಪಾಗಿಸಿ ಇತರ ಸಾಹಿತ್ಯ ಪ್ರಕಾರಗಳನ್ನು ಒಲೈಸುವ ಸಹೃದಯನಿಗೆ ಕಾಲಕ್ಕೆ ತಕ್ಕಹಾಗೆ ರೂಪೀಕರಣಗೊಂಡು ತನ್ನ ತನವನ್ನು ಉಳಿಸಿಕೊಂಡು ಹತ್ತಿರವಾಗುವ ಪ್ರಯತ್ನವೇನೋ ಎನಿಸುತ್ತದೆ. ಹೊಸ ಪರಂಪರೆಯನ್ನು ಪ್ರತಿನಿಧಿಸುತ್ತದೆ. ಸ್ತ್ರೀ ಬಗೆಗಿನ ಹಿಂದಿನ ಕಟ್ಟಳೆಗಳು ಸ್ವಲ್ಪ ಸಡಿಲಗೊಂಡಿರುವುದು ಕಂಡು ಬರುತ್ತದೆ. ಜನಪದ ಗೀತೆಗಳ ಮೇಲೆ ಆಂಗ್ಲರ ಪ್ರಭಾವ ಬದಲಾವಣೆಗೆ ಕಾರಣಗೊಳಲ್ಲೊಂದಾಗಿದೆ. ಈ ಹಾಡಿನಲ್ಲಿ ಬಳಸಿರುವ ಇಂಗ್ಲೀಷ್ ಪದಗಳಾದ ರೂಜಿಕ್ಯಾಟ್ ಸೋಪು, ಮುಖಕೆ ಹಾಟ್‌ವಾಟರ್, ಟೂತ್‌ಬ್ರಷ್, ಹ್ಯಾಂಡ್‌ಕರ್ಚೀಫ್, ವೈಟ್‌ಪೌಡರ್, ಹಲವು ಬಗೆಯ ತೈಲಗಳು, ಸೆರಟು ಕಾಲ್ ಚೀಲ, ಬೂಡ್ಸು, ಪರಂಗಿ ಡ್ರೆಸ್ಸಗಳು ಮುಂತಾದವು. ಆಧುನಿಕ ಸಂಪ್ರದಾಯ ಉಡುಗೆ-ತೊಡುಗೆಗಳಲ್ಲೂ ಬದಲಾವಣೆ ತಂದಿರುವುದನ್ನು ಸೂಚಿಸುತ್ತದೆ. ಅದು ತಿಂಡಿ ತೀರ್ಥಗಳನ್ನು, ಚಕ್ಕುಲಿ, ಆರತಿಉಂಡೆ, ಕಾಳುಗಳಿಂದ ಮಾಡಿದ ತಿನಿಸುಗಳ ಜಾಗದಲ್ಲಿ ಬೆಣ್ಣೆಬಿಸ್ಕತ್, ಬ್ರೆಡ್‌ಲಿಂಬ್ಲೆಡ್, ಸೋಡಾವಾಟರುಗಳು ಬಂದಿವೆ. ಹಿರಿಯರ ಕಣ್ಗಾವಲಿನಿಂದ ದೂರವಾಗದೆ ಸದಾ ಜೊತೆಯಲ್ಲಿದ್ದು ಮನೆಯಲ್ಲೇ ವಿಶ್ರಾಂತಿ ಆರೈಕೆ ಪಡೆಯುತ್ತಿದ್ದ ಗರ್ಭಿಣಿ ಸ್ತ್ರೀಯು ಈಗ ಮೋಟಾರಿನಲ್ಲಿ ಸುತ್ತಾಟ, ಊರುಗಳ ತಿರುಗಾಟ ಆರಂಭಿಸಿದ್ದಾಳೆ. ನಾಲ್ಕು ಗೋಡೆಗಳ ಮಧ್ಯೆ ಸೀಮಿತ ಪ್ರಪಂಚದಲ್ಲಿದವಳು ಈಗ ಹೊರ ಜಗತ್ತಿನೊಂದಿಗೆ ತೆರೆದುಕೊಳ್ಳಲಿಚ್ಚಿಸಿರುವುದು ಕಂಡು ಬರುತ್ತದೆ. ಈ ಹಾಡನ್ನು ನೋಡಿದಾಗ ಸುಮಾರು ನೂರು-ನೂರೈವತ್ತು ವರ್ಷಗಳಿಂದೆ ರಚಿಸಿರಬೇಕು ಎಂದು ತಿಳಿದುಬರುತ್ತದೆ. ಇದು ಇತ್ತೀಚಿನ ಕಾಲದವರೆಗೂ ಜನಪದ ಸಾಹಿತ್ಯದ ಸೃಷ್ಟಿಕ್ರಿಯೆ ನಡೆಯುತ್ತಿತ್ತು ಎಂಬುದನ್ನು ತಿಳಿಸುತ್ತದೆ.

ಉ. ಚೌಲೋಪನಯನದ ಹಾಡುಗಳು :-

ಹೆಣ್ಣಿಗೆ ಪ್ರಕೃತಿದತ್ತವಾಗಿ ಬಂದೊದಗುವ ಕ್ರಿಯೆಗಳನ್ನು ಸಂಪ್ರದಾಯ ಬದ್ಧವಾಗಿ ಹೆಣ್ಣಿಗೆ ನೆರವೇರಿಸಲಾಗುತ್ತದೆ. ಆದರೆ, ಗಂಡು ಮಕ್ಕಳಿಗೆ ಅಂತಹ ಯಾವುದೇ ಕ್ರಿಯೆಗಳ ಆಚರಣೆ ಇಲ್ಲವಾದರೂ, ಬೇರೆ ರೀತಿಯ ಆಚರಣೆಗಳನ್ನು ಮಾಡಲಾಗುತ್ತದೆ. ಬ್ರಾಹ್ಮಣ ಕುಟುಂಬಗಳು ಗಂಡು ಮಕ್ಕಳಿಗೆ ಚೌಲಪಂಕ್ತಿ ಮತ್ತು ಉಪನಯನ ಎಂಬ ಸಂಸ್ಕಾರ ವಿಧಿಗಳನ್ನು ಬಹಳ ಸಂಭ್ರಮ.

ಸಡಗರದಿಂದ ನಡೆಸುತ್ತಾರೆ. ಗಂಡಿಗೆ ಹೆಣ್ಣಿನಂತೆ, ಮಡಿ, ಮೈಲಿಗೆಗಳು ಇಲ್ಲವಾದ್ದರಿಂದ ಧಾರ್ಮಿಕ ವಿಚಾರಗಳಲ್ಲಿ ಹೆಚ್ಚು ಪ್ರಾಶಸ್ತ್ಯ. ಚೌಲೋಪನಯನ ಹಾಗೂ ಆಶ್ರಮ ಕ್ರಿಯಾ ವಿಧಿಗಳು ಇತರ ಗ್ರಾಮೀಣ, ಬುಡಕಟ್ಟು ಜನಾಂಗದಲ್ಲಿ ಇಲ್ಲ. ಬ್ರಾಹ್ಮಣ ಸಂಪ್ರದಾಯಸ್ಥ ಕುಟುಂಬದಲ್ಲಿ ಈ ರೀತಿಯ ಪದ್ಧತಿಯಿದೆ. ವೇದಕಾಲಗಳಿಂದಲೂ ಇಂತಹ ಆಚರಣೆಯನ್ನು ನಡೆಸಿಕೊಂಡು ಬಂದಿದ್ದಾರೆ. ಗಂಡು ಸಂತಾನ ತಮ್ಮ ಮುಕ್ತಿ, ಮೋಕ್ಷಕ್ಕೆ ದಾರಿಯಾಗಿದ್ದರಿಂದ ಹಾಗೂ ವೃದ್ದಾಪ್ಯದಲ್ಲಿ ಗಂಡು ಮಕ್ಕಳು ಆಸರೆಯಾಗುತ್ತಾರೆ ಎಂಬ ಉದ್ದೇಶದಿಂದ ಗಂಡು ಮಕ್ಕಳ ಬಗ್ಗೆ ಹೆಚ್ಚು ಕಾಳಜಿ, ಜೊತೆಗೆ ತಮ್ಮ ಮಗ ಕೀರ್ತಿವಂತನು ವಿದ್ಯಾವಂತನು ಆಗಬೇಕೆಂದು ಕೆಲವು ಕಟ್ಟು-ನಿಟ್ಟಾದ ಕ್ರಿಯಾವಿಧಿಗಳನ್ನು ಅನುಸರಿಸುತ್ತಾರೆ. ಅದುವೇ ಉಪನಯನ ಪದ್ಧತಿ. ಹೆಣ್ಣು ಮಕ್ಕಳಿಗೆ ಮನೆಯ ಕೆಲಸಗಳಲ್ಲಿ ಎಷ್ಟು ಪ್ರಾವಿಣ್ಯತೆ, ಶ್ರದ್ಧೆ ಮುಖ್ಯವೋ ಗಂಡು ಮಕ್ಕಳಿಗೆ ಹೊರಗಿನ ವಾತಾವರಣ, ವ್ಯವಹಾರ, ಸಾಮಾಜಿಕ ಪ್ರಜ್ಞೆ, ಅಷ್ಟೇ ಅವಶ್ಯವೆಂದು ಹಿರಿಯರು ತಿಳಿದಿದ್ದರು. ಈ ವಿಚಾರವನ್ನು ಗಂಡುಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಅರ್ಥೈಸುವ ಪ್ರಯತ್ನವನ್ನು ಮಾಡುತ್ತಿದ್ದರು. ಗಂಡು ಅಲಂಕಾರದ ಕಡೆ ಹೆಚ್ಚು ಗಮನ ಕೊಡಬಾರದು ಎಂಬ ಕಾರಣಕ್ಕೆ ಮುಂಗೂದಲನ್ನು ತೆಗೆಸಿ ಹಿಂದಕ್ಕೆ ಶಿಖೆ ಇಡುವ ಪದ್ಧತಿಯನ್ನು ಮಾಡುತ್ತಾರೆ. ಇದು ಮಾನಸಿಕವಾಗಿ, ಬೌದ್ಧಿಕವಾಗಿ ಗಂಡಿಗೆ ತನ್ನತನವನ್ನು ಅರಿತುಬಾಳುವಂತೆ ಪ್ರೇರಣೆಗೆ ಒಳಪಡಿಸುತ್ತದೆ.

ಹೆಣ್ಣು ಮಕ್ಕಳಿಗೆ ಹಾಡು ಹಸೆಗಳನ್ನು ಕಲಿಸಿದರೆ ಗಂಡು ಮಕ್ಕಳಿಗೆ ವೇದ, ಮಂತ್ರಗಳು, ಉಪನಿಷತ್ತುಗಳನ್ನು ಕಲಿಸುತ್ತಿದ್ದರು. ಹೆಣ್ಣಿಗೆ ಋತುಮತಿಯಾದಾಗ, ಬಸಿರು-ಬಾಣಂತನ, ವಿವಾಹಗಳಂತಹ ಕರ್ಮಗಳನ್ನು ಆಚರಿಸಿದರೆ, ಗಂಡುಮಕ್ಕಳಿಗೆ ಧರ್ಮಶಾಸ್ತ್ರ ವಿಚಾರಕ್ಕೆ ಸಂಬಂಧಪಟ್ಟಂತೆ ಚೌಲ, ಉಪನಯನ, ವಿವಾಹದಂತಹ ಕರ್ಮಗಳನ್ನು ನೆರವೇರಿಸಲಾಗುತ್ತದೆ. ಉಪನಯನ ಚೌಲದಂತಹ ಪದ್ಧತಿಗಳು ಅಷ್ಟಾಗಿ ಬೇರೆ ಯಾವ ಜನಾಂಗದ ಸಂಪ್ರದಾಯದಲ್ಲಿ ಇಲ್ಲ. ಮುಸ್ಲಿಂ ಧರ್ಮದಲ್ಲಿ ಇದೇ ರೀತಿ ಮಕ್ಕಳಿಗೆ ಮುಂಜಿ ಮಾಡುತ್ತಾರೆ. ಇದನ್ನು ಬಿಟ್ಟರೆ ಬೇರೆಯವರಲ್ಲಿ ಈ ಒಂದು ಪದ್ಧತಿ ಕಂಡುಬರುವುದಿಲ್ಲ.

ಬ್ರಾಹ್ಮಣ ಸಂಪ್ರದಾಯದಲ್ಲಿ ಗಂಡುಮಕ್ಕಳಿಗೆ ಏಳು ವರ್ಷವಾಗುತ್ತಲೇ ಬ್ರಹ್ಮೋಪದೇಶ ಅಥವಾ ಉಪನಯನವೆಂಬ ಕ್ರಿಯಾವಿಧಿಗಳನ್ನು ನೆರವೇರಿಸುತ್ತಾರೆ. ಇದನ್ನೇ ಹಿಂದೆ ಬ್ರಹ್ಮಚಾರ್ಯಶ್ರಮ ಎಂದು ಕರೆಯುತ್ತಿದ್ದರು. ಇಂತಹ ಆಶ್ರಮ ವಿದ್ಯೆಯನ್ನು ಕಲಿಯಲು ಗಂಡುಮಕ್ಕಳು ಎಲ್ಲಾ ಸುಖವನ್ನು ತ್ಯಾಗಮಾಡಿ ಅಂದರೆ ಇಂದ್ರಿಯಗಳ ಮೇಲೆ ಹಿಡಿತವನ್ನು ಸಾಧಿಸಿ, ಗುರುಕುಲದಾಸನಾಗಿ, ಗುರುಸೇವೆ ಮಾಡಿ, ಗುರುಕೃಪೆಯನ್ನು ಸಂಪಾದಿಸಿ ವಿದ್ಯೆ ಕಲಿತು ಪಾಂಡಿತ್ಯವನ್ನು ಸಂಪಾದಿಸಬೇಕಾಗಿತ್ತು. ಈ ಕಟ್ಟುಪಾಡುಗಳು ಮುಗಿದ ನಂತರವು ತಾನು ಏನೇ

ಮಾಡಬೇಕಾದರೂ ಎಲ್ಲವನ್ನು ತನ್ನ ಸಂಪ್ರದಾಯದಲ್ಲಿನ ಧರ್ಮಮಾರ್ಗವನ್ನು ಅನುಸರಿಸಿಯೇ ಮಾಡಬೇಕು. ಊಟ, ಉಡುಗೆ, ನಿದ್ದೆ, ಪ್ರತಿಯೊಂದನ್ನು ಹೀಗೆ ಮಾಡಬೇಕೆಂಬ ನಿರ್ಬಂಧವಿರುತ್ತಿತ್ತು. ಅವುಗಳನ್ನು ಹುಡುಗನಿಗೆ ಅರ್ಥವಾಗುವ ಹಾಗೆ ಸೂಕ್ತವಾಗಿ ತಿಳಿಸುವ ಸಲುವಾಗಿ ಹಲವು ಶಾಸ್ತ್ರಗಳನ್ನು ಮಾಡುತ್ತಿದ್ದರು. ಪುಣ್ಯಾಹ, ನಾಂದಿ, ನವಗ್ರಹಹೋಮ, ಪೂಜಾ, ಮಾತೃಸಹಭೋಜನ ಅಥವಾ ಚೌಲಪಂಕ್ತಿ, ಯಜ್ಞೋಪವೀತಧಾರಣ ಮತ್ತು ಬ್ರಹ್ಮೋಪದೇಶ, ಮಾತೃಭಿಕ್ಷೆ, ಇಷ್ಟೂ ಶಾಸ್ತ್ರಗಳನ್ನು ಉಪನಯನದ ಸಮಾರಂಭದಲ್ಲಿ ಮಾಡುತ್ತಾರೆ. ಈ ಶಾಸ್ತ್ರಗಳು ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಹೀಗೆ ಎಲ್ಲಾ ರಂಗಗಳಲ್ಲು ಹುಡುಗನನ್ನು ಸಮರ್ಥನನ್ನಾಗಿಸಿ ಸಾತ್ವಿಕ ಜೀವನ ನಡೆಸಲು ಅಣಿಗೊಳಿಸುತ್ತಿದ್ದರು. ಅವುಗಳನ್ನು ಹೀಗೆ ಗಮನಿಸಬಹುದು.

೧. ಪುಣ್ಯಾಹಃ :– ಗಣಪತಿ, ಶಾರದೆ ಮುಂತಾದ ದೇವತೆಗಳೊಂದಿಗೆ ಪಂಚಭೂತಗಳಾದ ಪೃಥ್ವಿ, ಅಪ್, ತೇಜಸ್ಸು, ವಾಯು, ಆಕಾಶಗಳನ್ನು ಪೂಜಿಸಿ ಸ್ಥಳಶುದ್ಧಿ, ಮನಶುದ್ಧಿ, ಆತ್ಮಶುದ್ಧಿಗಾಗಿ ನಡೆಸುವ ಕಾರ್ಯಕ್ರಮವಾಗಿದೆ.

೨. ನಾಂದಿ :– ಕುಲದೇವರುಗಳನ್ನು, ಹಿರಿಯ ಪಿತೃಗಳನ್ನೂ, ಸಪ್ತಮಾತೃಕೆಯರನ್ನು ಆವಾಹಿಸಿ ಪೂಜೆ ಮಾಡಿ ತಮ್ಮ ಕಾರ್ಯ ಪ್ರಾರಂಭಕ್ಕೆ ಅವರಿಂದ ಆಶೀರ್ವಾದ ಅನುಗ್ರಹವನ್ನು ಬೇಡುವ ಕ್ರಮ.

೩. ನವಗ್ರಹ ಹೋಮ : – ತಮ್ಮ ಜೀವನದಲ್ಲಿ ಯಾವುದೇ ಕಷ್ಟಗಳು, ಎಡರು–ತೊಡರುಗಳು ಬಾರದಂತೆ ನವಗ್ರಹಗಳನ್ನು ಪೂಜಿಸುವ ಸಂಪ್ರದಾಯವೇ ನವಗ್ರಹ ಹೋಮ.

೪. ಮಾತೃಸಹಭೋಜನ ಅಥವಾ ಚೌಲಪಂಕ್ತಿ :– ಹುಟ್ಟಿದಾಗಿನಿಂದ ತಾಯಿಯ ಜೊತೆಯಲ್ಲಿ ಊಟ ಮಾಡುತ್ತಾ ಬೆಳೆದ ಮಗುವಿಗೆ ಬ್ರಹ್ಮೋಪದೇಶಕ್ಕೆ ಮುಂಚೆ ಮಾತೃಭೋಜನವನ್ನು ಕೊನೆಗೊಳಿಸಿ ಪರಿಶುದ್ಧನಾಗಬೇಕೆಂಬುದು ಇದರ ಉದ್ದೇಶ.

೫. ಯಜ್ಞೋಪವೀತಧಾರಣ ಮತ್ತು ಬ್ರಹ್ಮೋಪದೇಶ :– ವಿದ್ಯಾರ್ಥಿಯಾದವನಿಗೆ ಅಗತ್ಯವಾದ ಏಕಾಗ್ರತೆಯನ್ನು ಹೊಂದಲು ಅನುಸರಿಸಬೇಕಾದ ಮಾರ್ಗವನ್ನು ಬೋಧಿಸುತ್ತದೆ. ವಿದ್ಯಾರ್ಥಿಯಾದವನು ಹೇಗೆ ನಡೆದುಕೊಳ್ಳಬೇಕೆಂಬುದನ್ನು ತಿಳಿಸುತ್ತದೆ. ಈ ಅಂಶಗಳನ್ನೆಲ್ಲಾ ಹಾಡುಗಳಲ್ಲಿ ಸೂಚಿಸಲಾಗಿದೆ. ಹೆಸರೇ ಸೂಚಿಸುವಂತೆ ಉಪದೇಶ ಅಂದರೆ ಬೋಧಿಸು. ಉಪನಯನವು ವಿದ್ಯಾರ್ಥಿಗಳಿಗೆ ಹಿಂದಿನ ಕಾಲದಲ್ಲಿ ವಿದ್ಯಾಭ್ಯಾಸಕ್ಕೆ ಬ್ರಾಹ್ಮಣರು ಎಷ್ಟು ಪ್ರಾಮುಖ್ಯತೆಯನ್ನು ನೀಡುತ್ತಿದ್ದರೆಂಬುದನ್ನು ತಿಳಿಸುತ್ತದೆ. 'ಹೃದಯ ಸಂಪುಟ'ಗ್ರಂಥದಲ್ಲಿ ಉಪನಯದ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಚೌಲೋಪನಯನದ ಹಾಡು. ಶ್ರೀಕೃಷ್ಣ

ಉಪನಯದ ಹಾಡು. ಶ್ರೀರಾಮನ ಮುಂಜಿ ಹಾಡು. ದಶರಥನು ಶ್ರೀರಾಮನಿಗೆ ಉಪದೇಶ ಕೊಟ್ಟ ಹಾಡು, ಭಿಕ್ಷೆಯನ್ನಿಟ್ಟ ಹಾಡುಗಳನ್ನು ಕಾಣಬಹುದು.

ಚೌಲೋಪನಯನದ ಹಾಡು

ಧರಣಿಪತಿ ದಶರಥನು । ವರ ಪುತ್ರರಾ ಚೌಲ ।

ವರಕರ್ಮ ತಾನು ನೆರ । ವೇರಿಸಿದನೂ

ಶ್ರೀರಾಮನ ಮುಂಜಿ ಹಾಡು

ಆಯೋಧ್ಯಪಟ್ಟಣದಿ ರಾಮ । ದಶರಥರಾಯನ ಮಂದಿರದಲ್ಲಿ

ಶಖಿಮುಖಿ ಕೌಸಲ್ಯಗರ್ಭ । ದಲ್ಲಿ ಜನಿಸಿದ ರಾಮಗೀಗ

ದಶರಥನು ಶ್ರೀರಾಮನಿಗೆ ಉಪದೇಶ ಕೊಟ್ಟ ಹಾಡು

ಕೊಟ್ಟನೆ ಉಪದೇಶ । ಶ್ರೀರಾಮಗೆ । ಜನಕ ದಶರಥನೇ ಭೂಪ

ಕೊಟ್ಟನೆ ಉಪದೇಶ । ಏಕಪತ್ನಿಯವ್ರತ ।

ಏಕ ಚಿತ್ತದಿ ನೀನು । ನಡೆಸೋ ಕಂದಯ್ಯ ಎಂದೂ ।

ಈ ಹಾಡಿಗಳು ಮಕ್ಕಳಿಗೆ ದೇವರಲ್ಲಿ, ಗುರು-ಹಿರಿಯರಲ್ಲಿ ಭಕ್ತಿಯನ್ನು, ತಂದೆ-ತಾಯಿಯರಲ್ಲಿ ಪ್ರೀತಿ-ವಾತ್ಸಲ್ಯ, ವಿದ್ಯೆಗೆ ಅವಶ್ಯವಾದ ಏಕಾಗ್ರತೆಯನ್ನು ಬೋಧಿಸುತ್ತವೆ. ಸಂಪ್ರದಾಯದ ಹಾಡುಗಳಲ್ಲಿ ಸಾಮಾಜಿಕ ದೃಷ್ಟಿಯಿಂದ ಸಮಾಜಕ್ಕೆ ಸಾತ್ವಿಕ ನಡೆಯುಳ್ಳ ವ್ಯಕ್ತಿಯನ್ನು ರೂಪಿಸುವ ಅಂಶಗಳನ್ನು ಪ್ರಮುಖವಾಗಿ ಗುರುತಿಸಬಹುದು.

ಊ. ಮದುವೆಯ ಹಾಡುಗಳು :-

ಮದುವೆ ಮನುಷ್ಯನ ನಾಗರೀಕ ಬದುಕಿಗೆ ಕಾರಣವಾದ ಹಲವು ಅಂಶಗಳಲ್ಲಿ ಒಂದು. ಕುಟುಂಬ ವ್ಯವಸ್ಥೆಗೆ ನಾಂದಿ. ಇದು ಮನುಷ್ಯನ ಜೀವನದ ಸಹಜಕ್ರಿಯೆ. ಹಸಿವು, ನಿದ್ರೆ, ಬಾಯಾರಿಕೆ ಮಾನವನಿಗಿರುವ ಪ್ರಕೃತಿದತ್ತವಾದ ಸಹಜ ಗುಣಗಳು. ಕಾಮನೆ ಕೂಡ ಇಂತಹ ಸಹಜ ಗುಣಗಳಲ್ಲಿ ಒಂದಾಗಿದೆ. ಇದರ ಈಡೇರಿಕೆಗಾಗಿ ರೂಪಿಸಿಕೊಂಡ ಪದ್ಧತಿಯೇ ವಿವಾಹ. ಪ್ರಾಚೀನ ಕಾಲದಲ್ಲಿ ಪ್ರಾಣಿಗಳಂತೆ ಬದುಕುತ್ತಿದ್ದ ಮನುಷ್ಯ ಸ್ವಚ್ಛಂದ ಲೈಂಗಿಕಕ್ರಿಯೆಯಲ್ಲಿ ತೊಡಗುತ್ತಿದ್ದ. ನಂತರದ ದಿನಗಳಲ್ಲಿ ತನ್ನ ಯೋಚನಾಲಹರಿ, ವಿಚಾರವಂತಿಕೆಯ ಫಲವಾಗಿ ಒಂದೆಡೆ ನೆಲೆ ನಿಂತು ತನ್ನ ಕುಟುಂಬವನ್ನು ರೂಪಿಸಿಕೊಂಡು ಅದರ ಏಳಿಗೆಗಾಗಿ ಬದುಕಬೇಕು, ದುಡಿಯಬೇಕು ಎಂಬುದರ ಚಿಂತನ ಫಲವೇ "ಮದುವೆ". ಮದುವೆ ಎಂದರೇನು? ಎಂಬುದಕ್ಕೆ ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮೊದಲನೆಯದಾಗಿ ಗಂಡು

ಹೆಣ್ಣಿನ ಸಹಕಾರ ಜೀವನವೇ ಮದುವೆಯ ಹಲವು ಉದ್ದೇಶಗಳಲ್ಲಿ ಒಂದು. ಎರಡನೆಯದಾಗಿ ಸಂತಾನೋತ್ಪತ್ತಿ ಮತ್ತು ವಂಶವಾಹಿನಿಯ ಮುಂದುವರಿಕೆ ಕ್ರಮ.

"ಮದುವೆ ಕೇವಲ ಲೈಂಗಿಕ ಸುಖ ಸಂತಾನ ಅಪೇಕ್ಷೆಯ ಫಲ ಮಾತ್ರವಲ್ಲ. ದಂಪತಿಗಳ ಹಾಗೂ ಆಯಾ ಕುಟುಂಬಸ್ಥರ ಸಾಮಾಜಿಕ ಆಗು ಹೋಗುಗಳಲ್ಲಿ ಸಕ್ರಿಯ ಪಾತ್ರವಹಿಸುವಂಥಹ ಜವಾಬ್ದಾರಿಯುಳ್ಳ ಜೋಡಿಗಳ ಸುವ್ಯವಸ್ಥಿತ ಸಮ್ಮಿಲನ; ಎಂಬ ಅಭಿಪ್ರಾಯವನ್ನು ಅನೇಕ ಮಾನವಶಾಸ್ತ್ರಜ್ಞರು ವ್ಯಕ್ತಪಡಿಸಿದ್ದಾರೆ"[7] ತಾರ್ಕಿಕವಾಗಿ ಮದುವೆಯೆಂಬ ಪರಿಕಲ್ಪನೆಗೆ ಇಷ್ಟು ವೈಜ್ಞಾನಿಕವಾಗಿ. ಸಾಮಾಜಿಕವಾಗಿ ಉತ್ತರವನ್ನು ಕಂಡುಕೊಳ್ಳುವ ವರ್ಗ ಒಂದೆಡೆಯಾದರೆ ಸಂಪ್ರದಾಯಸ್ಥರು ಇದನ್ನು ಶಿಷ್ಟರೂಪದಲ್ಲೇ ವ್ಯಾಖ್ಯಾನಿಸಲು ಇಚ್ಛಿಸುತ್ತಾರೆ. ಮದುವೆಯನ್ನು ಕುರಿತು ಹಲವು ರೀತಿಯ ವ್ಯಾಖ್ಯಾನಗಳನ್ನು ನೀಡಿದ್ದಾರೆ. 'ಋಣಾನುಬಂಧ ರೂಪೇನಾ ಪಶು ಪತ್ನಿ ಸುತಾಲಯ' ಎನ್ನಲಾಗುತ್ತದೆ. ಋಣುನುಬಂಧ ಕೂಡಿಬಂದರೆ ಅವರು ಗಂಡ ಹೆಂಡತಿಯಾಗುತ್ತಾರೆ. ಪುರುಷನು ತನ್ನ ವಂಶದ ಅಭಿವೃದ್ಧಿಗಾಗಿ ವಿವಾಹ ಮಾಡಿಕೊಂಡು ಪಿತೃಗಳಿಗೆ ಸಂತೋಷ ಕೊಡುತ್ತಾನೆ. 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ನಿಯಮವಿದೆ. ಇವೆಲ್ಲ ಹಿಂದೂ ಧರ್ಮಶಾಸ್ತ್ರದ ಪ್ರಕಾರ ವಿವಾಹಕ್ಕೆ ಕಾರಣಗಳನ್ನು ನೀಡುವ ವಿಧಾನ. ಪುರುಷ ಏನೇ ಕಾರ್ಯಗಳನ್ನು ಮಾಡಿದರೂ ಅದು ಧರ್ಮದ ಮುಖೇನವೇ ಆಗಬೇಕು ಎಂಬುವುದು ಸಂಪ್ರದಾಯಸ್ಥರ ಮಾತು. ಹಾಗಾಗಿ. ಮದುವೆ ಒಂದು ಸಾಂಪ್ರದಾಯಿಕ ಆಚರಣೆ. ಗಂಡು ಹೆಣ್ಣು ತಮ್ಮಷ್ಟಕ್ಕೆ ತಾವು ಒಂದಾಗುವುದನ್ನು ಒಪ್ಪುವುದಿಲ್ಲ. ಆದಕ್ಕೆ ಕುಲಮೂಲ. ಗುರುಮೂಲ. ದೈವಮೂಲಗಳ ಹಿರಿಯರ ಒಪ್ಪಿಗೆ ಅಗತ್ಯ. ಇವರ ಒಪ್ಪಿಗೆಯೊಂದಿಗೆ ಸತಿಪತಿಯಾಗಿ. ಬಾಳ ಪಯಣದಲ್ಲಿ ಒಂದಾಗಬೇಕು. ಇದಕ್ಕೆ ಅನುಗುಣವಾಗಿ ಶಾಸ್ತ್ರ ಸಂಪ್ರದಾಯಗಳನ್ನು ಮಾಡಬೇಕಾಗುತ್ತದೆ. ಇದನ್ನು ಮದುವೆ ಶಾಸ್ತ್ರ ಎಂತಲೂ ಕರೆಯುತ್ತಾರೆ. ಹೀಗೆಂದು ಜನಪದ ತಜ್ಞರಾದ ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಹೇಳುತ್ತಾರೆ. ಈ ಕಾರಣದಿಂದಲೇ ಹಿರಿಯರು. ಮನೆಮದಿ. ಪುರೋಹಿತರು ಮುಂದೆ ನಿಂತು ಸಂಪ್ರದಾಯ ಶಾಸ್ತ್ರಗಳಿಗೆ ಅನುಗುಣವಾಗಿ ಮದುವೆ ಕಾರ್ಯವನ್ನು ನೆರವೇರಿಸುತ್ತಾರೆ. ಹಾಗಾಗಿ ಇದು ಒಂದು ಸಂಭ್ರಮದ ಆಚರಣೆಯು ಆಗಿದೆ. ಆದರೆ ಈ ಶಾಸ್ತ್ರಗಳ ಬಗ್ಗೆ ಯೋಚಿಸಿದಾಗ ಇದರ ಉದ್ದೇಶವೇನು ಎನ್ನುವ ಪ್ರಶ್ನೆ ಮೂಡದೆ ಇರಲಾರದು. ತಾವು ಬದುಕಿರುವ ಅಷ್ಟು ದಿನ ಒಟ್ಟಿಗೆ ಒಬ್ಬರಿಗೊಬ್ಬರು ಸಹಕಾರದಿಂದ ಬಾಳುವಂತೆ ಮಾಡುವಲ್ಲಿ ಅವರ ಭಾವನೆಗಳ, ಮಿಡಿತಗಳ ಬೆಸೆಯುವಿಕೆ ಈ ಶಾಸ್ತ್ರಗಳ ಮುಖೇನ ಆಗುತ್ತದೆ. ಇವು ಮಾನಸಿಕವಾಗಿ ಅವರನ್ನು ವಿವಾಹ ಬಂಧನಕ್ಕೆ ಒಳಗು ಪಡಿಸಲು ಕಾರಣವಾಗಿದೆ. ಮದುವೆಯ ಉದ್ದೇಶ, ಅಪೇಕ್ಷೆ ಒಂದೇ ಆದರೂ. ಸಂಪ್ರದಾಯ, ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಒಂದು

ಜನಾಂಗದಿಂದ ಇನ್ನೊಂದು ಜನಾಂಗಕ್ಕೆ ದೇಶದಿಂದ ದೇಶಕ್ಕೆ, ಧರ್ಮದಿಂದ ಧರ್ಮಕ್ಕೆ ಭಿನ್ನವಾಗಿರುತ್ತದೆ.

ಸಂಪ್ರದಾಯದ ಹಾಡುಗಳು ಗ್ರಂಥದಲ್ಲಿ ಬರುವ ಮದುವೆ ಸಂಬಂಧಿ ಹಾಡುಗಳು ಬ್ರಾಹ್ಮಣ ಸಂಪ್ರದಾಯದಲ್ಲಿ ಆಚರಿಸುವ ಆಚರಣೆಯ ಹಿಂದಿನ ಉದ್ದೇಶವನ್ನು ತಿಳಿಸುತ್ತದೆ. ಈ ಗ್ರಂಥವು ಬ್ರಾಹ್ಮಣ ಜನಾಂಗದ ಜಾನಪದೀಯ ಅಧ್ಯಯನಕ್ಕೆ ಪ್ರಮುಖ ವಸ್ತುವಾಗಿದೆ. ಶಾಸ್ತ್ರ, ಸಂಪ್ರದಾಯಗಳ ಮೂಲಕ ಸಾಮಾಜಿಕ ಬಂಧವನ್ನು ಕಟ್ಟುವಲ್ಲಿ ಈ ಹಾಡುಗಳು ಮಹತ್ವದ್ದಾಗಿದೆ. ಬ್ರಾಹ್ಮಣ ಸಂಪ್ರದಾಯದಲ್ಲಿ 'ಸುಲಗ್ನಾಸ್ಸಾವಧಾನಾ' ಎಂಬ ಶಾಸ್ತ್ರವೇ ಮದುವೆಯ ಶಾಸ್ತ್ರಗಳಲ್ಲಿ ಮೊದಲನೆಯದು. ಮದುವೆ ಎಂದರೆ ಗಂಡು-ಹೆಣ್ಣಿನ ಜೀವನದ ಮಹತ್ವದ ಘಟ್ಟ. ಎಷ್ಟು ಸಂತೋಷದಾಯಕವೋ ಅಷ್ಟೇ ತ್ರಾಸದಾಯಕವೂ ಹೌದು. ಅದಕ್ಕಾಗಿಯೇ 'ಮದುವೆ ಮಾಡಿ ನೋಡು' ಎಂಬ ಗಾದೆ ಮಾತು ಹುಟ್ಟಿ ಕೊಂಡಿರುವುದು. ಹಾಗಾಗಿ ಮದುವೆಯ ಕೆಲಸ ಕಾರ್ಯಗಳೆಲ್ಲವು ಸಲೀಸಾಗಿ ಯಾವುದೇ ತೊಂದರೆಯಿಲ್ಲದೆ ನಿರ್ವಿಘ್ನವಾಗಿ ನೆರವೇರಲಿ ಎಂಬ ಕಾರಣಕ್ಕೆ ಮೊದಲು ವಿಘ್ನೇಶ್ವರನನ್ನು ಪೂಜಿಸಿ ಪ್ರಾರ್ಥಿಸುತ್ತಾರೆ. ನಂತರ ಮದುವೆಗೆ ಉಪಯೋಗಿಸುವ ಶಾಸ್ತ್ರ ಸಂಬಂಧಿತ ವಸ್ತುಗಳಾದ ಒನಕೆ, ಬೀಸುವಕಲ್ಲು, ಮುಂತಾದವುಗಳನ್ನು ಪೂಜಿಸಿ ಅರಿಶಿನವನ್ನು ಕುಟ್ಟುತ್ತಾರೆ. ಆ ವೇಳೆಯಲ್ಲಿ ಅರಿಶಿನ ಕುಟ್ಟುವ ಹಾಡು ಎಂಬ ಹಾಡನ್ನು ಹಾಡುತ್ತಾರೆ. ಉದಾಹರಣೆಗೆ:-

ಜಾನಕಿಯ ವಿವಾಹವೆಂದು

ಮಾನಿನಿಯರು ಮುದದಿ ನೆರೆದು

ಸಾನುರಾಗದಿಂದ ಮಧುರ । ಗಾನ ಮಾಡುತಾ ।

ಅರಿಶಿನದ ಬೇರು ತಂದು

ಸರಸಜಾಕ್ಷಿಯರು ತಾವು

ಸರಸದಿಂದ ಪಾಡಿ ನಲಿದು ಕುಟ್ಟುತಿದ್ದರು

ಆನಂತರದಲ್ಲಿ 'ಗೋಧಿಕಲ್ಲು ಶಾಸ್ತ್ರ'ವನ್ನು ಮಾಡಿ 'ಗೋಧಿಕಲ್ಲನಿಕ್ಕಿದರು ಗೋಧೂಳಿ ಲಗ್ನದಿ' ಎಂದು ಗೋಧಿ ಬೀಸಲು ಪ್ರಾರಂಭಿಸುತ್ತಾರೆ.

ಗೋಧಿಕಲ್ಲ ನಿಕ್ಕಿದರು । ಗೋಧೂಳಿ ಲಗ್ನದೀ

ಮಾಧವನ ಲಗ್ನ ಘಳಿಗೆ । ಸಾಧಿಸಲು ಸಂಭ್ರಮದಿ

ಎಂದು ಹಾಡುತ್ತಾರೆ. ನಂತರದಲ್ಲಿ ಎಣ್ಣೆಶಾಸ್ತ್ರ ಮಾಡಲಾಗುತ್ತದೆ. ಇದೇ ತರಹದ ಶಾಸ್ತ್ರ ಗೌಡ, ಒಕ್ಕಲಿಗ, ಇತರ ಸಂಪ್ರದಾಯದವರಲ್ಲೂ ಕಂಡು ಬರುತ್ತದೆ. ಎಣ್ಣೆ ಹಚ್ಚಿ ನಂತರ ಸೀಗೆಕಾಯಿ ಹಚ್ಚಿ

ಸ್ನಾನ ಮಾಡಿಸುತ್ತಾರೆ. ಎಣ್ಣೆಶಾಸ್ತ್ರಕ್ಕೆ ಹಿರಿಯರ ಮುತ್ತೈದೆಯರಿರಬೇಕು ಎಂಬ ನಿಯಮವಿದೆ. ಗಂಡು-ಹೆಣ್ಣು ಇಬ್ಬರಿಗೂ ಎಣ್ಣೆಸ್ನಾನ ಮಾಡಿಸಲಾಗುತ್ತದೆ. ಇದನ್ನು 'ಮಂಗಳಸ್ನಾನ' ಎಂದು ಕರೆಯುತ್ತಾರೆ. ಈ ಶಾಸ್ತ್ರವಾದ ನಂತರ ಎಣ್ಣೆಸ್ನಾನ ಮಾಡಿಸಿದವರು ಕೈಯಿಗೆ ಅರಿಶಿನವನ್ನು ಹಚ್ಚಿಕೊಂಡು ನಂತರ ಸೀಗೇಕಾಯಿಂದ ಕೈತೊಳೆದು ಕೊಳ್ಳುತ್ತಾರೆ. ಇದಕ್ಕೆ ಕಾರಣವೊಂದನ್ನು ಕೊಡುತ್ತಾರೆ. ಎಣ್ಣೆ ಮತ್ತು ಸೀಗೇಕಾಯಿ ಎರಡು ವಿರೋಧ ಗುಣವನ್ನು ಹೊಂದಿರುವುದರಿಂದ ಪರಸ್ಪರ ವೈರಿಗಳೆಂದು ಭಾವಿಸಲಾಗಿದೆ. ಇದರಿಂದ ಎಣ್ಣೆ ಹಚ್ಚಿದವರಿಗೂ, ಹಚ್ಚಿಸಿಕೊಂಡವರಿಗೂ ಮಧ್ಯೆ ಯಾವುದೇ ರೀತಿಯ ವೈರತ್ವ, ಅಸಮಧಾನ ಏರ್ಪಡದಿರಲಿ ಎಂಬ ಉದ್ದೇಶದಿಂದ ಈ ರೀತಿ ಅರಿಶಿನ ಹಚ್ಚಿ ಅನಂತರ ಸೀಗೇಕಾಯಿಯಿಂದ ಕೈತೊಳೆದುಕೊಳ್ಳುತ್ತಾರೆ. ಎಣ್ಣೆಶಾಸ್ತ್ರವನ್ನು ಗಂಡು-ಹೆಣ್ಣು ಇಬ್ಬರಿಗೂ ಮಾಡುತ್ತಾರೆ. ಹೆಣ್ಣನ್ನು ಕುರಿತಾದ ಹಾಡಿನಲ್ಲಿ ಸೀತ, ರುಕ್ಮಿಣಿಯನ್ನು, ಗಂಡು ಮಕ್ಕಳನ್ನು ಕುರಿತು ಹಾಡಿನಲ್ಲಿ ರಾಮ, ಹರಿಯನ್ನು ವಧು-ವರರನ್ನಾಗಿ ಕಲ್ಪಿಸಿಕೊಂಡು ಹಾಡುತ್ತಾರೆ.

ಹೆಣ್ಣಿಗೆ ಎಣ್ಣೆಶಾಸ್ತ್ರ ಮಾಡುವಾಗ ಹಾಡುವ ಹಾಡು

ಮಾಡಿದರು ಶಾಸ್ತ್ರವ । ಕೂಡುತೆ ಸತಿಯರು
ಹಾಡನು ಹೇಳಿ ಕೊಂಡಾಡುತ ಮುದದೀ
ಮರಕತ ಪೀಠವ । ಇರಿಸುತದರ ಮೇಲೆ
ತರುಣಿ ರುಕ್ಮಿಣಿಯ ಕು । ಳ್ಳಿರಿಸುತ ಮುದದೀ

ಗಂಡಿಗೆ ಎಣ್ಣೆಶಾಸ್ತ್ರ ಮಾಡುವಾಗ ಹಾಡುವ ಹಾಡು

ತೈಲವ ನೊತ್ತಿದ ರೊಲಿದು । ಲೀಲೆಯಿಂ ಶ್ರೀರಾಮಗೆ
ಬಾಲಮಣಿ ಜಾಲವೊಲಿ । ದೋಲೈಸುತ ಮೇಲಾಗಿಹ

ಹೀಗೆ ಎಣ್ಣೆ ಹಚ್ಚಿದ, ಸ್ನಾನ ಮಾಡಿಸಿದ ರೀತಿಯನ್ನು ಹಾಡುಗಳಲ್ಲಿ ಹೇಳುತ್ತಾರೆ. ಎಣ್ಣೆಶಾಸ್ತ್ರದ ನಂತರ 'ಮಲ್ನೀರುಶಾಸ್ತ್ರ' ಮಾಡಲಾಗುತ್ತದೆ. ವಧು-ವರರಿಗೆ ಬೆನ್ನ ಮೇಲೆ ನೀರು ಹಾಕಿ ಸ್ನಾನ ಮಾಡಿಸುವುದು ಪದ್ಧತಿ. ಮಕ್ಕಳನ್ನು ಹೆತ್ತು-ಹೊತ್ತು ಸಾಕಿದ ತಂದೆ-ತಾಯಿಯರು ಮಕ್ಕಳನ್ನು ಇನ್ನೊಬ್ಬರಿಗೆ ಬಿಟ್ಟುಕೊಡುವುದರ ಹಿಂದಿನ ತಳಮಳಗಳನ್ನು ಹಾಡುಗಳಲ್ಲಿ ಬಿಂಬಿಸುತ್ತದೆ. ಮಲ್ನೀರುಶಾಸ್ತ್ರ ಮಾಡುವಾಗ ತೌರಿನ ಕಡೆಯವರು ಉಡುಗೊರೆಯೊಂದನ್ನು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ನೀಡಲೇಬೇಕೆಂಬ ನಿಯಮವಿದೆ. ಅನಂತರವಷ್ಟೇ ಹಸೆಗೆ ಕೂರಲು ಅವಕಾಶ.

ಬಚ್ಚಾಲ ಮನೆಯೊಳಗೇ । ವಿಸ್ತಾರ ವೇನೆಂಬೇ
ಮುತ್ತಿನ ಕಲ್ ಗರುಡೀ । ಗಿಣಿ ಹಿಂಡು
ಗಿಣಿ ಹಿಂಡ್ ಚಿನ್ನದ ಬೊಂಬೇ । ಅಪ್ಪ ಅಣ್ಣಯ್ಯನಾ ಜಳಕಕ್ಕೆ

ಅತ್ತೊಂದು ಗಳು ಬೀಸಿ । ಇತ್ತೊಂದು ಗಳು ಬೀಸಿ
ಮರೆಗಿಟ್ಟುಕಾದ ನೀರಾ । ರಂಭೆಯಾ ಮಗನಾ (ಮಗಳಾ)

ನೀರುಕಾಯಿಸುವುದರಿಂದ ಹಿಡಿದು ಮಣೆ ಹಾಕಿ ಸ್ನಾನ ಮಾಡಿಸಿ, ನಂತರ ಉಡುಗೊರೆಯನ್ನು ಪಡೆಯುವ ಎಲ್ಲಾ ಸಂಗತಿಗಳನ್ನು ಹಾಡಿನಲ್ಲಿ ಹೇಳಲಾಗುತ್ತದೆ. ತವರು ಮನೆಯವರು ಕೊಟ್ಟ ಉಡುಗೊರೆ ಅವರಿಗೆ ಜೀವನದಲ್ಲಿ ಮರೆಯಲಾಗದಂತಹ ವಸ್ತುವಾಗಿರುತ್ತದೆ. ತಂದೆ-ತಾಯಿಯ ನೆನಪನ್ನು ಸದಾ ಮಾಡಿಕೊಡುತ್ತದೆ. ವರನಿಗೆ ಅತ್ತೆ-ಮಾವ ಇಬ್ಬರು ತಂದೆ ತಾಯಿಯ ಸಮಾನ ವಯಸ್ಸಿನಲ್ಲಿ ಹಿರಿಯರು ಆದರೂ. ಮದುವೆ ವೇಳೆಯಲ್ಲಿ ಆಳಿಯನ ಕಾಲು ತೊಳೆದು ಪೂಜೆ ಮಾಡಿ ಉಡುಗೊರೆಯನ್ನು ಕೊಡುವುದು ವಾಡಿಕೆ. ಇದನ್ನು ಕಾಶಿಯಾತ್ರೆ ಪೂಜೆ ಎಂತಲೂ ಕರೆಯುತ್ತಾರೆ. ವಿದ್ಯಾವಂತ, ಬುದ್ಧಿವಂತನಾದ ವರನು ತನ್ನ ಜೀವನ ರೂಪಿಸಿಕೊಳ್ಳಲು ತಾನು ವಿದ್ಯೆ, ಪಾಂಡಿತ್ಯವನ್ನು ಕಲಿತುಬಂದ ಕಾಶಿಗೆ ಹೋಗಲು ನಿರ್ಧರಿಸುತ್ತಾನೆ. ಆ ವೇಳೆಯಲ್ಲಿ ಹೆಣ್ಣುಹೆತ್ತವರು ಅವನನ್ನು ತಡೆದು ತಮ್ಮ ಮಗಳನ್ನು ಮದುವೆ ಮಾಡಿಕೊಡುವುದಾಗಿಯೂ ಇಬ್ಬರು ಜೊತೆಯಲ್ಲಿಯೇ ಹೋಗುವಿರಿ ಎಂದು ಹೇಳುತ್ತಾರೆ. ಈ ಯಾತ್ರೆಯನ್ನು ಕಾಶಿಯಾತ್ರೆ ಎಂದು ಕರೆಯುತ್ತಾರೆ. ಹೀಗೆ ಕಾಶಿಯಾತ್ರೆಗೆ ಹೊರಟ ಸಂದರ್ಭದಲ್ಲಿ ಅತ್ತೆ, ಮಾವ ವರನಿಗೆ ಕಾಲು ತೊಳೆದು ಪೂಜೆ ಮಾಡಿ, ಉಡುಗೊರೆ ಕೊಟ್ಟು ಒಲಿಸಿಕೊಳ್ಳುತ್ತಾರೆ. ಇದೆಲ್ಲವನ್ನು ಹಾಡಿನ ಮೂಲಕ ಹೇಳುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಸಂಪ್ರದಾಯದ ಹಾಡುಗಳ ಗ್ರಂಥದಲ್ಲಿ ಪೋಗಬೇಡವೋ ನೀ, ಶ್ರೀಶನು ಕಾಶೀಯಾತ್ರೆಗೆ ಹಾಡುಗಳನ್ನು ಕಾಣಬಹುದು. ಮದುವೆಯ ಮುಖ್ಯ ಘಟ್ಟ ಮಾಂಗಲ್ಯಧಾರಣೆ, ಕನ್ಯಾದಾನ ಈ ಎರಡು ಶಾಸ್ತ್ರ ಮುಗಿದ ನಂತರ ಗಂಡು-ಹೆಣ್ಣು ಇಬ್ಬರು ದಂಪತಿಗಳೆನಿಸಿಕೊಳ್ಳುತ್ತಾರೆ. ಅಂದಿನಿಂದ ಆ ಹೆಣ್ಣುಮಗಳ ಸಂಪೂರ್ಣ ಜವಬ್ದಾರಿ ಗಂಡನದಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕನ್ಯಾದಾನ ನಲ್ಮೆಯಿಂ ಸೂತ್ರವ ಮುಂತಾದ ಹಾಡುಗಳಿವೆ. ಪ್ರಾಚೀನ ಕಾಲದಲ್ಲಿ ಈ ಮೂಲಕ ಸತಿ-ಪತಿಯರಾದ ದಂಪತಿಗಳ ಸಂಬಂಧ ಚಿರವಾಗಿ ಇರುತ್ತದೆ ಎಂಬುದು ನಂಬಿಕೆ. ಗಂಡು-ಹೆಣ್ಣಿನ ಸಂಬಂಧವನ್ನು ಎಷ್ಟು ಶಿಷ್ಟವಾಗಿ ಪರಿಗಣಿಸಿದ್ದರೂ ಎಂಬುದನ್ನು ತಿಳಿಸುತ್ತದೆ. ಇದು ಒಳ್ಳೆಯ ಜೀವನಕ್ರಮವನ್ನು ಅನುಸರಿಸಲಿಚ್ಚಿಸುವ ಸಮಾಜವೊಂದರ ಲಕ್ಷಣ. ಆದರೆ ಈಗಿನ ಕಾಲದಲ್ಲಿ ಶಾಸ್ತ್ರಗಳ ಒಳ ಅರ್ಥವನ್ನು ಅರಿಯದೆ ಇವುಗಳನ್ನು ಕೇವಲ ಸೂಚ್ಯವಾಗಿ ಪರಿಗಣಿಸುವ ಪರಂಪರೆ ಸೃಷ್ಟಿಯಾಗಿದೆ. ಶಾಸ್ತ್ರಬದ್ಧವಾದ ಮದುವೆಯ ಆಚರಣೆಗಳಲ್ಲಿ ಕೆಲವು ಅನುಕೂಲವಿರುವಂತೆ ಅನಾನುಕೂಲವು ಉಂಟು. ಪ್ರತಿಯೊಂದು ಶಾಸ್ತ್ರ ಸಂಪ್ರದಾಯವು ಸರಳವಾಗಿರದೆ ಕೆಲವು ದುಬಾರಿಯಾಗಿದೆ. ಇಂತಹದನ್ನೇ ಕೊಡಬೇಕು, ಮಾಡಬೇಕು ಎಂಬ ನಿಯಮ ಹೆಣ್ಣಿನವರ ಮೇಲೆ ಸಾಕಷ್ಟು ಹೊರೆಯನ್ನು ಹೇರುತ್ತದೆ. ಆದರೆ, ನೂರಾರು ಮಂದಿ ಹಿರಿಯರ ಸಮ್ಮುಖದಲ್ಲಿ ನಡುವೆ ಶಾಸ್ತ್ರ

[illegible]

ಸಂಪ್ರದಾಯಗಳಿಂದಾಗಿ ಗಂಡು ಹೆಣ್ಣುಗಳಿಬ್ಬರ ದಾಂಪತ್ಯವು ಗಟ್ಟಿಯಾಗಿದ್ದು, ಗಂಡಾಗಲೀ, ಹೆಣ್ಣಾಗಲೀ ಇದರಿಂದ ಸುಲಭವಾಗಿ ಹೊರ ಬರಲು ಸಾಧ್ಯವಿರಲಿಲ್ಲ. ಈಗಲಾದರೂ ತಮ್ಮ ಮನಸ್ಸಿಗೆ ಬೇಡವೆನಿಸಿದ ಕ್ಷಣವೇ ವಿಚ್ಛೇದನದ ಮೂಲಕ ದೂರವಾಗಲೂ ನಿರ್ಧರಿಸುತ್ತಾರೆ.

ಮದುವೆಯಲ್ಲಿ ಹಾಡುವ ಸಂಪ್ರದಾಯದ ಹಾಡುಗಳಲ್ಲಿ ಇರುವ ಮತ್ತೊಂದು ಭಾಗವೆಂದರೆ ಉರುಟಣೆ ಹಾಡು. ಇದು ಹೆಣ್ಣೇ ಹೇಳಬೇಕಾದ ಹಾಡು. ಇದಷ್ಟೇ ಅಲ್ಲದೆ ಉಯ್ಯಾಲೆ, ಚೆಂಡಾಡಿದ ಹಾಡುಗಳು, ವೀಳ್ಯೆ ಕೊಡುವ ಹಾಡುಗಳನ್ನು ಹಾಡುತ್ತಿದ್ದರು. ಒಂದು ವೇಳೆ ಹಾಡನ್ನು ಸರಿಯಾಗಿ ಹಾಡದಿದ್ದರೆ, ಇಲ್ಲವೇ ಹೆಚ್ಚು ಹಾಡುಗಳನ್ನು ಹಾಡದಿದ್ದರೆ ಆಡಿಕೊಳ್ಳುತ್ತಿದ್ದರು. ಈ ಹಾಡುಗಳನ್ನು ಸೀಸಪದ್ಯಗಳಲ್ಲಿ ರಚಿಸಲಾಗಿದೆ. ಹಿಂದಿನ ಕಾಲದಲ್ಲಿ ವಧುಪರೀಕ್ಷೆಗಳಲ್ಲಿ ಹಾಡು ಹೇಳಿಸುವುದು ಒಂದು ಸಂಪ್ರದಾಯ. "ಉರುಟಣೆ ಹಾಡುಗಳ ಉದ್ದೇಶವೇನೆಂದರೆ ಅತಿ ಚಿಕ್ಕವರಾಗಿದ್ದ ವಧುವರರಿಗೆ ಪರಸ್ಪರ ಸ್ನೇಹ ಸಲಿಗೆ ಬೆಳೆದು, ಅವರು ಅನ್ಯೋನ್ಯತೆ ಮತ್ತು ಸರಸವಾಗಿರಲೆಂಬ ಉದ್ದೇಶದಿಂದ ಕೂಡಿದ್ದು, ಅಲ್ಲದೆ ಸಂಸಾರ ಜೀವನಕ್ಕೆ ಪ್ರಾಥಮಿಕ ಪಾಠವು ಇದಾಗಿತ್ತು" ಇದು ಮದುವೆಯ ನಂತರದ ಸಾಂಸಾರಿಕ ಜೀವನಕ್ಕೆ ಮಕ್ಕಳನ್ನು ತರಬೇತಿ ಪಡಿಸುತ್ತಿದ್ದರು ಎಂಬುದು ಇದರಿಂದ ಅರಿವಾಗುತ್ತದೆ. ಉರುಟಣೆ ಪ್ರಾರಂಭವು ಕ್ರಮವಾಗಿ ವಧುವು ಪರಸ್ಪರ ಅರಿಶಿನ–ಕುಂಕುಮ, ಗಂಧ ಹಚ್ಚುವುದು, ಹಾರ ಹಾಕುವುದು, ವೀಳ್ಯೆ ಕೊಡುವುದು, ಹೂವಿನ ಚೆಂಡನ್ನು ಕಟ್ಟಿ ಅತ್ತಿಂದಿತ್ತ, ಇತ್ತಿಂದತ್ತ ಎಸೆಯುತ್ತಾ ಹಾಡುಗಳನ್ನು ಹಾಡುವುದಕ್ಕೆ 'ಉರುಟಣೆ ಹಾಡು' ಎನ್ನಲಾಗುತ್ತದೆ ಎಂದು ವಾಗೀಶ್ವರಿಯವರು ಹೇಳುತ್ತಾರೆ. ಇಲ್ಲಿ ಹೂವಿನ ಚೆಂಡಾಟವೇ ಮುಖ್ಯ. ಉರುಟಣೆ ಹಾಡುಗಳೆಲ್ಲವನ್ನು ಸೀಸಪದ್ಯಗಳಲ್ಲಿ ರಚಿಸಿದ್ದಾರೆ.

ಉದಾಹರಣೆ :–

ಉರುಟಣೆ ಮಾಡುವೇ । ಅರಸ ನಿಮಗೆ ನಾ
ಸ್ಮರಜಾತ ಸುಂದರಾ ।
ಸ್ವರಲೋಕೇಶ್ವರ
ಕರಚರಣವ ದಯಮಾಡು ನಿನಗೆ
ಅರಿಶಿನ ಹಚ್ಚುವೆ ಸರಸಿಜದವಳ ನಯನ

ಹುಡುಗನಿಗೆ ಕುಂಕುಮ, ಅರಿಶಿನ, ಗಂಧವನ್ನು ಹಚ್ಚುವುದನ್ನು ಈ ಹಾಡಿನಲ್ಲಿ ಹೇಳಿದ್ದಾರೆ. ಉರುಟಣೆ ಹಾಡುಗಳೆಲ್ಲವೂ ವಿಡಂಬನ, ವಿನೋದಗಳಿಂದ ಕೂಡಿದ್ದು, ಎಲ್ಲರನ್ನು ರಂಜಿಸುವ ಕೆಲಸವನ್ನು ಮಾಡುತ್ತದೆ.

ಉದಾಹರಣೆಗೆ :

ಹುಡುಗ ಬುದ್ಧಿವರನ । ಹುಡುಕಿ ಮಾಡಿದರೆಲ್ಲ

ಸಿಡುಕು ಅತ್ತೀಮಾವ । ಕೇಳಲೇನು ।

ದುಡುಕು ನಾದಿನಿಮೈದ । ಸೆಡಕು ಅತ್ತಿಗೆವಾದ

ಕೆಡಕು ಮಾಡುವ ಮಾತ । ಪೇಳಲೇನು ।

ನಡೆ ನುಡಿಯು, ಸಿಡಿಮಿಡಿಯು । ನಡುಗಿಪುದು ಮನವೆಲ್ಲ ।

ಬೀಗರ ಹಾಡುಗಳು :–

ಸಂಪ್ರದಾಯ ಹಾಡುಗಳಲ್ಲಿ ಅತಿ ಹೆಚ್ಚು ಮನೋರಂಜನೆಯನ್ನು, ಕುತೂಹಲವನ್ನು ಹುಟ್ಟಿಸುವ ಜೊತೆಯಲ್ಲೇ ಮುನಿಸಿಗೂ ಕಾರಣವಾಗುವ ಹಾಡುಗಳೆಂದರೆ ಬೀಗರ ಹಾಡುಗಳು. ಇದು ವಧು–ವರರಿಬ್ಬರ ಕಡೆಯವರು ಎದುರು–ಬದುರಾಗಿ ಕುಳಿತು ಒಟ್ಟಿಗೆ ಪಾಲ್ಗೊಂಡು ಹಾಡುವ ಹಾಡು. ಇದರಲ್ಲಿ ಒಬ್ಬರು ಇನ್ನೊಬ್ಬರನ್ನು ಛೇಡಿಸುತ್ತಾ ಅದರಿಂದ ಖುಷಿಪಡುವ ಹಾಗೆ ಹಾಡಲಾಗುತ್ತದೆ. ಬೀಗರ ಹಾಡಿನ ವಸ್ತುವೆಂದರೆ ಮದುವೆ ವೇಳೆಯಲ್ಲಿ ಗಂಡು–ಹೆಣ್ಣಿನ ಕಡೆಯರಿಬ್ಬರ ಚಲನವಲನ, ಉಪಚರಿಸಿದ ರೀತಿ. ಇವುಗಳ ಬಗ್ಗೆ ಪ್ರಾರಂಭದಿಂದ ಗಮನಿಸುತ್ತಾ ಬಂದ ಎರಡು ಕಡೆಯವರು ಅವರಿಂದಾದ ಬೇಸರ, ಸಂತೋಷವನ್ನು ಹಾಡಿನ ಮೂಲಕ ಹೇಳುತ್ತಾರೆ. ಉದಾಹರಣೆ ಗಂಡಿನ ಕಡೆಯವರು ಅಡಿಗೆ ಚೆನ್ನಾಗಿಲ್ಲ, ಬಡಿಸುವಾಗ ಕಡಿಮೆ ಬಡಿಸಿದ್ದಾರೆ ಎಂದು ಹಾಡಿ ಛೇಡಿಸಿದರೆ ಅದಕ್ಕೆ ಪ್ರತ್ಯುತ್ತರವಾಗಿ ಹೆಣ್ಣಿನ ಕಡೆಯವರು ಹಾಗಾದರೆ ಗೂಡೆ ಗೂಡೆಯಷ್ಟು ಮಾಡಿದ ಅಡಿಗೆ ಎಲ್ಲಾ ಹಾಗೆ ಖಾಲಿಯಾಗಿ ಹೋಯಿತಾ? ಎಲ್ಲವನ್ನು ನೀವೇ ಚೆನ್ನಾಗಿ ತಿಂದು ಖಾಲಿ ಮಾಡಿ ಈಗ ದೂಷಿಸುತ್ತಿದ್ದೀರ ಎನ್ನುತ್ತಾರೆ.

ಹೆಣ್ಣಿನ ಕಡೆಯವರು

ಏನಿದಚ್ಚರಿಯೋ । ಕಾಣೆ ಮಾನಾಭಿ

ಮಾನವಿಲ್ಲದೆ ನೀ । ನೀ ನುಡಿವುದೀ ಪರಿ

ಮಾಡಿದ ಭಕ್ಷ್ಯದ ಗೂಡೆ । ಗೂಡೆಗಳನೆ ।

ತೋಡಿ ಬಡಿಸಿದಿರೀ ಕೆಡ । ನುಡಿವರೇ ನೀ ರಾಕ್ಷಸೀ

ಲಕ್ಷ ಲಾಡುಗಳ ನೀ । ನೀ ಕ್ಷಣದೊಳು । ನಿನ್ನ

ಕುಕ್ಷಿಗಳಿಸಿದುದನುನಾ । ನೀಕ್ಷಿಸಿದೆನು ಅತ್ತಿಗೆ ಆಹ

ಹೀಗೆ ದೋಷಾರೋಪಣೆಯ ಹಾಡುಗಳು ಒಮ್ಮೊಮ್ಮೆ ಜಗಳಕ್ಕೆ ಎಡೆಮಾಡಿ ಕೊಡುವುದು ಉಂಟಂತೆ. ಆಗ ಇಂತಹ ಹಾಡುಗಳ ಹಾಡುವಿಕೆಯೇ ಬೇಡ ಎಂದು ನಿರ್ಧರಿಸಲಾಗುತ್ತಿತ್ತು ಎಂದು ಹೇಳುತ್ತಾರೆ.

ಕೊನೆಗೆ ಎಲ್ಲರೂ ಸಮಾಧಾನಗೊಂಡು ಮೊದಲು ಛೇಡಿಸಲು ಪ್ರಾರಂಭಿಸಿದವರೇ ಮುಂದೆ ರಾಜಿಯ ಹಾಡುಗಳನ್ನು ಹಾಡಿ ಸುಖಾಂತ್ಯಗೊಳಿಸುತ್ತಾರೆ.

ಹರುಷವಾಂತೆವು ಮಾನಸ । ದೊಳಗಿಂದು ನಾವ್ಗಳು ।

ವಿನಯಭರಿತ ವಚನದಿಂದ । ಮನಕೆ ಮೋದವಾದುದತ್ತಿಗೆ

ಘನವಿನೋದಕೆಂದು ಬರಿದೆ । ಮನದೊಳೆಣಿಸಬೇಡವಿದನು ॥

ಶಿಬಿನಾರಸಿಂಹ ನಮಿತ । ವಿಭವದಿಂದಲೀ ಮದುವೆಗೆ

ಶುಭವನಿತ್ತು ದಂಪತಿಗಳಿ । ಗಭಿಮತವನು ನೀಡುತಿರಲು

ಸಂಪ್ರದಾಯ ಹಾಡುಗಳ ವೈಶಿಷ್ಟ್ಯವೆಂದರೆ ಪುನರ್ ಸೃಷ್ಟಿಯಾಗುವಿಕೆ. ಇದು ಈಗಾಗಲೇ ರಚಿತವಾಗಿರುವ ಹಾಡುಗಳನ್ನು ಕಲಿತು ಹಾಡುವುದು ಮಾತ್ರವಲ್ಲದೆ ಜೊತೆಯಲ್ಲಿ ತಮ್ಮ ಸೃಜನಶೀಲ ಪ್ರತಿಭೆಯಿಂದ ಹಾಡುಗಳನ್ನು ಹೊಸದಾಗಿ ಕಟ್ಟುತ್ತಾ ಹೋಗುತ್ತಾರೆ. ಮದುವೆ ಹಾಡುಗಳಲ್ಲಿ ಪದ್ಯಪ್ರಕಾರದಲ್ಲಿ ಹಾಡುಗಳು ರಚನೆಯಾಗಿವೆ. ಈ ಹಾಡುಗಳಲ್ಲಿ ಗಮನಿಸಬಹುದಾದ ಮತ್ತೊಂದು ಸಾಹಿತ್ಯಿಕ ಅಂಶವೆಂದರೆ ರಗಳೆ ಪ್ರಕಾರದಲ್ಲಿ (ಭೋಜನ ರಗಳೆ ಎಂಬ) ಹಾಡುಗಳ ರಚನೆಯಿದೆ

ಉದಾ ;– **ಮನುಜರ ಊಟದ ರಗಳೆಯ ಕೃತಿಯ**

ಶುಭದಿಂದ ವರ್ಣಿಪೆ ಕೊಡು ಸನ್ಮತಿಯ

ಶೃಂಗೇರಿ ಪಟ್ಟಣದೊಳಗೆ ಒಂದು

ಮಂಗಳಕರವಿದೆ. ಔತಣವಿಂದು

ಸಂಪ್ರದಾಯದ ಹಾಡುಗಳಲ್ಲಿ ಮದುವೆಗೆ ಸಂಬಂಧಿಸಿದಂತೆ ಬಾಗಿಲು ತಡೆಯುವ ಹಾಡು, ಆರತಿ ಮತ್ತು ಆಶೀರ್ವಾದ ಕೊನೆಯ ಆಚರಣೆ. ಗಂಡು ಹೆಣ್ಣು ಇಬ್ಬರನ್ನು ಮನೆಗೆ ತುಂಬಿಸಿಕೊಳ್ಳುವಾಗ ಬಾಗಿಲು ತಡೆಯುತ್ತಾರೆ. ಏನಾದರೂ ಉಡುಗೊರೆ ಕೊಟ್ಟ ನಂತರ ದಾರಿ ಬಿಡಲಾಗುತ್ತದೆ. ಮದುವೆಯ ಕೇಂದ್ರ ಬಿಂದುಗಳೆಂದರೆ ವಧು–ವರರು. ಅವರ ಉಡುಗೆ, ತೊಡುಗೆಯಿಂದ ಹಿಡಿದು ಚಲನವಲನಗಳವರೆಗೂ ಎಲ್ಲರ ಗಮನ ಅವರಲ್ಲಿಯೇ ನೆಟ್ಟಿರುತ್ತದೆ. ಅವರಿಗೆ ದೃಷ್ಟಿತಾಗದಿರಲೆಂಬ ಕಾರಣಕ್ಕೆ ಮದುವೆಯ ಕೊನೆಯಲ್ಲಿ ಸುಣ್ಣ–ಅರಿಶಿನ ಕದಡಿದ ಕೆಂಪು ನೀರನ್ನು ಮಾಡಿ ಆರತಿ ಎತ್ತಿ ಆನಂತರ ಅದನ್ನು ಹೊರಚೆಲ್ಲುತ್ತಾರೆ. ಆ ಆಚರಣೆ ಮಾಡುವಾಗ ಸುಮಂಗಲಿಯರು ಆರತಿ ಮಾಡುತ್ತಾರೆ. ಮುಂದಿನ ಹೆಜ್ಜೆ ಗುರು–ಹಿರಿಯರ ಆಶೀರ್ವಾದ ಪಡೆಯುವುದು. ದೇವರಿಗೆ, ಹಿರಿಯರಿಗೆ ನಮಸ್ಕರಿಸುವುದು. ನಮಸ್ಕಾರ–ಆಶೀರ್ವಾದದ ಮಹತ್ವದ ರೀತಿ, ಅವಶ್ಯಕತೆಯ ಬಗ್ಗೆ ವಾಗೀಶ್ವರಿಯವರು ತಮ್ಮ 'ಹೃದಯ–ಸಂಪುಟ' ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ. "ಕಿರಿಯರಾದವರು ಹಿರಿಯರಿಗೆ ತಲೆಬಾಗಿ ಕಾಲುಮುಟ್ಟಿ ನಮಸ್ಕರಿಸುವ ಸಂಪ್ರದಾಯವಿದೆ. ಇಲ್ಲಿ ನಮಸ್ಕಾರ

ಮಾಡುವವರು ಮಾಡಿಸಿಕೊಳ್ಳುವವರು ಇಬ್ಬರಿಗೂ. ಅಂದರೆ ಕಿರಿಯರ ನಡವಳಿಕೆ. ನಯ. ವಿನಯ. ಭಕ್ತಿ. ಭಾವಗಳಿಂದೊಡಗೂಡಿ ಹೃದಯಕ್ಕೆ ತಾಕುವಂತಿರಬೇಕು. ಅಂತೆಯೇ ಈ ನಮಸ್ಕಾರವನ್ನು ಅಷ್ಟೇ ಪ್ರೀತಿ. ವಿಶ್ವಾಸಗಳಿಂದ ಸ್ವೀಕರಿಸುವ ಹೃದಯವೈಶಲ್ಯತೆಯೂ. ನಿರ್ಮಲ ಅಂತಃಕರಣವೂ ಹಿರಿಯರಿಗೆ ಇರತಕ್ಕದ್ದು ಮುಖ್ಯ ಉಭಯ ತಾಪಿ ಈ ಭಾವನೆ ಇಲ್ಲದಿದ್ದರೆ ನಮಸ್ಕಾರ, ಆಶೀರ್ವಾದ. ಉದ್ದೇಶ ನಿರರ್ಥಕ".

ದೇವರ ಹಾಡುಗಳು :–

ಸಂಪ್ರದಾಯದ ಹಾಡುಗಳಲ್ಲಿ ಧಾರ್ಮಿಕ ಅಂಶಗಳಿಂದ ಕೂಡಿರುವಂತಹದ್ದು 'ದೇವರ ಹಾಡುಗಳು'. ದೇವರು ಎಂಬ ಕಲ್ಪನೆ ಹುಟ್ಟಿದ ಕಾಲವನ್ನು ಇಷ್ಟೇ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಜಗತ್ತಿನಲ್ಲಿ ಎಲ್ಲರೂ ದೈವದಲ್ಲಿ ನಂಬಿಕೆಯನ್ನು ಹೊಂದಿದ್ದಾರೆ. ದೇವರ ಬಗೆಗಿನ ನಂಬಿಕೆ ಹಲವು ಧರ್ಮ, ಆಚರಣೆ. ಹಬ್ಬಗಳಿಗೆ ದಾರಿ ಮಾಡಿಕೊಟ್ಟಿದೆ. ಧರ್ಮದ ಆಧಾರದ ಮೇಲೆ ಆಚರಣೆ, ಸಂಪ್ರದಾಯ, ಹಬ್ಬಗಳು ವಿವಿಧ ಜನಾಂಗಗಳಲ್ಲಿ ಭಿನ್ನವಾಗಿರುತ್ತದೆ.

ಮನುಷ್ಯ ತನ್ನ ಬದುಕಿನಲ್ಲಿ ಎದುರಾಗುವ ತೊಂದರೆ. ತೊಡಕುಗಳ ಬಗ್ಗೆ ಇರುವ ಭಯ, ಆತಂಕಗಳ ನಿವಾರಣೆಗೆ ಒಂದು ನಿರ್ದಿಷ್ಟ ಮಾರ್ಗದಲ್ಲಿ ಬದುಕನ್ನು ಕೊಂಡೊಯ್ಯಲು. ತನ್ನದಾದ ಕರ್ತವ್ಯಗಳ ನೆರವೇರಿಸುವಿಕೆ ಹೀಗೆ ಹಲವು ಕಾರಣಗಳಿಂದ ಧರ್ಮ ಜನ್ಮತಾಳಿದೆ. ಧರ್ಮವೆಂಬ ಪರಿಕಲ್ಪನೆ ಇಂದು ಬಹಳ ವಿಸ್ತಾರವಾದ ಅರ್ಥವ್ಯಾಪ್ತಿಯನ್ನು ಹೊಂದಿದೆ. ಪ್ರತಿಯೊಂದನ್ನು ಧರ್ಮದ ಹಿನ್ನೆಲೆಯಲ್ಲಿ, ಧರ್ಮದ ಹೆಸರಿನಿಂದ ಗುರುತಿಸುವಂತಾಗಿದೆ. ಜಾತಿ. ಲಿಂಗ, ಗುಣ, ಕರ್ತವ್ಯಗಳು ಎಲ್ಲವನ್ನು ಧರ್ಮಕ್ಕೆ ಆರೋಪಿಸಲಾಗುತ್ತದೆ. ಇದು ಮನುಷ್ಯನು ಸಂಸ್ಕೃತೀಕರಣಗೊಳ್ಳುವಿಕೆಯ ಹಲವು ಹಂತಗಳಲ್ಲಿ ಒಂದು. ಆದರೆ ಹೆಚ್ಚು ಸಂಬಂಧವನ್ನು ಹೊಂದಿರುವುದು ದೈವದೊಂದಿಗೆ. ಈ ಸಂಬಂಧವನ್ನು ಧಾರ್ಮಿಕ ಎಂಬ ಹೆಸರಿನಿಂದ ಪರಿಗಣಿಸಲಾಗುವುದು. ಕಣ್ಣಿಗೆ ಕಾಣದ ಅಗೋಚರ ಶಕ್ತಿಯೊಂದರ ಮೇಲಿನ ನಂಬಿಕೆ ವಿವಿಧ ಧಾರ್ಮಿಕ ಚಟುವಟಿಕೆಗಳಿಗೆ ನಾಂದಿ. ಮನುಷ್ಯನ ಅತಿರೇಕದ ಮಿತಿಮೀರುವ ವರ್ತನೆಯ ಮೇಲೆ ಮಾನಸಿಕವಾಗಿ ಹಿಡಿತವನ್ನು ಸಾಧಿಸುವ ಶಕ್ತಿ ಧಾರ್ಮಿಕ ಅಂಶಕ್ಕಿದೆ. ಮಾನವನ ಮನಸ್ಸಿನಲ್ಲಿ ಏಕಾಗ್ರತೆಯನ್ನು ಸಾಧಿಸಿ ಲೌಕಿಕ ಜಂಜಾಟಗಳಿಂದ ಕಾಣಸಿಗದ ಶಾಂತಿಯನ್ನು ಅಲೌಕಿಕ ದಾರಿಯ ಮೂಲಕ ಸಾಧಿಸುವ ಕಾರ್ಯವನ್ನು ದೈವರೂಪವಾದ ಧಾರ್ಮಿಕತೆ ಮಾಡುತ್ತದೆ. ದೇವರನ್ನು ಕಾಣುವ ಪೂಜಿಸುವ ಬಗೆಗಳಲ್ಲಿ ಮೂರು ವಿಧವನ್ನು ಗುರುತಿಸಬಹುದು.

೧. ಪ್ರಕೃತಿಯಲ್ಲಿ ದೇವರನ್ನು ಕಂಡು ಪೂಜಿಸುವುದನ್ನು ಅನಾದಿ ಕಾಲದಿಂದಲೂ ಕಾಣಬಹುದು. ಪಂಚಭೂತಗಳೆಂಬ ಹೆಸರಿನಲ್ಲಿ ಆರಾಧಿಸಲಾಗುತ್ತದೆ.

೨. ಪಶು. ಪ್ರಾಣಿ ಪಕ್ಷಿಗಳನ್ನು ದೇವರೆಂದು ಪೂಜಿಸುವಂತಹದ್ದು. ಇದನ್ನು ಈಜಿಪ್ಟ್ ನಾಗರೀಕತೆಯ ಕಾಲದಿಂದಲೂ ಗುರುತಿಸಬಹುದು. ವಿವಿಧ ಬಗೆಯ ಪ್ರಾಣಿಗಳಿಗೆ ಮನುಷ್ಯರೂಪದ ಮುಖವಾಡವನ್ನು ಜೊತೆಗೆ ಪ್ರಾಣಿಗಳ ಕೋಡು ಇತ್ಯಾದಿಗಳನ್ನು ಸಮ್ಮಿಶ್ರಗೊಳಿಸಿ ದೇವರು ಎಂದು ಪೂಜಿಸುವಂತಹದ್ದು.

೩. ಪ್ರಕೃತಿ ಪ್ರಾಣಿಗಳ ಜೊತೆ ಮನುಷ್ಯನನ್ನು ಒಳಗೊಂಡಂತೆ, ಮಾನವನ ಆಕೃತಿಯನ್ನೇ ನೀಡಿ ದೇವರು ಎಂದು ರೂಪವನ್ನು ಕಲ್ಪಿಸಿ ಪೂಜಿಸುತ್ತಾರೆ. ಧಾರ್ಮಿಕ ಕ್ಷೇತ್ರದ ಮುಖ್ಯ ಉದ್ದೇಶ ನೀತಿ, ನಿಯಮ, ತತ್ವಗಳ ಬೋಧನೆ. ಧಾರ್ಮಿಕ ಅಂಶಗಳು ಕಾಲದಿಂದ ಕಾಲಕ್ಕೆ ಪ್ರಭಾವ, ಪ್ರೇರಣೆ, ಬದಲಾವಣೆಗೆ ಒಳಗಾಗುತ್ತದೆ. ಧರ್ಮವೊಂದು ಅಫೀಮಿನಂತೆ. ಅದರಿಂದ ಸುಲಭವಾಗಿ ಆಚೆ ಬರಲು ಸಾಧ್ಯವಿಲ್ಲ. ಇದು ಒಂದು ಪರಂಪರೆಯಿಂದ ಇನ್ನೊಂದು ಪರಂಪರೆಗೆ ಸಾಗುತ್ತದೆ. ಜಗತ್ತಿನಾದ್ಯಂತ ರಚನೆಯಾಗಿರುವ ಮಹಾಕಾವ್ಯಗಳು ಧರ್ಮ ದೇವರ ಹಿನ್ನೆಲೆಯಲ್ಲಿ ರಚನೆಗೊಂಡಿವೆ. ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿದೆ. ಮನುಷ್ಯ ಹುಟ್ಟಿನಿಂದ ಹಿಡಿದು ಸಾಯುವವರೆಗಿನ ಸಕಲ ಕ್ರಿಯೆಯನ್ನು ಒಳಗೊಂಡಿರುವುದರಿಂದ ಎಲ್ಲರ ಹೃದಯದಲ್ಲಿ ಧಾರ್ಮಿಕ ಅಂಶಗಳು ಅಡಕವಾಗಿವೆ. ಇದರ ಮೂರ್ತರೂಪವನ್ನಾಗಿ 'ಹಬ್ಬ-ಹರಿದಿನ', 'ವ್ರತ', 'ಆಚರಣೆ', 'ಸಂಪ್ರದಾಯ'ವನ್ನು ಗಮನಿಸಬಹುದು.

ದೇವರ ಹಬ್ಬದ ಹಾಡುಗಳು :-

ದೇವರು ಮತ್ತು ಹಬ್ಬದ ನಡುವಿನ ಮಾಧ್ಯಮ ಭಕ್ತಿ-ಹಬ್ಬವನ್ನಾಚರಿಸದ ಜನಾಂಗವಾಗಲಿ, ಧರ್ಮಿಯರಾಗಲೀ ಇಲ್ಲ. ಸಮಾಜದಲ್ಲಿ ಸ್ವಾಸ್ಥ್ಯವನ್ನು, ಶಾಂತಿ, ನೆಮ್ಮದಿಯನ್ನು ಬಿತ್ತುವಲ್ಲಿ ಹಬ್ಬಗಳ ಪಾತ್ರ ಮುಖ್ಯ. ಕೆಲವೊಮ್ಮೆ ಇದನ್ನು ಅತಿಯಾದ ಮೌಢ್ಯದಿಂದ ದುರುಪಯೋಗ ಪಡಿಸಿಕೊಂಡು ವಿರುದ್ಧ ದಿಕ್ಕಿನಲ್ಲೂ ಚಲಿಸುವ ಸಾಧ್ಯತೆಗಳುಂಟು. ಹಬ್ಬ ಎನ್ನುವ ಪರಿಕಲ್ಪನೆಯೇ ಸಂತೋಷವನ್ನುಂಟು ಮಾಡುತ್ತದೆ. ಎಲ್ಲರನ್ನು ಒಂದುಗೂಡಿಸುವ ಸಾಮೂಹಿಕತೆಯನ್ನು ಪ್ರದರ್ಶಿಸುವ ಅಂಶ. ಇದರಿಂದ ಮಾನಸಿಕ ಚಿಂತೆಗಳು ದೂರವಾಗಿ ಮನಸ್ಸಿಗೆ ನೆಮ್ಮದಿ ಪ್ರಾಪ್ತಿಯಾಗುತ್ತದೆ. ಹಬ್ಬ-ಹರಿದಿನಗಳಲ್ಲಿ ಎಲ್ಲರೂ ಒಟ್ಟಾಗಿ ಸೇರುವುದರಿಂದ ಪರಸ್ಪರ ನೋವು-ನಲಿವುಗಳನ್ನು ಹಂಚಿಕೊಂಡು ಉಭಯಕುಶಲೋಪರಿಯ ನಡೆಸಿ ರುಚಿಯಾದ ಅಡುಗೆಗಳನ್ನು ಮಾಡಿ ಉಂಡು ತಣಿಯುತ್ತಾರೆ. ಸಂಭ್ರಮದ ವಾತಾವರಣ ಆ ದಿನಗಳಲ್ಲಿ ಸೃಷ್ಟಿಯಾಗುತ್ತದೆ.

ದೇವರ ವಿಚಾರದಲ್ಲಿ ಎರಡು ರೀತಿಯ ಗುಂಪುಗಳನ್ನು ನೋಡುತ್ತೇವೆ.

೧. ದೇವರ ಇರುವಿಕೆಯಲ್ಲಿ ನಂಬಿಕೆಯಿರುವ ಆಸ್ತಿಕರು

೨. ದೇವರಿಲ್ಲ ನಾವು ನಡೆಯುವ ರೀತಿ. ನೀತಿ. ಗುಣಗಳೇ ನಮ್ಮೆಲ್ಲ ಬಗೆಯ ಉನ್ನತಿಗೆ ಕಾರಣ ಎನ್ನುವ ನಾಸ್ತಿಕರು.

ದೇವರು ಇದ್ದಾನೆಂದು ನಂಬುವವರಲ್ಲೂ ಹಲವು ಭಿನ್ನತೆ ಒಳಪಂಗಡಗಳಿವೆ. ಪ್ರತಿಯೊಬ್ಬರು ತಮ್ಮದೇ ಆದ ರೀತಿಯಲ್ಲಿ ಇದನ್ನು ಪ್ರತಿಪಾದಿಸುತ್ತಾರೆ.

೧. ಏಕದೇವೋಪಾಸಕರು

೨. ಬಹುದೇವೋಪಾಸಕರು

ಏಕದೇವೋಪಾಸಕರು ದೇವರು ಒಬ್ಬನೇ ಎಂದು ನಂಬುತ್ತಾರೆ. ಎಲ್ಲಕ್ಕೂ ಅವನೇ ಕಾರಣ ಎನ್ನುತ್ತಾರೆ. ಇನ್ನೂ ಕೆಲವು ಧರ್ಮಿಯರಲ್ಲಿ ಹೆಣ್ಣಿಗೆ ದೇವರ ಸ್ಥಾನ ಇರುವುದಿಲ್ಲ. ಕೇವಲ ಗಂಡು ರೂಪದಲ್ಲಿ ಮಾತ್ರ ದೇವರನ್ನು ಪೂಜಿಸುತ್ತಾರೆ. ಉದಾ:- ಮುಸ್ಲಿಂ ಧರ್ಮದಲ್ಲಿ ಅಲ್ಲಾ ಒಬ್ಬನೇ ದೇವರೆಂದು ನಂಬಿದ್ದಾರೆ. ಆದರೆ ಹಿಂದೂ ಧರ್ಮದಲ್ಲಿ ಹೆಣ್ಣನ್ನು ದೇವರ ಸ್ಥಾನದಲ್ಲಿ ಕಾಣುವ ವ್ಯವಸ್ಥೆಯಿದೆ. ಇದು ಧಾರ್ಮಿಕ ಅಂಶಗಳಲ್ಲಿ ಹೆಣ್ಣಿಗೆ ಸಮಾನಸ್ಥಾನವನ್ನು ಕಲ್ಪಿಸಿದ್ದರು ಎಂಬುದನ್ನು ತಿಳಿಸುತ್ತದೆ. ಆದರೆ ಧಾರ್ಮಿಕ ಆಚರಣೆಗಳಿಗೆ. ಸಂಪ್ರದಾಯಕ್ಕೆ ಸಂಬಂಧಿಸಿದಂತೆ ನೈಜ ಜೀವನದಲ್ಲಿ ಧಾರ್ಮಿಕಾಂಶದಲ್ಲಿ ಸಾಮಾನ್ಯ ಹೆಣ್ಣಿಗೆ ತಾರತಮ್ಯವಿರುವುದು ಹೆಣ್ಣಿನ ಬಗೆಗಿನ ಮಡಿ-ಮೈಲಿಗೆ ಭಾವನೆಯಿಂದ ಕಂಡುಬರುತ್ತದೆ. ಇದು ಕಲ್ಲು ನಾಗರ ಕಂಡರೆ ಹಾಲೆರೆವರು, ದಿಟದ ನಾಗರ ಕಂಡರೆ ಕಲ್ಲಲ್ಲಿ ಹೊಡೆವರು ಎಂಬಂತಾಗಿದೆ. ಬಹುದೇವೋಪಾಸಕರು ಹಲವು ನಾಮಗಳಿಂದ ನೂರಾರು ದೇವರುಗಳನ್ನು ಸೃಷ್ಟಿಸಿಕೊಂಡು ಪೂಜಿಸುತ್ತಾರೆ. ದೇವಾನುದೇವರುಗಳೆಂಬ ಮಾತನ್ನು ಬಳಸುತ್ತಾರೆ. ಈ ಕಾರಣದಿಂದ ದೇವರನ್ನು ಕುರಿತ ಹಬ್ಬ. ಆಚರಣೆ ಒಬ್ಬೊಬ್ಬರಲ್ಲೂ ಭಿನ್ನವಾಗಿರುತ್ತದೆ. ಗ್ರಾಮೀಣ. ಬುಡಕಟ್ಟು ಜನಾಂಗದ ಹಬ್ಬಕ್ಕೂ. ಶಿಷ್ಟಜನಾಂಗದ ಹಬ್ಬಕ್ಕೂ ನಡುವೆ ಕೆಲವು ವ್ಯತ್ಯಾಸಗಳಿವೆ. ಹಬ್ಬವನ್ನು ಆಚರಿಸುವಲ್ಲಿ ವಿವಿಧ ಬಗೆಗಳುಂಟು. ತಮ್ಮ ಬಂಧು ಬಳಗದವರಷ್ಟೇ ಸೇರಿಕೊಂಡು ಮಾಡುವ ಹಬ್ಬಗಳನ್ನು ಕಾಣಬಹುದು. ಈ ರೀತಿಯ ಆಚರಣೆಯನ್ನು ಶಿಷ್ಟ ಹಾಗೂ ಶಿಷ್ಟವಲ್ಲದವರು ಇಬ್ಬರಲ್ಲೂ ಗುರುತಿಸಬಹುದು. ಒಂದು ಊರಿನವರೆಲ್ಲಾ ಸೇರಿ ಹಬ್ಬವನ್ನು ಆಚರಿಸುತ್ತಾರೆ. ಇದನ್ನು ಊರಹಬ್ಬ ಎಂದು ಕರೆಯಲಾಗುತ್ತದೆ. ಆದರೆ ಶಿಷ್ಟ ಸಂಪ್ರದಾಯದಲ್ಲಿ ಊರಿನೊಂದಿಗೆ ಸೇರಿ ಯಾವ ಹಬ್ಬವನ್ನು ಆಚರಿಸುವುದಿಲ್ಲ. ತಮ್ಮ ಜನಾಂಗದವರು ಸೇರಿ ಮಾತ್ರ ಆಚರಿಸುತ್ತಾರೆ. ಶಿಷ್ಟ ಜನಾಂಗದವರಲ್ಲಿ ಹಬ್ಬಗಳ ಆಚರಣೆಯ ಸಂಖ್ಯೆ ಹೆಚ್ಚು. ಗ್ರಾಮೀಣ ಶಿಷ್ಟವಲ್ಲದ ಪರಿಸರದಲ್ಲಿ ಶಿಷ್ಟ ಜನಾಂಗದವರಿಗೆ ಹೋಲಿಸಿದರೆ ಹಬ್ಬಗಳ ಸಂಖ್ಯೆ ಸ್ವಲ್ಪ ಕಡಿಮೆ. ಕೆಲವೊಂದು ಹಬ್ಬಗಳನ್ನು ಮಾತ್ರ

ಇಬ್ಬರಲ್ಲೂ ಆಚರಿಸುವುದನ್ನು ಕಾಣಬಹುದು. ಉದಾ:- ಗೌರಿಗಣೇಶ ಹಬ್ಬ, ಯುಗಾದಿ ಹಬ್ಬ, ಸಂಕ್ರಾಂತಿಹಬ್ಬ ಇತ್ಯಾದಿ.

ಸಂಪ್ರದಾಯದ ಹಾಡುಗಳು ಗ್ರಂಥದಲ್ಲಿರುವ ಹಬ್ಬದ ಹಾಡುಗಳು ವೈದಿಕಬ್ರಾಹ್ಮಣರು ಆಚರಿಸುವ ಹಬ್ಬಗಳ ವಿಧಿ-ವಿಧಾನ. ಆಚರಣೆಯ ಚಿತ್ರಣವನ್ನು ಕೊಡುತ್ತದೆ. ಅದು ಹೇಗೆ ಬದುಕಿಗೆ ಅವಶ್ಯವಾಗಿದೆ ಹಾಗೂ ಸಾರ್ವತ್ರಿಕ ಗುಣವನ್ನು ಹೊಂದಿದೆ ಎಂಬುದು ಹಾಡುಗಳಿಂದ ತಿಳಿದುಬರುತ್ತದೆ. ಕೆಲವು ಹಾಡುಗಳಲ್ಲಿ ದೇವರ ವಿವಿಧ ರೂಪಗಳನ್ನು ಹಾಡಿಹೊಗಳಿದರೆ ಇನ್ನು ಕೆಲವು ಹಾಡುಗಳು ಜೀವಾತ್ಮ ಮತ್ತು ಪರಮಾತ್ಮನ ಸಂಬಂಧವನ್ನು ಹೇಳುತ್ತವೆ. ಇಂತಹ ಹೇರಳವಾದ ಹಾಡುಗಳು ಮಹಿಳೆಯರಿಂದ ರಚಿಸಲ್ಪಟ್ಟಿರುವುದು. ಅದರಲ್ಲೂ ಶಿಷ್ಟ ಸಂಪ್ರದಾಯದ ಅನಕ್ಷರಸ್ಥ ಮಹಿಳೆಯರಿಂದ ಎನ್ನುವುದೇ ಸಂತಸದ ವಿಷಯ. ಈ ಹಾಡುಗಳು ಅವರಲ್ಲಿದ್ದ ಅಗಾಧ ಆಧ್ಯಾತ್ಮ ಒಲವಿಗೆ ಸಾಕ್ಷಿ. ಈ ರೀತಿಯ ಹಲವು ಹಾಡುಗಳು 'ಹೃದಯ-ಸಂಪುಟ' ಗ್ರಂಥದಲ್ಲಿ ಪ್ರಕಟಗೊಂಡಿದೆ. ಅವುಗಳೆಂದರೆ –

೧. ಜೀವನದಲ್ಲಿ ಒದಗುವ ಕಷ್ಟ-ಕಾರ್ಪಣ್ಯಗಳನ್ನು ದೂರಮಾಡುವಂತೆ ಹಿಂಸೆ, ಕಿರುಕುಳದಿಂದ ರಕ್ಷಿಸುವಂತೆ ದೇವರನ್ನು ಬೇಡುವ ಹಾಡುಗಳು.

೨. ತನಗೆ ಅವಶ್ಯವಿರುವ ಸುಖ-ಸೌಭಾಗ್ಯಗಳನ್ನು ಕೊಡುವಂತೆ ಹೇಳಿಕೊಳ್ಳುವ ಹಾಡುಗಳು.

೩. ವೈಯಕ್ತಿಕ ಕ್ಷೇಮವನ್ನು ಬಯಸದೇ ಪರತತ್ವವನ್ನು ಚಿಂತಿಸಿ ಹಾಡುವಂತಹ ಹಾಡುಗಳು.

೪. ಜೀವಾತ್ಮನನ್ನೇ ಪರಮಾತ್ಮನ ಆಲಯವನ್ನಾಗಿಸಿ ಹಾಡುವ ಹಾಡುಗಳು.

೫. ದೇವರಲೀಲೆಗಳನ್ನು ಹಾಡಿ ಹೊಗಳಿರುವಂತಹ ಹಾಡುಗಳು.

೬. ದೇವರಿಗೆ ಮಂಗಳಾರತಿ ಮಾಡುವಾಗ ಹಾಡುವ ಹಾಡುಗಳು.

೭. ದೇವಿಯನ್ನು ಕುರಿತು ಹಾಡುವ ಹಾಡುಗಳು.

ಈ ಹಾಡುಗಳು ಯಾವ ಅಂಶಗಳನ್ನು ಒಳಗೊಂಡಿದೆ. ಯಾವ ಕಾರಣಕ್ಕೆ ಮುಖ್ಯವಾಗುತ್ತವೆ ಎಂಬುದನ್ನು ಉದಾಹರಣೆಗಳೊಂದಿಗೆ ಅರಿಯಬಹುದು. ಸಂಪ್ರದಾಯದ ಹಾಡುಗಳಲ್ಲಿ ಮಾನಸ ಪೂಜೆಯನ್ನು ಕುರಿತ ಹಾಡಿವೆ. ಈ ಪೂಜೆಯನ್ನು ಮಾಡುವ ಮುಂಚೆ ಸ್ಥಳಶುದ್ಧಿ, ದೇಹಶುದ್ಧಿ, ಮನಃಶುದ್ಧಿ ಮಾಡಿಕೊಳ್ಳಬೇಕು. ಆ ನಂತರ ಮನಸ್ಸೋ ಇಚ್ಛೆಯಿಂದ ತಲ್ಲೀನರಾಗಿ ಪೂಜೆ ಮಾಡಲಾಗುತ್ತದೆ.

ಮಾನಸ ಪೂಜೆಯ ನಾನು । ಮಾಡುವೆನು ಮಾಧವಗೆ ।
ಮೌನವ ಮೌನವ ಮೀರಿ । ಮೌನದಿ ಮಾಧವಗೇ

ಮಾನಸ ಪೂಜೆಯ ಹಾಡುಗಳಿಂದ ತಿಳಿಯಬರುವ ಸಂಗತಿ ಎಂದರೆ ಪಂಚೇಂದ್ರಿಯಗಳ ಮೇಲೆ ಹಿಡಿತವನ್ನು ಸಾಧಿಸುವಷ್ಟು ಪ್ರಬುದ್ಧತೆಯನ್ನು ಮಹಿಳೆಯರು ಹೊಂದಿದ್ದರು. ಸಂಸಾರದಲ್ಲಿದ್ದು ಕೊಂಡೇ ಆಧ್ಯಾತ್ಮದಲ್ಲಿ ಸಾಧನೆಯ ಮೆಟ್ಟಿಲನ್ನೇರುವಿಕೆ ಇಲ್ಲಿ ತಿಳಿದುಬರುತ್ತದೆ. ಜೀವಾತ್ಮನನ್ನು ಪರಮಾತ್ಮನಿಗಾಗಿ ತೊಡಗಿಸಿಕೊಳ್ಳುವಿಕೆ. ಹಿಂದೆ ಋಷಿಮುನಿಗಳು ಈ ರೀತಿಯ ಸಂಪೂರ್ಣ ಅರ್ಪಣಾಭಾವದಲ್ಲಿ ದೇವಾಧಿದೇವತೆಗಳನ್ನು ಪೂಜಿಸಲು ಸಂಸಾರವನ್ನು ತೊರೆದು ಏಕಾಂಗಿಯಾಗಿದ್ದುಕೊಂಡು ಆಧ್ಯಾತ್ಮ ಸಾಧನೆಗೆ ಪ್ರಯತ್ನಿಸುತ್ತಿದ್ದರು. ಈ ಹಾಡುಗಳು ತತ್ವಬೋಧನೆಯನ್ನು ಮಾಡುತ್ತದೆ.

ಪಂಚ ಕರಣಂಗಳಿರ । ಪಂಚ ವಿಷಯಂಗಳಿರ

ಪಂಚ ಕರ್ಮೇಂದ್ರಿಯಂಗಳಿರಾ

ಪಂಚಪ್ರಾಣಂಗಳಂ । ಪಂಚ ಜ್ಞಾನಂಗಳಂ

ಪಂಚ ಕೋಶನ ಎಂದೂ

ದೇವರ ಹಾಡುಗಳಲ್ಲಿ ಸಾಹಿತ್ಯಿಕ ಅಂಶವಾಗಿ ವಚನ ಪ್ರಕಾರದ ರಚನೆಯನ್ನು ಕಾಣಬಹುದು. ಶಿವಶಿವ ಎನ್ನಬೇಕು ಹಾಡು ವಚನ ಧಾಟಿಯಲ್ಲಿ ರಚಿಸಲಾಗಿದ್ದು, ವಚನಕಾರರ ತತ್ವಗಳನ್ನೇ ಉಲ್ಲೇಖಿಸುತ್ತದೆ. ಗುರು-ಹಿರಿಯರ, ತಂದೆ-ತಾಯಿಯಲ್ಲಿ ಗೌರವವನ್ನು, ಬದುಕಿನಲ್ಲಿ ಯಾವುದು ಮಾಡಬೇಕು, ಯಾವುದನ್ನು ಮಾಡಬಾರದೆಂಬ ಸಂದೇಶವನ್ನು ಈ ಹಾಡುಗಳ ಮೂಲಕ ಹೇಳಲಾಗಿದೆ.

ಶಿವ ಶಿವ ಎನ್ನಬೇಕು । ನಾವೆಲ್ಲರು । ಶಿವಧ್ಯಾನ ಮಾಡಬೇಕು

ಭವಹರನ ಭಜಿಸಬೇಕು । ಭವರೋಗ ಕಳೆಯಬೇಕು

ಮನುಷ್ಯನ ಸಹಜ ಗುಣವೆಂದರೆ ತನಗೇನಾದರು ಕಷ್ಟಗಳು ಬಂದಾಗ ದೇವರ ಮೊರೆ ಹೋಗುವಂತಹದ್ದು. ದೇವರ ಬಹುಪಾಲು ಭಕ್ತರಲ್ಲಿ ಇಂತಹವರೇ ಹೆಚ್ಚು. ತಮ್ಮ ಅಂತರಾಳದ ಅಳಲನ್ನು ದೇವರಲ್ಲಿ ನಿವೇದಿಸಿ ಕಾಪಾಡು ಎನ್ನುತ್ತಾರೆ. ಇದರಿಂದ ಮನೋಬಲವು ಹೆಚ್ಚಾಗಿ ಕಷ್ಟಗಳನ್ನು ಎದುರಿಸಿ ಬಾಳುವಂತ ಶಕ್ತಿ ದೊರಕುತ್ತದೆ.

ದುಷ್ಟ ಜನರು ತಾಯೇ । ಎನ್ನನು ಬಹಳ

ಕಷ್ಟ ಪಡಿಸುವರು

ಇಷ್ಟು ಕಾಲದಿಂದ । ನಾ ಮಾಡಿದ ತಪ

ಕೆಟ್ಟು ಹೋಗುವುದೆಂದು । ದೃಷ್ಟಿಸಿ ನೋಡಮ್ಮ

ದೇವರನ್ನು ಒಲಿಸಿಕೊಳ್ಳಬೇಕು ಎಂದು ವಿವಿಧ ಅವತಾರಗಳನ್ನು ಹಾಡಿ ಹೊಗಳಿರುವ ಸ್ತುತಿಗಳಿವೆ. ವಿಷ್ಣುಪರ ಹಾಡುಗಳು. 'ದೃಷ್ಟಿತಾಗೀತರಂಗ', 'ಮಗುವ ಕರೆದು ಕೊಳ್ಳಮ್ಮ', 'ಬಾರೋ ಮಾಧವ',

'ರಾಮನಾಮವ ನುಡೀ'. 'ಶ್ರೀರಾಮರ ಪಟ್ಟಾಭಿಷೇಕದ ಹಾಡು' ಹೀಗೆ ಪುರಾಣ ಪಾತ್ರಗಳಲ್ಲಿ ದೇವರುಗಳ ಪಾತ್ರ. ಮಹಿಮೆಯನ್ನು ಹಾಡಿನ ರೂಪದಲ್ಲಿ ಹೇಳಲಾಗುತ್ತದೆ. 'ಶ್ರೀರಾಮನ ವೈಭವದ ವರ್ಣನೆ'. ಇದು ವರ್ಣನೆಗಳಿಂದ ಕೂಡಿದ ಹಾಡು. ಸಂಪ್ರದಾಯದ ಹಾಡುಗಳಲ್ಲಿರುವ ವರ್ಣನಾತ್ಮಕ ಹಾಡುಗಳಲ್ಲಿ ಈ ಹಾಡು ಸೊಗಸಾಗಿದೆ. ಸಂಪ್ರದಾಯದ ಹಾಡುಗಳ ರಚನಾಕಾರರು ತಮ್ಮ ನೆಚ್ಚಿನ ದೇವತೆಗಳನ್ನು ಹಲವಾರು ರೂಪಗಳಲ್ಲಿ ಕಲ್ಪಿಸಿ. ಆರಾಧಿಸಿ. ಅವರ ಯೋಚನೆ ನಂಬಿಕೆಗಳ ಆಧಾರದ ಮೇಲೆ ಅನೇಕ ದೃಷ್ಟಾಂತಗಳನ್ನು. ಪ್ರತಿಮೆ. ರೂಪಕಗಳನ್ನು ಬಳಸಿಕೊಂಡು ವರ್ಣಿಸಿದ್ದಾರೆ.

೨. ಮಂಗಳಾರತಿ ಹಾಡುಗಳು :-

ಮಂಗಳ ಎಂದರೆ ಒಳ್ಳೆಯ ಕ್ಷಣ. ಸಂತೋಷದ ಕ್ಷಣ. ಶುಭ ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ಒಳ್ಳೆಯದಾಗಲಿ ಎನ್ನುವ ಉದ್ದೇಶದಿಂದ ಈ ಹಾಡನ್ನು ಹಾಡಲಾಗುತ್ತದೆ. ಹಬ್ಬದ ದಿನದಂದು ಎಲ್ಲಾ ಕಾರ್ಯವು ಸುಸೂತ್ರವಾಗಿ ನೆರವೇರಲು ಮಂಗಳ-ಗೀತೆಯನ್ನು ಜ್ಯೋತಿ ಬೆಳಗುವುದರೊಂದಿಗೆ ಹಾಡುತ್ತಾರೆ. ದಶರಥ ಸುತನಾಗಿ ಶೇಷಶಯನ ಕೇಶವಗೆ. ದೇವರ ಉದರದಿ. ಮಂಗಳ ಗುರುವರ್ಯ, ಮಂಗಳ ಗುರುಶಂಕರಾ – ಒಟ್ಟು ಐದುಮಂಗಳ ಗೀತೆಗಳು ಸಂಪ್ರದಾಯ ಹಾಡುಗಳು ಗ್ರಂಥದಲ್ಲಿದೆ. ಇದರಲ್ಲಿ ಒಂದು ಹಾಡು ಗುರುಶಂಕರರನ್ನು ಕುರಿತು ಹಾಡಿವಂತಿದೆ.

ಮಂಗಳ ಗುರುವರ್ಯ ಜಯ ಜಯ

ಶಂಕರ ಯತಿವರ್ಯ

ತುಂಗಭದ್ರೆಯ ತೀರದಿ ಶೋಭಿಪ

ವೈದಿಕ ಧರ್ಮವನೂ ಧರೆಯೊಳು

ಮೋದದೆ ಸಲಹೆನುತಾ

ಆದಿತೀಯರು ದೈನದಿ ಬೇಡಲು

ಮೋದಿನಿಯೊಳು ನರರೂಪಿನೊಳ್ ಉದಿಸಿದೆ

ಆರತಿಯನ್ನು ದೇವರಿಗೂ, ಮನುಷ್ಯರಿಗೂ ಕೆಲವು ವಿಶೇಷ ಸಂದರ್ಭದಲ್ಲಿ ಮಾಡಲಾಗುತ್ತದೆ. ಆರತಿ ಎಂದರೆ ದೀಪವನ್ನು ಹಚ್ಚಿ ಅದನ್ನು ವೃತ್ತಾಕಾರವಾಗಿ ಬೆಳಗುವುದು. ಹೀಗೆ ಬೆಳಗುವ ವೇಳೆಯಲ್ಲಿ ದೇವರಲೀಲೆಗಳನ್ನು ಹೊಗಳುತ್ತಾ, ತಮ್ಮ ಕಷ್ಟಗಳನ್ನು ಬಗೆಹರಿಸೆಂದು ಬೇಡುತ್ತಾ ಆರತಿ ಮಾಡುವುದು ಒಂದು ಪದ್ಧತಿ. ಇದನ್ನು 'ಮಂಗಳಾರತಿ' ಎಂದು ಕರೆಯುತ್ತಾರೆ. ಎಲ್ಲಾ ವರ್ಗದ ಸಂಪ್ರದಾಯಸ್ಥರಲ್ಲೂ ಆರತಿ ಬೆಳಗುವುದು ಸಾಮಾನ್ಯ. 'ಹೃದಯಸಂಪುಟ' ಗ್ರಂಥದಲ್ಲಿ ಇಪ್ಪತ್ತೆರಡು ದೇವರಿಗೆ ಸಂಬಂಧಿಸಿದ ಆರತಿಯ ಹಾಡುಗಳಿವೆ. ದೇವರು-ದೇವಿಯರನ್ನು ಕುರಿತು ಆರತಿ

ಹಾಡುಗಳಲ್ಲಿ ಸ್ತುತಿಸಲಾಗಿದೆ. ಬೆಳಕು ಜ್ಞಾನದ ಚೈತನ್ಯದ ಸಂಕೇತ. ಅಂಧಕಾರವನ್ನು ದೂರಮಾಡಿ ಮನಸ್ಸಿನಲ್ಲಿ ಬೆಳಕಿನ ದೀಪವನ್ನು ಹಚ್ಚಿ ಜೀವನವನ್ನು ಸುಂದರವಾಗಿರಿಕೊಳ್ಳುವಲ್ಲಿ ಇಂಥಹ ಆಧ್ಯಾತ್ಮ ತಲ್ಲೀನತೆ ಅಗತ್ಯವಾಗಿದೆ. ಆರತಿ ಹಾಡುಗಳಾಗಿ ಗಜಮುಖನಿಗೆ, ಗಣಪನಿಗೆ. ಗಣಪನಿಗೊಲಿದಾರತಿ. ಆನಂದಮಯೆಗೆ ಮಂಗಳಾರತಿ. ಹಾವಿನ ಮೇಲೆ ಮಲಗಿದಾತಗೆ ಕರುಣಿಸು ದೇವ. ಹಳ್ಳದಲ್ಲಿ ಮೈತೊಳೆದು ಬ್ರಹ್ಮಮಯವೇ ಕಂಡೇ, ಮುತ್ತಿನಾರತಿಯ ಎತ್ತಿರೆ, ಕಂಡುಕಾಣದ ಸರಿಯೇನೇ. ಆರತಿ ಎತ್ತಿರೆ. ಮಿಸುಣಿಯ ಪ್ರತಿಮೆ. ಗಂಗೆಯ ಭಾಗೀರಥಿ. ಶುದ್ಧಸ್ನಾನವ ಮಾಡಿ. ಆರತಿ ಮಾಡುವೇ ನಾ ಶಿವನೇ. ಕೋಪವೆತಕ್ಕೆ ನನ್ನ ಮೇಲೆ. ನೀರಜೋದ್ಭವೆ. ಮುತ್ತಿನಾರತಿ ದೇವಗೆ ನಮಸ್ಕಾರ. ಇವಿಷ್ಟು ಆರತಿ ಹಾಡುಗಳನ್ನು ಹೃದಯ ಸಂಪುಟ ಗ್ರಂಥದಲ್ಲಿ ಪ್ರಕಟಿಸಿದ್ದಾರೆ. ಆರತಿ ಮಾಡುವುದರಲ್ಲಿಯೂ ಹಲವು ಬಗೆಗಳನ್ನು ಕಾಣಬಹುದು. ಉದಾಹರಣೆ:- ಬೆಲ್ಲದಾರತಿ, ಮುತ್ತಿನಾರತಿ. ನಿಂಬೆ ಆರತಿ. ತಂಬಿಟ್ಟಿನಾರತಿ ಇತ್ಯಾದಿ.

ಉದಾಹರಣೆಗೆ

ಮುತ್ತಿನಾರತಿ ಎತ್ತಿರೇ । ಮುಕುಂದ ವರದೆಗೆ

ಮುತ್ತಿನಾರತಿ ಎತ್ತಿರೇ

ಮುತ್ತಿನಾರತಿ ಎತ್ತಿರೇ

ತ್ಪತ್ತಿ ಸ್ಥಿತಿಲಯ ಕರ್ತೃಕಾರಿಗೆ

ನಿತ್ಯನಿರ್ಗುಣ ನಿಗಮ ವೇದ್ಯಗೆ

ವಸ್ತು ಅರಸಿರಿ ಸತ್ಯಭಾಮೆಗೆ

ದೇವಿ ಹಾಡುಗಳು:-

ಶಿಷ್ಟ ಸಂಪ್ರದಾಯದವರು ಪೂಜಿಸುವ ದೇವಿಯರು ಯಾರ್‍ಯಾರು ಎಂಬ ಮಾಹಿತಿ ಈ ಹಾಡುಗಳಲ್ಲಿ ಸಿಗುತ್ತದೆ. ದೇವಿಯರ ಪೂಜೆ ಹಿಂದೂ ಸಂಪ್ರದಾಯದಲ್ಲಿ ಎಲ್ಲ ವರ್ಗದವರಲ್ಲಿ ನಡೆಯುತ್ತದೆ. ಹಿಂದೂ ಸಮಾಜದಲ್ಲಿ ಸ್ತ್ರೀಗೆ ವಿಶಿಷ್ಟಸ್ಥಾನವಿದೆ ಎಂಬುದು ಸಂಸ್ಕೃತದ ಈ ಶ್ಲೋಕದಿಂದ ತಿಳಿದುಬರುತ್ತದೆ. "ಯರ್ತನಾರ್ಯಸ್ತು ಪೂಜ್ಯಂತೇ ರಮಂತೇ ತಥಾ ದೇವತಃ" ಹೆಣ್ಣನ್ನು ಎಲ್ಲಿ ಗೌರವಿಸಲಾಗುತ್ತದೊ ಅಲ್ಲಿ ದೇವತೆಗಳು ನೆಲೆಸುತ್ತಾರೆ. ನಮ್ಮ ಕವಿವರ್ಯರೆಲ್ಲ ಸಾಹಿತ್ಯದಲ್ಲಿ ಸ್ತ್ರೀಪಾತ್ರ ಚಿತ್ರಣವನ್ನು ಪರಿಚಯಿಸಿರುವ ರೀತಿಯಿಂದಲೇ ಸ್ತ್ರೀಗಿದ್ದ ಸ್ಥಾನಮಾನವನ್ನು ತಿಳಿಸುತ್ತವೆ. ದೇವಾಧಿದೇವತೆಗಳು ಅಸುರರ ಸಂಹಾರಕ್ಕಾಗಿ ತಮ್ಮ ಶಕ್ತಿಯೆನ್ನಲ್ಲ ದೇವಿಗೆ ಧಾರೆ ಎರೆಯುತ್ತಿದ್ದರು ಎಂಬುದು ಪುರಾಣೇತಿಹಾಸಗಳಿಂದ ತಿಳಿದುಬರುತ್ತವೆ. ವಿವಿಧ ಹೆಸರುಗಳಿಂದ

ದೇವತೆಯರನ್ನು ಬದುಕಿಗೆ ಅಗತ್ಯವಾದ ದ್ರವ್ಯಗಳ ಹೆಸರುಗಳೊಂದಿಗೆ ಆರೋಪಿಸಿ ಪೂಜಿಸುತ್ತಾರೆ. ಉದಾ:- ಗಂಗೆ-ನೀರು. ಲಕ್ಷ್ಮಿ-ಐಶ್ವರ್ಯ. ಸರಸ್ವತಿ-ವಿದ್ಯೆ ಇತ್ಯಾದಿ. ಆದರೆ ಒಂದೊಂದು ಜಾತಿಜನಾಂಗಗಳಲ್ಲಿ ದೇವಿಯರನ್ನು ಭಿನ್ನವಾಗಿ ರೂಪಿಸಿಕೊಳ್ಳಲಾಗಿದೆ. ಗ್ರಾಮೀಣ ಬುಡಕಟ್ಟು ಜನಾಂಗಕ್ಕೂ . ಶಿಷ್ಟಸಂಪ್ರದಾಯದ ಜನಾಂಗಗಳ ನಡುವೆ ದೇವಿಯರ ನಡುವೆ ಭಿನ್ನತೆಯನ್ನು ಕಾಣಬಹುದು. ಶಿಷ್ಟರಲ್ಲದವರಲ್ಲಿ ಮಾರಮ್ಮ, ಕಾಳಮ್ಮ ಜಲಗೇರಮ್ಮ, ಕಬ್ಬಾಳಮ್ಮ ಮುಂತಾದ ದೇವತೆಯರ ಪೂಜೆಯನ್ನು ಕಾಣಬಹುದು. ಶಿಷ್ಟಸಂಪ್ರದಾಯದಲ್ಲಿ ದೇವತೆಯರನ್ನಾಗಿ ಪಾರ್ವತಿ, ಸರಸ್ವತಿ, ಗಂಗೆ, ಗೌರಿ, ರಾಜರಾಜೇಶ್ವರಿ, ಚಾಮುಂಡೇಶ್ವರಿ, ಸೀತೆ, ಶಾಂಭವಿ. ಜಲಜ. ಕಾಮಾಕ್ಷಿ ಮುಂತಾದ ದೇವರನ್ನು ಪೂಜಿಸುತ್ತಾರೆ. ಇವೆಲ್ಲ ಶಿಷ್ಟ ಜನಾಂಗದವರು ಪೂಜಿಸುವಂತಹ ದೇವತೆಗಳು. ದೇವಿಯರ ಪುರಾಣ, ದುಷ್ಟಾಂತಗಳನ್ನು ಹಾಡುಗಳಲ್ಲಿ ಬಣ್ಣಿಸಲಾಗಿದೆ. ಯಾವ ಪೂಜೆಗೆ ಏನನ್ನು ಬಳಸಬೇಕೆಂಬ ಪೂಜಾದ್ರವ್ಯಗಳ ಮಾಹಿತಿ. ಇವುಗಳಲ್ಲಿ ಸಿಗುತ್ತದೆ.

ತುಳಸೀ ಹಾಡುಗಳು :-

ತುಳಸಿಗೆ ಧಾರ್ಮಿಕ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ನೀಡಲಾಗಿದೆ. ಪವಿತ್ರವೆಂಬ ದೃಷ್ಟಿಯಿಂದ ತುಳಸಿಯನ್ನು ಬಳಸಲಾಗುತ್ತದೆ. ಸುಮಂಗಲಿಯರು, ಮದುವೆಯಾಗದ ಹೆಣ್ಣುಮಕ್ಕಳು ತುಳಸಿ ಪೂಜೆಯನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ತುಳಸಿ ಹಾಡುಗಳಲ್ಲಿ ಲಕ್ಷ್ಮೀ ಮತ್ತು ತುಳಸಿ ದೇವಿಯರ ಸಂಭಾಷಣಾ ರೂಪದಲ್ಲಿರುವ ಹಾಡು ಅಮೋಘವಾಗಿದ್ದು ಸಹಬಾಳ್ವೆಯ ಸಂದೇಶವನ್ನು ಒಳಗೊಂಡಿದೆ. ಸಾಮಾಜಿಕ ಜೀವನದಲ್ಲಿ ಅಗತ್ಯವಿರುವ ಸನ್ನಡತೆಯನ್ನು ಈ ಹಾಡು ಹೇಳುತ್ತದೆ.

ಉದಾಹರಣೆಗೆ :

ಲಕ್ಷ್ಮಿ : ಬಂಟರ ಮನೆ ಮುಂದೆ ಬಾಗಿಲಲ್ಲಿರುವೋಳು
ಮಂಟಪವನ್ನೇ । ಕಟ್ಟಿಸಿ ಕೊಂಬೋಳು
ಹೆಂಟೆ ಹೆಂಟೆಗಳೊಳಗೆ ವಂಟ್ಯಾಗಿ ಬೆಳೆವೋಳು
ಗಂಟು ತುಳಸಿಗೂ ಎನಗು ಸರಿಬರುವುದೇ

ತುಳಸಿ : ದೊಡ್ಡ ದೊಮದರ ಮನೆ ಒಳಗೆ ತಾನಿರುವೋಳು
ಅಡ್ಡ ಬೊಡ್ಡೇನ ಹಾಕಿಸಿ ಕೊಂಬಳು
ದುಡ್ಡು ದುಡ್ಡಿಗೆ ತಾನು ಒಡ್ಯಾಗಿ ಬೆಳೆಯುವಳು
ದಡ್ಡ ಲಕ್ಷ್ಮಿಗೂ ಎನಗೂ ಸರಿಬರುವುದೇ

ಇಲ್ಲಿ ಲಕ್ಷ್ಮೀ–ತುಳಸಿಯರು ಒಬ್ಬರಿಗೊಬ್ಬರು ಗುಣಗಳನ್ನು ತೆಗಳುತ್ತಾ, ವ್ಯಂಗ್ಯ ಮಾಡಿ ಕೊಳ್ಳುತ್ತಿರುತ್ತಾರೆ. ಇಬ್ಬರ ಜಗಳವನ್ನು ಕಂಡ ರಘುಪತಿ ಇಬ್ಬರನ್ನು ಒಂದುಗೂಡಿಸಿ ರಾಜಿ ಮಾಡಿಸುತ್ತಾನೆ. ಇದು ಹಲವಾರು ಕುಟುಂಬಗಳಲ್ಲಿ, ಸಮಾಜದಲ್ಲಿ ನಡೆಯುವ ಜಗಳಗಳನ್ನು, ತಿದ್ದಿ ಬಾಳುವುದನ್ನು ಪರೋಕ್ಷವಾಗಿ ಅಪೇಕ್ಷಿಸುವಂತಿದೆ. ಇಂತಹ ಹಾಡುಗಳು ಸಮಾಜ ಕೌಟುಂಬಿಕ ದೃಷ್ಟಿಯಿಂದ ಮಹತ್ವದ್ದಾಗಿದೆ. ತುಳಸಿ ಮಧ್ಯದಿ ಶ್ರೀ ತುಳಸಿ ಜಯ ತುಳಸಿ, ಶ್ರೀ ತುಳಸಿ ಶ್ರೀದೇವಿ, ಏಳುಸುತ್ತಿನಕೋಟೆ, ತುಳಸಿಗೆ ಆರತಿ ಹಾಡುಗಳು, ರಂಗನ ರಾಣಿ ಶ್ರೀ ತುಳಸಿಗೆ, ಯಾಕೆ ದಯಬಾರದೆ, ಪಾಲಿಸಮ್ಮ ಹೂವ ಹೀಗೆ ತುಳಸಿಗೆ ಸಂಬಂಧಿಸಿದಂತೆ ಒಟ್ಟು ಹತ್ತು ಹಾಡುಗಳಿವೆ. ತುಳಸಿಗೆ ಆಧ್ಯಾತ್ಮ ಪ್ರಪಂಚದಲ್ಲಿ ನೀಡಿರುವ ಸ್ಥಾನ ಎಂತಹದ್ದು ಎಂಬುದು ಈ ಹಾಡುಗಳಿಂದ ತಿಳಿಯುತ್ತದೆ. ಪ್ರಕೃತಿಯಲ್ಲಿನ ಸಸ್ಯಗಳಿಗೆ ದೇವರಸ್ಥಾನವನ್ನು ನೀಡಿ ಪೂಜಿಸುವುದು. ದೇವರನ್ನು ಆರಾಧಿಸುವ ಬಗೆಗಳಲ್ಲಿ ಒಂದಾಗಿದೆ.

ಇಂತಹ ಹಾಡುಗಳು ಶಿಷ್ಟ ಜನಾಂಗದ ಬದುಕನ್ನು ಹೊಕ್ಕು ನೋಡುವಂತೆ ಮಾಡಿದ್ದು ಅವರ ಜೀವನ ಮೌಲ್ಯಗಳ ನಿಜ ಸ್ವರೂಪವೇನು ಎಂಬುದು ನಮಗೆ ತಿಳಿದುಬರುತ್ತದೆ. ಜಾನಪದ ಜೀವನ ಮೌಲ್ಯಗಳ ಹಿನ್ನೆಲೆಯಲ್ಲಿ ಹಾಡುಗಳನ್ನು ಅವಲೋಕಿಸಿದಾಗ, ಆಲೋಚಿಸಿದಾಗ ಜೀವನದ ಬೇರು ನಂಬುಗೆಗಳಲ್ಲಿರುವುದು ನಮ್ಮ ಗಮನಕ್ಕೆ ಬರುತ್ತದೆ. ಒಂದು ನಂಬಿಕೆಯ ಮೂಲಕವೇ ತಮ್ಮ ಜೀವನವನ್ನು ಶಕ್ತ್ಯಾನುಸಾರ ನಿಯಂತ್ರಿಸುವುದನ್ನು ಸಂಪ್ರದಾಯದ ಹಾಡುಗಳಲ್ಲಿ ಕಾಣುತ್ತೇವೆ.

ವ್ರತ ಕಥೆಗಳ ಹಾಡು :–

ವ್ರತ ಎಂದರೆ 'ಕಟ್ಟು', 'ಕಟ್ಟಳೆ', 'ನಿಯಮ', 'ಶಾಸನ', 'ವಿಧಿ', 'ಯಜ್ಞ', 'ಯಾಗ', 'ಪೂಜೆ', 'ಧಾರ್ಮಿಕಪ್ರಜ್ಞೆ', 'ನಿಯಮ', 'ನಿಷ್ಠೆ' ಎನ್ನುವ ಅರ್ಥವನ್ನು ಹೊಂದಿದೆ. ಬ್ರಾಹ್ಮಣ ಸಂಪ್ರದಾಯದಲ್ಲಿ ವ್ರತ ಆಚರಣೆ ಹೆಚ್ಚು. ನಿರ್ದಿಷ್ಟ ಕಾರಣಗಳಿಗಾಗಿ ವ್ರತಾಚರಣೆಯನ್ನು ಕೈಗೊಳ್ಳುತ್ತಾರೆ. ಪ್ರತಿಯೊಂದು ವ್ರತಗಳ ಹಿಂದೆ ಪೌರಾಣಿಕ ಚಾರಿತ್ರಿಕ ಹಿನ್ನೆಲೆಯಿರುತ್ತದೆ. ಇದು ಇತಿಹಾಸ ರಚನೆಗೆ ಸಹಾಯಕವಾಗುತ್ತದೆ. ವ್ರತವನ್ನು ಕೆಲವು ಸಂಕೇತಗಳನ್ನು ರಚಿಸಿ ಆ ಸಂಕೇತಗಳಲ್ಲಿ ದೇವರನ್ನು ಕಾಣುತ್ತಾರೆ. ಈ ವ್ರತಾಚರಣೆಗಳಲ್ಲಿ ರಂಗೋಲಿಗೆ ಪ್ರಮುಖ ಸ್ಥಾನವಿದೆ. ರಂಗೋಲಿಯನ್ನು ಬಳಸಿ ದೇವರ ಆಕೃತಿಗಳನ್ನು ರಚಿಸಿ ಹಲವು ವ್ರತಗಳನ್ನಾಚರಿಸುತ್ತಾರೆ. ಇದನ್ನು ಸದ್ ಗೃಹಿಣೀಯರಿಗಿರಬೇಕಾದ ಮುಖ್ಯ ವಿಚಾರಗಳಲ್ಲಿ ಒಂದು ಎಂದು ಭಾವಿಸಲಾಗಿದೆ. ಪುರುಷರಂತೆ ಬರವಣಿಗೆ ವಿದ್ಯಾಭ್ಯಾಸ ಆಗಿನ ಸಂದರ್ಭದಲ್ಲಿ ಇಲ್ಲದಿದ್ದರೂ ರಂಗೋಲಿ ಮುಂತಾದವು ಮಹಿಳೆಯರ ಬರಹ ರೂಪದ ಕಲೆಯಾಗಿದ್ದವು. ವ್ರತಗಳ ಇನ್ನೊಂದು ಮುಖ

ದಾನ-ಧರ್ಮ. ಇದು ಒಳ್ಳೆಯ ಸುವ್ಯವಸ್ಥಿತ ಸಮಾಜದಲ್ಲಿರಬೇಕಾದಂತಹ ಲಕ್ಷಣ. ಇಂತಹ ಗುಣಗಳನ್ನು ಮನುಷ್ಯನಲ್ಲಿ ತುಂಬುವಿಕೆ ವ್ರತದ ಮೂಲಕ ಸಾಕಾರಗೊಳ್ಳುತ್ತದೆ. ಹೆಣ್ಣಿಗೆ ತನ್ನ ಸಂಸಾರ, ಕುಟುಂಬ ವರ್ಗದವರು, ಸುತ್ತಮುತ್ತಲಿನ ಪರಿಸರವನ್ನು, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಬೆಳೆಸುವಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಪ್ರೌಢಿಮೆ ಇಂತಹ ಆಚರಣೆಗಳಿಂದ ಲಭಿಸುತ್ತದೆ. ವ್ರತಗಳನ್ನು ಆಚರಿಸುವವರು ಹೆಂಗಸರೇ ಆಗಿದ್ದಾರೆ. ಇವು ಅವಳನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಸಮರ್ಥಳನ್ನಾಗಿಸುತ್ತದೆ. ಧಾರ್ಮಿಕ ಅಂಶಗಳ ಮೂಲಕ ಮಹಿಳೆಯರನ್ನು ಸಂಸಾರದ ಸಲಹುವಿಕೆಗೆ ತರಬೇತಿಯನ್ನು ವ್ರತಗಳ ಆಚರಣೆಯು ನೀಡುತ್ತಿದ್ದವು.

ತಮ್ಮ ಪಾಪ, ಕರ್ಮ, ಕಷ್ಟಗಳು ಪರಿಹಾರವಾಗಲೆಂದು ವ್ರತಗಳನ್ನು ಮಾಡುತ್ತಾರೆ. ಈ ಮೂಲಕ ಅವರಲ್ಲಿನ ಮಾನಸಿಕ ಒತ್ತಡಗಳು ಕಡಿಮೆಯಾಗುತ್ತವೆ. ಹೀಗೆ ಹಲವು ಉದ್ದೇಶ, ಯೋಚನೆಗಳ ಆಧಾರದ ಮೇಲೆ ವ್ರತಗಳು ರೂಪುಗೊಂಡಿದೆ ಎನ್ನಬಹುದು. ಪ್ರತಿ ವ್ರತಾಚರಣೆಯ ವೇಳೆಯಲ್ಲೂ ವ್ರತಕಥೆಯನ್ನು ಕಡ್ಡಾಯವಾಗಿ ವಾಚಿಸುತ್ತಾರೆ. ಪ್ರತಿ ಹಾಡಿನಲ್ಲೂ ವ್ರತ ಮಾಡಲು ಅನುಸರಿಸಬೇಕಾದ ಕ್ರಮದ ಜೊತೆಗೆ ನೈವೇದ್ಯಕ್ಕೆ ಬೇಕಾದ ಅಡುಗೆಯನ್ನು ತಯಾರಿಸುವ ಬಗೆಯ ಈ ಹಾಡುಗಳಿಂದ ತಿಳಿದುಬರುತ್ತದೆ. ಇಂತಹ ಆಚರಣೆಯನ್ನು ಹೆಚ್ಚಾಗಿ ಶಿಷ್ಟ ಜನಾಂಗದಲ್ಲಿ ಮಾತ್ರ ಕಾಣಲು ಸಾಧ್ಯ. ವ್ರತಾಚರಣೆಗಳನ್ನು ಮನುಷ್ಯ ಜೀವನದಲ್ಲಿನ ಸಮಸ್ಯೆಗಳ ನಿವಾರಣೆಗಾಗಿ ಮಾಡುತ್ತಾನೆ. ಇದು ಮನುಷ್ಯ ಜೀವನದಲ್ಲಿ ನಿರಂತರವಾಗಿ ಉದ್ಭವಿಸುವ ಸಮಸ್ಯೆಗಳ ಸಮನ್ವೀಕರಣ ಕುರುಹು. ಮನಸ್ಸಿನಲ್ಲಿ ಅಡಗಿರುವ ದುಃಖ, ನೋವು, ಪಾಪಪ್ರಜ್ಞೆ, ಭಯ, ಆತಂಕಗಳ ಕೊರತೆಗಳ ಮೂಟೆಯ ಹೊರೆಯಿಂದ ಕಳಚಿಕೊಳ್ಳಲು ಸಕಾರಾತ್ಮಕ ಜೀವನವನ್ನು ಕಂಡುಕೊಳ್ಳಲು ಅನುಸರಿಸುವ ಮಾರ್ಗ. ವ್ರತಕಥೆಗಳು ಬ್ರಾಹ್ಮಣ ಸಂಪ್ರದಾಯದ ಒಳಗಿನ ಪೌರೋಹಿತ್ಯ ಪದ್ಧತಿಯನ್ನು ಸವಿವರವಾಗಿ ತಿಳಿಸುತ್ತದೆ. ಸಾಂಸ್ಕೃತಿಕವಾದ ಅವರ ಬದುಕಿನ ಚಿತ್ರಣವನ್ನು ನೀಡುತ್ತದೆ. ವ್ರತಾಚರಣೆಗಳಲ್ಲಿ ಅನುಸರಿಸುವ ನೀತಿ-ನಿಯಮ, ಕಟ್ಟು-ಕಟ್ಟಳೆಗಳಂತಹ ಶಿಸ್ತನ್ನು ಜೀವನದಲ್ಲೂ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಪ್ರತಿಯೊಂದು ಕಥೆಗಳ ಹಿಂದಿರುವಂತಹ ಪೌರಾಣಿಕ, ಚಾರಿತ್ರಿಕ ಅಂಶಗಳು ಇತಿಹಾಸದ ಪುನರ್ ಸೃಷ್ಟಿಗೆ ಸಹಾಯಕವಾಗಿದೆ. ಸಾಹಿತ್ಯಿಕ ಅಂಶವನ್ನಾಗಿ ಸಾಂಗತ್ಯ, ರಗಳೆ ಧಾಟಿಯ ಹಾಡುಗಳನ್ನು ಗುರುತಿಸಬಹುದು.

ಉದಾ:- (ಸಾಂಗತ್ಯ)

ಪೃಥ್ವೀಗೀಶ್ವರನೊಬ್ಬ ಸುತರಿಲ್ಲದೆ ಇರಲು ।

ಅತಿಶಯದಿಂದಲೆ ಆಲೋಚಿಸೀ

ಸುತರನು ಪಡೆಯಬೇಕೆನುತ ಸಂಭ್ರಮದಿಂದ

ಸತಿ ಸಹಿತ ದೂರ ಹೊರಟ ತಪೋವನಕೆ

ರಗಳೆ ಧಾಟಿಯಲ್ಲಿ ರಚನೆಯಾಗಿರುವ ಹಾಡಿಗೆ ಉದಾಹರಣೆ

ದೇವಿ ದೇವಿ ಜೈ ಪರಮೇಶ್ವರಿ, ಇಂದ್ರರು, ಚಂದ್ರರು
ದೇವೇಂದ್ರರು, ಗರುಡಗಾಂಧರ್ವರು, ಏಕಾದಶರುದ್ರರು
ದ್ವಾದಶಾದಿತ್ಯರು, ಇಷ್ಟು ಮಂದಿ ಕುಳಿತಿರುವಾಗ
ಶ್ರೀ ಕೃಷ್ಣನ ಒಡ್ಡೋಲಗದಲ್ಲಿ ; ಗೋಪದ್ಮನೋಹಿ

ವ್ರತ ಕಥೆಗಳಲ್ಲಿ 'ಗಣಪತಿ', 'ಸ್ವರ್ಣಗೌರಿ', 'ಭೀಮೇಶ್ವರ ವ್ರತ', 'ಗರುಡ ಪಂಚಮಿವ್ರತಕಥೆ', 'ಮಂಗಳಗೌರಿವ್ರತ', 'ಗೋಪದ್ಮದ ಕಥೆ', 'ಜಿಸುಕು ಕುಟ್ಟುವ ಕಥೆ', ಮೌನಗೌರಿ ಕಥೆ', 'ಶ್ರೀಸತ್ಯನಾರಾಯಣ ವ್ರತಕಥೆ' ಹೀಗೆ ವಿವಿಧ ದೇವರುಗಳನ್ನು ಕುರಿತು ವ್ರತಗಳನ್ನು ಆಚರಿಸುತ್ತಾರೆ. ಇಂತಹ ವ್ರತಗಳು ಹಿಂದಿನಷ್ಟು ಕಟ್ಟುನಿಟ್ಟಾಗಿ ಹೆಚ್ಚು ಜನರಲ್ಲಿ ಆಚರಿಸುವುದು ಈಗಿನ ಕಾಲದಲ್ಲಿ ವಿರಳವಾದರೂ ಆಚರಣೆಯಂತೂ ನಿಂತಿಲ್ಲ.

ಅಡಿ ಟಿಪ್ಪಣಿಗಳು

೧. ವಾಗೀಶ್ವರಿ ಶಾಸ್ತ್ರಿ : 'ಹೃದಯ ಸಂಪುಟ', ೩ನೇ ಮುದ್ರಣ, ಪುಟ–೧

೨. ವಾಗೀಶ್ವರಿ ಶಾಸ್ತ್ರಿ : 'ಹೃದಯ ಸಂಪುಟ', ೩ನೇ ಮುದ್ರಣ, ಪುಟ–೧

೩. ವಾಗೀಶ್ವರಿ ಶಾಸ್ತ್ರಿ : 'ಹೃದಯ ಸಂಪುಟ', ೩ನೇ ಮುದ್ರಣ, ಪುಟ–೨೯

೪. ಡಾ. ನಂ. ತಪಸ್ವೀಕುಮಾರ್ : ಕನ್ನಡ ಜಾನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ ಪುಟ–೬೧. ೧೯೮೨

ಅಧ್ಯಾಯ – ೪

ಕಥನ ಗೀತೆಗಳು

'ಕಥನ' ಎಂದರೆ ಶಬ್ದಕೋಶದಲ್ಲಿ ಹೇಳುವಿಕೆ, ನಿರೂಪಣೆ ಎಂಬ ಅರ್ಥವಿದೆ. ಕಥನಗೀತೆ ಎಂದರೆ ಕಥೆಯನ್ನೊಳಗೊಂಡ ಪದ್ಯಕಾವ್ಯ. 'ಕಥನಗೀತೆ' ವಿಶಿಷ್ಟವಾದ ಜನಪದ ಕಾವ್ಯ ಪ್ರಕಾರ. ಪ್ರಾಚೀನ ಕಾಲದಿಂದಲೂ ಮಹಾಕಾವ್ಯವನ್ನು ಕಥನಗೀತೆ ರೂಪದಲ್ಲಿ ಹಾಡುವ, ಪಾರಾಯಣ ಮಾಡುವ ಸಂಪ್ರದಾಯವಿದೆ. ಕಥೆ ಗದ್ಯಪದ್ಯಗಳೆರಡು ರೂಪದಲ್ಲಿ ಇರಬಹುದು. ಗದ್ಯರೂಪದಲ್ಲಿದ್ದರೆ ಗದ್ಯ ಕತೆ, ಪದ್ಯರೂಪದಲ್ಲಿದ್ದರೆ ಕಥನಗೀತೆ ಎನ್ನುತ್ತಾರೆ. ಕಥನ ಗೀತೆಗಳಲ್ಲಿ ಒಂದು ಸನ್ನಿವೇಶದಿಂದ ಇನ್ನೊಂದು ಸನ್ನಿವೇಶಕ್ಕೆ ಸರಳವಾಗಿ ಸಾಗುತ್ತದೆ. ಮುಖ್ಯವಾಗಿ ತತ್ವಬೋಧನೆ ಕಥನಗೀತೆಗಳ ಉದ್ದೇಶಗಳಲ್ಲಿ ಒಂದಾಗಿದೆ. ಒಂದು ಘಟನೆಯನ್ನು ಕಲಾತ್ಮಕವಾಗಿ ಕಥನಗೀತೆಗಳು ಮಂಡಿಸುತ್ತವೆ. ಇದಕ್ಕಾಗಿ ಕಲ್ಪನೆ ಮತ್ತು ವರ್ಣನೆಗಳನ್ನು ಛಂದಸ್ಸನ್ನು ಅಗಾಧವಾಗಿ ಬಳಸಿಕೊಂಡಿದೆ. ವಸ್ತು-ವಿಷಯಕ್ಕೆ ಅನುಗುಣವಾಗಿ ಪಾತ್ರಗಳನ್ನು ವರ್ಣನೆಯನ್ನು ಸೃಷ್ಟಿಸಿಕೊಳ್ಳುತ್ತದೆ.

ದ್ವಿಪದಿ, ತ್ರಿಪದಿ, ಕಂದ, ವೃತ್ತ, ವಚನ, ಸಾಂಗತ್ಯ ಹೀಗೆ ಹತ್ತರಿಂದ ಹಿಡಿದು ಹದಿನೆಂಟು ಶತಮಾನದವರೆಗೆ ಬಂದು ಹೋದ ಹಲವು ಸಾಹಿತ್ಯ ಪ್ರಕಾರಗಳನ್ನು ಕಥನಗೀತೆಗಳು ಬಳಸಿಕೊಂಡಿದೆ. ಕಥನಗೀತೆಗಳು ವಸ್ತುವಾಗಿ ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳು, ಪುರಾಣ, ಇತಿಹಾಸ, ಚಾರಿತ್ರಿಕ ಅಂಶಗಳನ್ನು ಅನುಸರಿಸುತ್ತದೆ. ಸಾಮಾನ್ಯವಾಗಿ ಕಥನಗೀತೆಗಳ ಮಂಡನಾಕ್ರಮ ನಿರೂಪಣೆಯ ರೂಪದಲ್ಲಿರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಹರಿಕಥೆ ರೂಪದಲ್ಲಿ ಅಪರೂಪಕ್ಕೆ ಕಂಡುಬರುತ್ತದೆ. ಈ ಗೀತೆಗಳು ಮಹಾಕಾವ್ಯಗಳಂತೆ ಅಗಾಧ ಗದ್ಯಸ್ವರೂಪದಲ್ಲಿರದೆ ಪದ್ಯರೂಪದಲ್ಲಿದ್ದು ಕೊಂಡೆ ಹೇಳಬೇಕಾದದ್ದನ್ನು ಸಂಕ್ಷಿಪ್ತವಾಗಿ ಹೇಳುತ್ತದೆ.

ಕಥನ ಗೀತೆಗಳು ಇತರ ಸಂಪ್ರದಾಯದ ಹಾಡುಗಳಂತೆಯೇ ಮೌಖಿಕವಾಗಿ ಒಬ್ಬರಿಂದ ಇನ್ನೊಬ್ಬರ ಬಾಯಿಗೆ ಹರಿದುಬಂದಿರುವಂತದ್ದು. ಬೇರೆ ಹಾಡುಗಳನ್ನು ಕಲಿಯುವಷ್ಟು ಸುಲಭವಾಗಿ ಈ ಹಾಡುಗಳನ್ನು ಕಲಿಯಲು ಸಾಧ್ಯವಿಲ್ಲ. ಇದು ದೀರ್ಘ ಸ್ವರೂಪವಾಗಿದ್ದು ಸಾಕಷ್ಟು ಸಾಹಿತ್ಯಿಕ ಪ್ರಕಾರಗಳನ್ನು ಒಳಗೊಂಡು ಛಂದೋಬದ್ಧವಾಗಿ ರಚನೆಗೊಂಡಿರುವುದರಿಂದ ತಪ್ಪುಗಳು ಆಗದಂತೆ ಕಲಿಯಬೇಕು. ಇಲ್ಲವಾದಲ್ಲಿ ಪಾಠಾಂತರಗಳಾಗುವ ಸಾಧ್ಯತೆ ಹೆಚ್ಚು. ಏಕೆಂದರೆ ಪರಂಪರಾನುಗತವಾಗಿ ಹರಿದು ಬಂದಿರುವ ಈ ಗೀತೆಗಳು, ಕಿವಿತಪ್ಪು, ಬಾಯಿ ತಪ್ಪಿನಿಂದಾಗಿ ಹೇಳುವಲ್ಲಿ ಮತ್ತು ಕೇಳುವಲ್ಲಿ ಲೋಪಗಳಾಗಬಹುದು. ಇಲ್ಲವೇ ಆಗಮವಾಗಬಹುದು. ಕಥನಗೀತೆಗಳ ಸಮಯಕ್ಕೆ ಅನುಗುಣವಾಗಿ ಚಿಕ್ಕ ಚಿಕ್ಕ ಹಾಡುಗಳನ್ನು ಸೇರಿಸಿಕೊಂಡು ಗಾತ್ರವನ್ನು ಹೆಚ್ಚಿಸಿಕೊಂಡಿದೆ. ಇವು ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿರುವುದರಿಂದ ಆಯಾ ಕಾಲಕ್ಕೆ ತಕ್ಕ ಹಾಗೆ ಸಾಮಾಜಿಕ ಸಂಗತಿಗಳನ್ನು

ಸೇರಿಸಿಕೊಂಡು ಹಾಡುತ್ತಾರೆ. ಹಿಂದಿನ ಕಾಲದಲ್ಲಿ ಇಂದಿನ ರೀತಿಯಲ್ಲಿ ಸಿನಿಮಾ. ಹೋಟೆಲ್ ತಿರುಗಾಟಗಳಿರಲಿ ತಮ್ಮ ಮನೆಯನ್ನು ಬಿಟ್ಟು ಕುಟುಂಬದವರನ್ನು ಹೊರತು ಪಡಿಸಿ ಬೇರೆಯವರೊಂದಿಗೆ ಸಂಪರ್ಕ ಹೆಣ್ಣು ಮಕ್ಕಳಿಗೆ ಸಾಧ್ಯವಿರಲಿಲ್ಲ. ಹಬ್ಬ ಹರಿದಿನಗಳಲ್ಲಿ ಮದುವೆ ಮುಂತಾದ ಸಮಾರಂಭಗಳಲ್ಲಿ ತಮ್ಮದೇ ಜಾತಿಯ ಹೆಂಗಸರು. ಕುಟುಂಬದವರು ಸೇರುವ ಅವಕಾಶ ಮಾತ್ರ ಬ್ರಾಹ್ಮಣ ಸಂಪ್ರದಾಯದ ಹೆಣ್ಣು ಮಕ್ಕಳದ್ದಾಗಿತ್ತು. ಅವರದ್ದೊಂದು ದ್ವೀಪದ ಬದುಕು. ಇನ್ನು ವಿದ್ಯಾಭ್ಯಾಸದ ಮಾತು ಇಲ್ಲವೇ ಇಲ್ಲ. ಅವರ ಪಾಲಿಗೆ ಈ ಹಾಡುಗಳೇ ಕಲಿಕೆಯ ವಿದ್ಯೆ. ಅದರಲ್ಲೂ ಕಥನಗೀತೆಗಳಂತಹ ದೊಡ್ಡ ದೊಡ್ಡ ಹಾಡುಗಳ ಕಲಿಕೆ ಒಂದು ರೀತಿಯ ಪ್ರತಿಷ್ಠೆ ಎಂದೇ ಭಾವಿಸಿದ್ದರು. ಹಾಗೆಂದ ಮಾತ್ರಕ್ಕೆ ಎಲ್ಲ ಹೆಂಗಸರು ಇವುಗಳನ್ನು ಕಲಿಯಲು ಸಾಧ್ಯವಿರಲಿಲ್ಲ. ಈ ಹಾಡುಗಳ ಕಲಿಕೆಗೆ ಅಪಾರವಾದ ತಾಳ್ಮೆ, ಶ್ರದ್ಧೆ, ಆಸಕ್ತಿ ಮುಖ್ಯ. ದೊಡ್ಡ ಕಥನ ಗೀತೆಗಳನ್ನು ಹಾಡಬಲ್ಲ ಮಹಿಳೆಯರಿಗೆ ವಿಶಿಷ್ಟ ಗೌರವ ಸಿಗುತ್ತಿತ್ತು.

ಗದ್ಯಕಾವ್ಯ ನೆನಪಿನಲ್ಲಿಟ್ಟುಕೊಳ್ಳುವುದು ಕಷ್ಟವಾದಲ್ಲಿ ಅನೇಕ ಘಟನೆ, ಸನ್ನಿವೇಶಗಳು ಮರೆತುಹೋಗುವ ಸಾಧ್ಯತೆ ಹೆಚ್ಚಾದ್ದರಿಂದ ಪದ್ಯ ಕೇಳಲು ಇಂಪಾಗಿದ್ದು ನೆನಪಿನಲ್ಲಿಟ್ಟುಕೊಳ್ಳಲು ಸುಲಭವಾಗಿರುವುದರಿಂದ ಕಥನಗೀತೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಜಗತ್ತಿನ ಮಹಾಕಾವ್ಯಗಳಾದಂತಹ ರಾಮಾಯಣ, ಮಹಾಭಾರತ, ಇಲಿಯಡ್, ಒಡಿಸ್ಸಿಗಳು ಕಥನಗೀತೆ ರೂಪದಲ್ಲಿ ರಚನೆಗೊಂಡಿದೆ. ಇದಕ್ಕೆ ಉದಾಹರಣೆ ಎಂದರೆ ಗ್ರೀಕಿನ ಮಹಾಕಾವ್ಯ ರೂಪುಗೊಳ್ಳುವುದಕ್ಕೆ ಮುಂಚೆ ಅದನ್ನು ಜನಪದ ಆಚರಣೆಗಳ ಸಂದರ್ಭದಲ್ಲಿ ಹಾಡಿನ ರೂಪದಲ್ಲಿ ಅದನ್ನು ಹಾಡಲಾಗುತ್ತಿತ್ತು. ಕಥನ ಗೀತೆಗಳನ್ನು ರಾಗ, ತಾಳ, ಲಯಬದ್ಧವಾಗಿ ಹಾಡಲಾಗುತ್ತದೆ. ಜಾನಪದ ವಾದ್ಯಗಳನ್ನು ಇದಕ್ಕೆ ಬಳಸಿಕೊಳ್ಳುತ್ತಾರೆ. ಗ್ರಾಮೀಣ ಪರಿಸರದಲ್ಲಿ ಕಥನಗೀತೆಗಳನ್ನು ವೃತ್ತಿಗಾಯಕರು, ಲಾವಣಿಕಾರರು, ಗೊಂದಲಿಗರು ಹಾಡುತ್ತಾರೆ. ಅದು ಸಾರ್ವತ್ರಿಕವಾಗಿ ಊರಿನ ಎಲ್ಲರೂ ಪಾಲ್ಗೊಳ್ಳುವ ಹಬ್ಬ ಹರಿದಿನ, ಜಾತ್ರೆ, ಉತ್ಸವದ ಸಂದರ್ಭದಲ್ಲಿ ಹಾಡುತ್ತಾರೆ. ಆದರೆ ವೈದಿಕ ಸಂಪ್ರದಾಯದಲ್ಲಿ ಸ್ತ್ರೀಯರು. ಈ ಹಾಡುಗಳನ್ನು ಶಿವರಾತ್ರಿ, ಏಕಾದಶಿಯಂತಹ ದಿನಗಳಲ್ಲಿ ತಮ್ಮ ಕುಟುಂಬದ ಸದಸ್ಯರು ಸಂಬಂಧಿಕರು ಇದ್ದಾಗ ಹಾಡಿಕೊಳ್ಳುತ್ತಾರೆ. ಇದನ್ನು ಕೇಳುವುದರಿಂದ ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬುದು ಅವರ ನಂಬಿಕೆ. ಗ್ರಾಮೀಣ ಜನಪದ ಮತ್ತು ಶಿಷ್ಟ ಜನಪದಗಳ ನಡುವೆ ಭಾಷೆಯ ದೃಷ್ಟಿಯಿಂದ ವ್ಯತ್ಯಾಸವಿದೆ. ಗ್ರಾಮೀಣ ಪರಿಸರದ ಹಾಡುಗಳಲ್ಲಿ ಸ್ಥಳೀಯವಾಗಿ ಬಳಕೆಯಲ್ಲಿರುವ ಸ್ವಲ್ಪ ಒರಟು, ನಯ ನಾಜೂಕು ಇಲ್ಲದ ಭಾಷೆಯನ್ನು ಬಳಸಿಕೊಂಡಿದ್ದರೆ ಶಿಷ್ಟ ಸಂಪ್ರದಾಯಸ್ಥ ಜನಪದೀಯರು ಶಿಷ್ಟಭಾಷೆಯನ್ನು ಬಳಸಿಕೊಳ್ಳುತ್ತಾರೆ. ಅದಕ್ಕೆ 'ಹೃದಯಸಂಪುಟ' ವೆಂಬ ವಾಗೀಶ್ವರಿಯವರ ಬೃಹತ್ ಗ್ರಂಥವೇ ಸಾಕ್ಷಿ. ಕಥನಗೀತಗಳ ಕಲಿಕೆಯ ಕ್ರಮವನ್ನು ಇವರು

ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ. ತಾವು ಆರು ವರ್ಷದವರಾಗಿದ್ದಾಗಲೇ ಅಜ್ಜಿಯಿಂದ ಯಕ್ಷಗಾನ ಕ್ರಮದಲ್ಲಿ ರಚಿತವಾದ 'ಬಬ್ರುವಾಹನ ಕಾಳಗ' ಕಲಿತಿದ್ದರು. ಕಥನಗೀತೆಗಳ ಸ್ವರೂಪವನ್ನು, ಇತರ ಕಾವ್ಯಕ್ಕಿಂತ ಹೇಗೆ ಭಿನ್ನವಾಗಿದೆ ಎಂದು ತಿಳಿದ ಮೇಲೆ ಇದರ ಕಲಿಕೆಯ ಹಿಂದಿನ ಶ್ರಮ, ಆಸಕ್ತಿಯ ಮೇಲೆ ಬೆಳಕು ಚೆಲ್ಲುವುದು ಅವಶ್ಯಕ. ಅದಕ್ಕಾಗಿ ವಾಗೀಶ್ವರಿಯವರು ಕಥನ ಹಾಡುಗಳನ್ನು ಕಲಿತ ಬಗೆಯನ್ನು ಈ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಅಜ್ಜಿಯ ಸಾಮಿಪ್ಯದಲ್ಲೇ ಬೆಳೆದ ವಾಗೀಶ್ವರಿಯವರಿಗೆ ಅಜ್ಜಿಯ ಮನೆಯೇ ಗುರುಕುಲ. ಅವರೇ ಗುರು. ಪ್ರತಿನಿತ್ಯ ಸೂರ್ಯೋದಯಕ್ಕೆ ಮುಂಚೆ ಮೊಮ್ಮಗಳನ್ನು ನಿದ್ದೆಯಿಂದೆಬ್ಬಿಸಿ ಯಾರೊಂದಿಗೂ ಮಾತನಾಡದಂತೆ ಹೇಳಿ ಪೂರ್ವಾಭಿಮುಖವಾಗಿ ಕುಳಿತು ಕೊಳ್ಳುವಂತೆ ಕೂರಿಸಿ ತನ್ನ ಬಾಯಿಯನ್ನೇ ಗಮನಿಸುವಂತೆ ಆ ಕಡೆ ಈ ಕಡೆ ನೋಡದಂತೆ ಹೇಳಿ ಮೊದಲಿಗೆ ಏಕಾಗ್ರತೆಯನ್ನು ಸಾಧಿಸುವ ಹಾಗೆ ಮಾಡಿ ಹಾಡನ್ನು ಕಲಿಸುತ್ತಿದ್ದರು. ನಾಲ್ಕೈದು ದಿನಗಳಲ್ಲಿ ಯಾವುದೇ ಅಡೆತಡೆಯಿಲ್ಲದೆ ಸುಲಭವಾಗಿ ಒಂದು ನೆಲೆಯನ್ನು ಕಲಿತು ಹಾಡುತ್ತಿದ್ದರಂತೆ; ಬೆಳಗ್ಗೆ-ರಾತ್ರಿ ದಿನಕ್ಕೆ ಎರಡೆರಡು ಸಲ ಹಾಡು ಹೇಳಿಕೊಡುತ್ತಿದ್ದ ಕಾರಣ ಇಡೀ ಹಾಡನ್ನು ಆರೇಳು-ತಿಂಗಳಲ್ಲಿ ಕಲಿಯುತ್ತಿದ್ದುದಾಗಿ ವಾಗೀಶ್ವರಿಯವರು ಹೇಳುತ್ತಾರೆ. ಕಲಿತ ಹಾಡನ್ನು ಮರೆಯಬಾರದೆಂಬ ಕಾರಣಕ್ಕೆ ಒಂದು ತಂತ್ರವನ್ನು ಅನುಸರಿಸುತ್ತಿದ್ದರು. ಒಂದು ನೆಲೆಯನ್ನು ಹೇಳಿಕೊಟ್ಟಮೇಲೆ ಆ ಜಾಗದಿಂದ ಎಬ್ಬಿಸಿ ಬೇರೆಡೆ ಕುಳ್ಳಿರಿಸಿಯೇ ಬೇರೊಂದು ನೆಲೆಯನ್ನು ಹೇಳಿಕೊಡುತ್ತಿದ್ದರು ಎನ್ನುತ್ತಾರೆ. ಇದೇ ರೀತಿ ಹಾಡನ್ನು ಬೇಗ ಕಲಿಯಲು ಬೇರೊಂದು ಕ್ರಮವನ್ನು ಅನುಸರಿಸುತ್ತಿದ್ದರು. ಅದೇ 'ಗುಳಿ'

'ಗುಳಿ' ಎಂದರೆ ಒಂದೊಂದು ನೆಲೆ. ಇಲ್ಲಿ ಒಂದು ನೆಲೆಯಾದ ನಂತರ ಮತ್ತೆ ಹಾಡಿನ ಮಧ್ಯಭಾಗದಿಂದ ಮುಂದುವರೆಸುವಿಕೆ. ಈ ಎಲ್ಲಾ ಅಂಶಗಳು ಕಥನಗೀತೆಗಳನ್ನು ಕಲಿಯುವಲ್ಲಿ ಏಕಾಗ್ರತೆ, ಆಸಕ್ತಿ, ಶ್ರಮ, ನೆನಪಿನಶಕ್ತಿಯ ಮಹತ್ವ ಎಷ್ಟು ಎಂದು ತಿಳಿದುಬರುತ್ತದೆ. ಆದರೆ ವಿವಿಧ ಜನಾಂಗ, ವರ್ಗಗಳಲ್ಲಿ ಕಥನಗೀತೆಗಳನ್ನು ಕಲಿಸುವಲ್ಲಿ ಅನುಸರಿಸುವ ಮಾರ್ಗ ಭಿನ್ನವಾಗಿರಬಹುದು. ಜಗತ್ತಿನಾದ್ಯಂತ ಕಥನಗೀತೆಗಳು ಕಂಡುಬರುತ್ತವೆ. "ಗಾತ್ರ, ವಸ್ತು, ಗಾಯಕರು, ವಾದ್ಯಗಳು, ಕತೆಯಲ್ಲಿನ ಪ್ರಧಾನಾಂಶಗಳನ್ನು ಅನುಲಕ್ಷಿಸಿ ಜನಪದ ಕಥನಗೀತೆಗಳನ್ನು ವರ್ಗೀಕರಿಸಬಹುದು"೧

೧. ಪೌರಾಣಿಕ ಕಥನ ಗೀತೆ

೨. ಐತಿಹಾಸಿಕ ಅಥವಾ ಚಾರಿತ್ರಿಕ ಕಥನಗೀತೆ

೩. ಸಾಮಾಜಿಕ ಕಥನಗೀತೆಗಳು

೧. ಪೌರಾಣಿಕ ಕಥನ ಗೀತೆಗಳು :-

ಪೌರಾಣಿಕ ಕಥನಗೀತೆಗಳಲ್ಲಿ ಮುಖ್ಯವಾಗಿ, ಪೌರಾಣಿಕ ಅಂಶವೇ ಪ್ರಧಾನವಾಗಿರುತ್ತದೆ. ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳಲ್ಲಿ ಬರುವ ವ್ಯಕ್ತಿಗಳು, ಸನ್ನಿವೇಶಗಳು, ಘಟನೆಗಳು ಈ ಗೀತೆಗಳ ವಸ್ತುವಾಗಿರುತ್ತದೆ. ಜಾತಿ, ಧರ್ಮ ಜನಾಂಗಗಳ ಎಡೆ ಇದಕ್ಕಿಲ್ಲ. ಶಿಷ್ಟ, ಜನಪದ, ಗ್ರಾಮೀಣ ಜನಪದವೆಂಬ ಭೇದವಿಲ್ಲ. ಎಲ್ಲ ಬಗೆಯ ಜಾನಪದಿಯರು, ಶಿಷ್ಟ ಕವಿಗಳು ಈ ವಸ್ತುವನ್ನೇ ಆಧರಿಸಿ ಸಾಹಿತ್ಯ ರಚಿಸಿರುತ್ತಾರೆ. ಹಿಂದಿನ ಕಾಲದಲ್ಲಿ ಪೌರಾಣಿಕ ವಸ್ತುವಾಧಾರಿತ ಸಾಹಿತ್ಯಗಳ ರಚನೆಯೇ ಹೆಚ್ಚು. ಕಾಲಾನಂತರದಲ್ಲಿ ಇದು ಕಡಿಮೆಯಾಗಿದೆ. ರಾಮ, ಸೀತೆ, ಗಂಗೆ, ಗೌರಿ, ಶಿವ, ಬ್ರಹ್ಮ, ವಿಷ್ಣು, ಗಣೇಶ, ಕೃಷ್ಣ, ಅರ್ಜುನ, ಮುಂತಾದವರು ಪೌರಾಣಿಕ ಪಾತ್ರಗಳಿಗೆ ಉದಾಹರಣೆ ವ್ಯಾಸ, ವಾಲ್ಮೀಕಿ, ಪಂಪ, ಕುಮಾರವ್ಯಾಸರಂತಹ ಪ್ರಾಚೀನ ಕವಿಗಳಿಂದ ಕುವೆಂಪುವರೆಗಿನ ಕವಿಗಳು ಪೌರಾಣಿಕ ಕಾವ್ಯಗಳನ್ನು ರಚಿಸಿದ್ದಾರೆ.

'ಹೃದಯಸಂಪುಟ'ದಲ್ಲಿ ಬರುವ ಸಂಪ್ರದಾಯದ ಹಾಡುಗಳ ವಸ್ತುವನ್ನಾಗಿ ಪೌರಾಣಿಕ ಅಂಶವನ್ನೇ ಆಶ್ರಯಿಸಿದೆ. ಅಕ್ಕರಾಸ್ತೆಯ ಶಾಸ್ತ್ರಗಳ ಹಾಡುಗಳಿಂದ ಹಿಡಿದು ಕಥನಗೀತೆಗಳವರೆಗಿನ ಹಾಡುಗಳ ವಸ್ತು ಪೌರಾಣಿಕ ವಿಷಯ ವ್ಯಕ್ತಿಯನ್ನು ಒಳಗೊಂಡಿದೆ. ಇದು ಮಹಿಳೆಯರು ಪೌರಾಣಿಕ ಕಾವ್ಯಗಳನ್ನು ಆಧರಿಸಿ ಸಂಪ್ರದಾಯ ಹಾಡುಗಳನ್ನು ರಚಿಸುವಷ್ಟು ಜ್ಞಾನವನ್ನು ಹೊಂದಿರುವುದನ್ನು ಸೂಚಿಸುತ್ತದೆ. ಪುರಾಣೇತಿಹಾಸಗಳು ಗಂಡಸರಿಗೆ ಮೀಸಲಾದದ್ದು ಎಂದು ನಂಬಿರುವುದು ಸುಳ್ಳು ಎಂದು ನಿರೂಪಿಸುತ್ತದೆ. ಇವು ಮಹಿಳೆಯರಿಗೆ ಹೊರಗಿನ ಪ್ರಪಂಚದೊಂದಿಗೆ ಬೆರೆಯಲು ಅವಕಾಶವಿಲ್ಲದ ಸಂದರ್ಭದಲ್ಲಿ ಪ್ರಾಪಂಚಿಕ ಮೌಲ್ಯವನ್ನು ಅರಿಯುವಲ್ಲಿ ಸಹಾಯಕವಾಗಿದೆ. ವಾಗೀಶ್ವರಿಯವರು ಈ ಹಾಡುಗಳನ್ನು ರಚಿಸುವಲ್ಲಿ ವಿದ್ವಾಂಸರು, ಪಂಡಿತರು ಪ್ರಮುಖ ಪಾತ್ರವನ್ನು ವಹಿಸಿದ್ದಾರೆಂದು ಹೇಳುತ್ತಾರೆ. ಎಷ್ಟೋ ವೇಳೆ ಈ ಹಾಡುಗಳನ್ನು ವಿದ್ವಾಂಸರೇ ಮಹಿಳೆಯರ ಮನೋರಂಜನೆಗಾಗಿ ರಚಿಸಿಕೊಟ್ಟಿರುವುದಾಗಿ ತಿಳಿಸುತ್ತಾರೆ.

೨. ಐತಿಹಾಸಿಕ ಅಥವಾ ಚಾರಿತ್ರಿಕ ಕಥನಗೀತೆಗಳು :-

ಪುರಾಣದ ಅಂಶಗಳನ್ನು ಆಧರಿಸಿ ಕತೆ ಕವನಗಳನ್ನು ರಚಿಸುವುದು ಒಂದು ವಿಧವಾದರೆ, ಕಾಲ್ಪನಿಕತೆಯ ಪುರಾಣಗಳನ್ನು ಹೊರತುಪಡಿಸಿ ನಿಜವಾಗಿಯೂ ನಡೆದು ಕಾಲಗರ್ಭದಲ್ಲಿ ಹುದುಗಿಹೋಗಿರುವಂತಹ ಘಟನೆ, ವ್ಯಕ್ತಿಗಳನ್ನು ವಸ್ತುವನ್ನಾಗಿಸಿಕೊಂಡು ಕಾವ್ಯವನ್ನು ರಚಿಸುವುದು ಐತಿಹಾಸಿಕ ಅಥವಾ ಚಾರಿತ್ರಿಕ ಕಾವ್ಯದ ಲಕ್ಷಣ. ಅಂತೆಯೇ ಚಾರಿತ್ರಿಕ ವ್ಯಕ್ತಿಗಳನ್ನು, ಘಟನೆಗಳನ್ನು ಕುರಿತು ದೀರ್ಘ ಸ್ವರೂಪದಲ್ಲಿ ರಚಿಸಿದ ಗೀತೆಗಳನ್ನು ಐತಿಹಾಸಿಕ ಕಥನಗೀತೆಗಳು

ಎಂದು ಕರೆಯಲಾಗುತ್ತದೆ. ಉದಾ:- ಬಸವಣ್ಣ, ಟಿಪ್ಪುಸುಲ್ತಾನ್, ಸಂಗೊಳ್ಳಿರಾಯಣ್ಣ ಮುಂತಾದ ಚಾರಿತ್ರಿಕ ವ್ಯಕ್ತಿಗಳನ್ನು ಕುರಿತು ರಚಿಸಿದ ಗೀತೆಗಳು, ಕಥೆಗಳು ಚಾರಿತ್ರಿಕ ಗೀತೆಗಳು, ಕಥೆಗಳು ಎನಿಸಿಕೊಳ್ಳುತ್ತದೆ.

೩. ಸಾಮಾಜಿಕ ಕಥನಗೀತೆಗಳು :-

ಸಾಹಿತ್ಯವು ಸಮಾಜದ ಕನ್ನಡಿಯಿದ್ದಂತೆ ಎಂಬ ಮಾತು ಸರ್ವವೇದ್ಯ. ಏಕೆಂದರೆ ಸಾಹಿತ್ಯದ ಉದ್ದೇಶ ಕೇವಲ ಮನೋರಂಜನೆ ಒಂದೇ ಅಲ್ಲದೆ ಸಮಾಜದಲ್ಲಿನ ಸಮಸ್ಯೆಗಳನ್ನು ಬರಹದ ಮೂಲಕ ಸಮಸ್ಯೀಕರಿಸುವ ಹೊಣೆಯನ್ನು ಸಹ ಹೊಂದಿದೆ. ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೂ ಸಮಾಜದ ಸ್ಥಿತ್ಯಂತರ ಬದಲಾವಣೆಗಳನ್ನು ಸಾಹಿತ್ಯದ ಸಹಾಯದಿಂದ ಗುರುತಿಸಬಹುದು. ಇದರಲ್ಲಿ ಜನಪದ ಸಾಹಿತ್ಯ ಬಹುಮುಖ್ಯ ಪಾತ್ರವಹಿಸುತ್ತದೆ. ಶಿಷ್ಟಕಾವ್ಯಗಳಲ್ಲಿ ಸಾಧ್ಯವಾಗದ ಎಷ್ಟೋ ಅಂಶಗಳನ್ನು ತನ್ಮೂಲಕ ಮಂಡಿಸುತ್ತದೆ. ಸಮಾಜದಲ್ಲಿರುವ ಸಮಸ್ಯೆಯೊಂದನ್ನು ಸರಳವಾಗಿ ಪ್ರಭಾವಶಾಲಿಯಾಗಿ ಹೇಳುವ ಕೆಲಸವನ್ನು ಜನಪದ ಸಾಹಿತ್ಯ ಮಾಡುತ್ತದೆ. ಪ್ರಾಚೀನ ಕಾಲದ ಶಿಷ್ಟಸಾಹಿತ್ಯಕ್ಕಿಂತ ಜನಪದ ಈ ಹಾದಿಯಲ್ಲಿ ಮುಂದಿರುವುದು ತಿಳಿದುಬರುತ್ತದೆ.

ಉದಾ:- ಉತ್ತರೆದೇವಿ ಕೆರೆಗೆ ಹಾರ, ಈರೋಜಿ

ವಾಗೀಶ್ವರಿ ಶಾಸ್ತ್ರಿಯವರು, ಗ್ರಂಥದಲ್ಲಿ ಒಟ್ಟು ಏಳು ಹಾಡುಗಳನ್ನು ಕಥನಗೀತೆ ಭಾಗದಲ್ಲಿ ಪ್ರಕಟಿಸಿದ್ದಾರೆ. ಅವುಗಳೆಂದರೆ 'ದ್ರೌಪದಿ ವಸ್ತ್ರಾಪಹರಣ', 'ಬಭ್ರುವಾಹನ ಕಾಳಗ', 'ರುದ್ರಾಕ್ಷಿಮಹಿಮೆ', 'ಬಂಡೀಹಾಡು', 'ಕಮಲೆಯ ಹಾಡು', 'ಚೋರಕಥೆ', ಇವಿಷ್ಟು ಹಾಡುಗಳಲ್ಲಿ ಸಾಮಾಜಿಕ ಸಮಸ್ಯೆಗಳ ಚಿತ್ರಣ ಹೆಚ್ಚಾಗಿ ಇಲ್ಲ. ಅದರಲ್ಲೂ ಸ್ತ್ರೀ ಅನುಭವಿಸುವ ಕಷ್ಟಗಳು ಶೋಷಣೆ ಅದರ ವಿರುದ್ಧ ಪ್ರತಿಭಟಿಸುವಂತಹ ಹಾಡುಗಳು ವಿರಳವಾಗಿವೆ. ಆದರೆ ಗ್ರಾಮೀಣ ಜಾನಪದ ಪರಿಸರದಲ್ಲಿ ಇಂತಹ ಅಂಶಗಳಿಗೆ ಹೆಚ್ಚು ಒತ್ತು ನೀಡಲಾಗುತ್ತದೆ. ಉದಾ:- ಗ್ರಾಮೀಣ ಜಾನಪದ ರಾಮಾಯಣದಲ್ಲಿ ಸ್ತ್ರೀ ಶೋಷಣೆಯನ್ನು ಪ್ರತಿಭಟಿಸುವ ಪಾತ್ರವನ್ನಾಗಿ ಸೀತೆಯನ್ನು, ಮಹಾಭಾರತದಲ್ಲಿ ದ್ರೌಪದಿ, ಕೊಂತ್ಯಮ್ಮನ ಪಾತ್ರವನ್ನು ರಚಿಸಲಾಗಿದೆ. ಶಿಷ್ಟಸಮಾಜ ಸಂಪ್ರದಾಯದಲ್ಲಿ ಸ್ತ್ರೀಗೆ ಸ್ವಾತಂತ್ರ್ಯ ಕಡಿಮೆ. ಅದು ಅವರ ಸಂಪ್ರದಾಯದ ಹಾಡುಗಳ ರಚನೆಯಲ್ಲೂ ಕಂಡುಬರುತ್ತದೆ. 'ಹೃದಯಸಂಪುಟ'ದಲ್ಲಿ ಬರುವ ಸಂಪ್ರದಾಯದ ಹಾಡುಗಳಲ್ಲಿ ದ್ರೌಪದಿ, ಪ್ರಮೀಳೆ ಮತ್ತು ಕಮಲೆಯನ್ನು ಪ್ರತಿಭಟನಾತ್ಮಕ ಪಾತ್ರಗಳನ್ನಾಗಿ ಗುರುತಿಸಬಹುದು. ಇವುಗಳನ್ನು ಹೊರತು ಪಡಿಸಿ ಎಲ್ಲಿಯೂ ಪ್ರತಿಭಟಿಸುವಂತಹ ಸ್ತ್ರೀಪಾತ್ರಗಳ ಹಾಗೂ ಸ್ತ್ರೀ ಸಾಮಾಜಿಕವಾಗಿ ಅನುಭವಿಸುವ ಸಮಸ್ಯೆಗಳ ಚಿತ್ರಣವಿಲ್ಲ. ದ್ರೌಪದಿಯಲ್ಲಿ ಗಮನಿಸಬಹುದಾದ ಪ್ರತಿಭಟನಾತ್ಮಕ ಅಂಶವೆಂದರೆ ಕೌರವರೊಡನೆ ಜೂಜನಾಡಿ ಸೋತ

ಪಾಂಡವರು ತಮ್ಮ ಅರಮನೆ, ರಾಜ್ಯ, ವಜ್ರ, ವೈಢೂರ್ಯ, ಸಕಲ ಸಂಪತ್ತಿನೊಂದಿಗೆ ದ್ರೌಪದಿಯನ್ನು ಕಳೆದುಕೊಳ್ಳುತ್ತಾರೆ. ಜೂಜಿನ ಮೂಲಕ ದ್ರೌಪದಿಯನ್ನು ಗೆದ್ದ ಕೌರವರು ಅವಳನ್ನು ಸಭೆಗೆ ಕರೆತರುವಂತೆ ಹೇಳುತ್ತಾರೆ. ಈ ವಿಷಯವನ್ನೆಲ್ಲ ದೂತರ ಮೂಲಕ ತಿಳಿದ ದ್ರೌಪದಿ ಸಭೆಗೆ ಬರುತ್ತಾಳೆ. ಆಗ ದುರ್ಯೋಧನ ಮತ್ತು ದ್ರೌಪದಿಯ ನಡುವೆ ಸಂಭಾಷಣೆ ನಡೆಯುತ್ತದೆ. ಅದರಲ್ಲಿ ದ್ರೌಪದಿಯ ಪಾತ್ರದಲ್ಲಿ ಪ್ರತಿಭಟನಾತ್ಮಕತೆ ಕಂಡುಬರುತ್ತದೆ. ದ್ರೌಪದಿ ವಸ್ತ್ರಾಪಹರಣ ಹಾಡಿನಲ್ಲಿನ ಭಾಷೆ ಇತರ ಹಾಡುಗಳ ಭಾಷೆಗಿಂತ ಭಿನ್ನವಾಗಿದೆ. ಗ್ರಾಮೀಣ ಜಾನಪದ ರಾಮಾಯಣಕ್ಕಿಂತ ಪ್ರೇರಣೆಗೊಂಡು ಈ ಹಾಡು ರಚನೆಗೊಂಡಿದೆಯೇನೋ ಎನಿಸುತ್ತದೆ. ಇಲ್ಲಿ ದುರ್ಯೋಧನನು ದ್ರೌಪದಿಯನ್ನು ಮಲ್ಲಿಗೆಯನ್ನು ಮುಡಿಯುವ ಬಗೆ ಹೇಗೆ? ಮುದ್ದು ಮುಖವನ್ನು ಉಳ್ಳ ಸುಂದರವಾದ ದ್ರೌಪದಿ ಬಾ ಎಂದಾಗ ದ್ರೌಪದಿಯೂ ಜಿಲ್ಲ ಎತ್ತಲಾರದವ್ನೇ. (ಯುದ್ಧದ ಮೂಲಕ ಗೆಲ್ಲಲಾಗದವನೇ) ಭಂಡಾರ ಕಾದಿದ್ದವನೇ (ಸಂಪತ್ತನ್ನೆಲ್ಲಾ ಕಿತ್ತುಕೊಳ್ಳಲು ಕಾದಿದ್ದವನೇ) ನಿನ್ನನ್ನು ಎಲ್ಲರೂ ಕುಟ್ಟಿ ಹಾಕಿ ಬಿಡುವರು ಬೇಡ ಎನ್ನುತ್ತಾಳೆ. ಪಾಂಡವರನ್ನು ಈ ಹಾಡಿನಲ್ಲಿ ತಿರುಕರು ಎಂದು ಸಂಭೋದಿಸಲಾಗಿದೆ. ದ್ರೌಪದಿ ಐದು ಜನ ಗಂಡರನ್ನು ಹೊಂದಿದ್ದವಳಾಗಿದ್ದರೂ ಸಹ ಅವಳಿಗೆ ತನ್ನ ತೊಡೆಯನ್ನು ಅಲಂಕರಿಸಲು ಹೇಳುತ್ತಾನೆ. ಅದಕ್ಕೆ ದ್ರೌಪದಿ ಭೀಮಸೇನ ನಿನ್ನ ತೊಡೆಯನ್ನಲಂಕರಿಸಲು ಇರುವನು ಎಂದು ಪ್ರತಿಭಟನೆಯ ಧಾಟಿಯ ಮಾತನಾಡುತ್ತಾಳೆ. ದ್ರೌಪದಿಗೆ ಅವಮಾನ ಮಾಡುವೆ ಎಂದು ಸೀರೆಯನ್ನು ಸೆಳೆವಾಗ ಅವನ ನಾಲಿಗೆಯನ್ನು ಸೀಳಿ ಕೇಶದ ಮೂಲಕ ಕೊಲ್ಲವನೆಂದು ಹೇಳುತ್ತಾಳೆ. ದ್ರೌಪದಿ ವಸ್ತ್ರಾಪಹರಣದ ಹಾಡಿನಲ್ಲಿ ಬರುವ ಎತ್ತಲಾರದವ್ನೆ, ಕಾದಿದ್ದವ್ನೆ, ಹೈಕಿಪೋರು, ಬ್ಯಾಡ, ಕೇಸ ಎಂಬ ಪದಗಳು ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಶ್ರಮಿಕ ವರ್ಗಗಳಲ್ಲಿ ಬಳಸುವಂತಹದ್ದಾಗಿದೆ. ಹೃದಯ ಸಂಪುಟದಲ್ಲಿನ ಸಂಪ್ರದಾಯದ ಹಾಡುಗಳಲ್ಲಿ ಈ ರೀತಿಯ ಗ್ರಾಮ್ಯಪದಗಳ ಬಳಕೆ ಕಡಿಮೆ. ಕೆಲವೊಂದು ಪೌರಾಣಿಕ ಹಾಡುಗಳಲ್ಲಿ ಮಾತ್ರ ಇಂತಹ ಪದಗಳ ಬಳಕೆಯನ್ನು ಕಾಣಬಹುದು. ಹಾಗಾಗಿ ಇದು ಇತರ ಜಾನಪದೀಯರಿಂದ ಕುರಿತು ಮಾರ್ಪಡಿಸಿಕೊಂಡು ಹಾಡುಗಳಲ್ಲಿ ಸೇರಿಸಿಕೊಂಡಿರಬಹುದು.

ಅ. ಬಬ್ರುವಾಹನ ಕಾಳಗ :-

ಬಬ್ರುವಾಹನ ಕಾಳಗ ಕಥನ ಗೀತೆಗಳಲ್ಲಿ ಬಹುವಿಸ್ತಾರವಾದ ಗೀತ. ಲಕ್ಷ್ಮೀಶ್ವರ ಕವಿಯು ರಚಿಸಿರುವ ಅಶ್ವಮೇಧಪರ್ವವನ್ನು ಅನಸರಿಸಿ ಯಕ್ಷಗಾನ ರೂಪದಲ್ಲಿ ಈ ಕಥನ ಗೀತೆಯನ್ನು ರಚಿಸಲಾಗಿದೆ. ಶಿಷ್ಟ ಕವಿಗಳು ಕಾವ್ಯ ರಚನೆಯಲ್ಲಿ ಮೊದಲು ಗಣಪತಿಯನ್ನು, ತಮ್ಮ ಇಷ್ಟದೇವರುಗಳು, ಗುರುಗಳನ್ನು ಸ್ಮರಿಸುತ್ತಾರೆ. ಅಂತೆಯೇ ಶಿಷ್ಟ ಜಾನಪದೀಗರು ದೀರ್ಘಕಾವ್ಯಗಳಲ್ಲಿ

ಮೊದಲು ಗಣಪತಿ, ಶಾರದೆ ಮತ್ತು ಗುರುವನ್ನು ಸ್ಮರಿಸಿದ್ದಾರೆ. ಇದು ಶಿಷ್ಟ ಕಾವ್ಯ ಹಾಗೂ ಶಿಷ್ಟ ಜಾನಪದ ಕಾವ್ಯಕ್ಕಿರುವ ಸಾಮ್ಯಗುಣವಾಗಿದೆ. ಈ ದೀರ್ಘಕಥನ ಗೀತೆಗಳ ಮಧ್ಯಪಾತ್ರಗಳ ಸಂಭಾಷಣೆ. ವಚನ ಪ್ರಕಾರದ ಬಳಕೆ ಹೆಚ್ಚಾಗಿದೆ. ಇದು ಒಟ್ಟು ಏಳು ಭಾಗಗಳಾಗಿ ವಿಂಗಡಿಸಿದ್ದಾರೆ. ದ್ರೌಪದಿ ವಸ್ತ್ರಾಪಹರಣ ಗೀತೆಯ ನಂತರ ಪಾಂಡವರ ವನವಾಸದ ಭಾಗದಿಂದ ಪ್ರಾರಂಭಿಸುತ್ತಾರೆ. ಈ ಭಾಗದಲ್ಲಿ ಪಾಂಡವರು ಕೌರವರೊಂದಿಗೆ ಪಗಡೆ ಹಾಡಿ ಸೋತದ್ದು, ೧೩ ವರ್ಷ ಅರಣ್ಯದಲ್ಲಿ ಕಳೆದದ್ದು, ಪಾಂಡವರಿಗೆ ರಾಜ್ಯವನ್ನು ವಾಪಾಸುಕೊಡಿಸುವಲ್ಲಿ ಸಂಧಿ ಮುರಿದದ್ದು. ಯುದ್ಧದಲ್ಲಿ ತನ್ನ ಗುರು-ಹಿರಿಯರನ್ನು ದಾಯಾದಿಗಳನ್ನು ಕಳೆದುಕೊಂಡಿದ್ದಕ್ಕಾಗಿ ಪಾಂಡು-ಧರ್ಮರಾಯ ರಾಜ್ಯದ ಆಸೆಯನ್ನೇ ಬಿಟ್ಟುಬಿಡುವ ಹಂತದಲ್ಲಿರುತ್ತಾನೆ. ಆಗ ಬಂದ ವೇದವ್ಯಾಸರು ನಿನ್ನನ್ನು ಕಾಡುತ್ತಿರುವ ಈ ಪಾಪದ ಚಿಂತೆಯಿಂದ ದೂರಾಗಲು ಅಶ್ವಮೇಧ ಯಾಗವನ್ನು ಮಾಡಲು ಹೇಳುತ್ತಾನೆ. ಅದಕ್ಕಾಗಿ ಪಂಚವರ್ಣದ ಕುದುರೆಯನ್ನು, ಯೌವನೇಶ್ವರ ಬಳಿಯಿಂದ ತರಿಸುವಂತೆ ಹೇಳುತ್ತಾರೆ. ಕೃಷ್ಣನೂ ಕೂಡ ಅದೇ ಮಾತನ್ನು ಪುನರಾವರ್ತಿಸುತ್ತಾನೆ. ಈ ಭಾಗವನ್ನು ವಿವರಿಸುವ ಉದ್ದೇಶವೇನೆಂದರೆ ಇಷ್ಟೆಲ್ಲ ಪ್ರಸಂಗಗಳನ್ನು ಅಗಾಧವಾದ ವಿವರಣೆಗಳ ಮೂಲಕ ಎಲ್ಲ ಶಿಷ್ಟ ಕವಿಗಳು ರಚಿಸಿರುವಂತಹ ಭಾರತ ಮಹಾಕಾವ್ಯವನ್ನು ಕೇವಲ ಎರಡು ನಾಲ್ಕು ಸಾಲುಗಳ ಮೂಲಕ ಇಡೀ ಕಾವ್ಯವನ್ನು ಸರಳವಾಗಿ ವಿವರಿಸುವ ಕೆಲಸ ಮತ್ತು ಪೌರಾಣಿಕ ಕಥನಗೀತೆಗಳ ಮೂಲಕ ನಡೆದಿದೆ.

ಈ ತಂತ್ರ ನೂರಾರು ಪುಟಗಟ್ಟಲೇ ಓದಿ ತಿಳಿಯಬೇಕಿದಂತಹ ಕಾವ್ಯವನ್ನು ಕೇವಲ ಮೂವತ್ತು-ನಲವತ್ತು ಪುಟಗಳಲ್ಲಿ ಹಿಡಿದಿಡುವ ಮೂಲಕ ಮಹಿಳೆಯರು ಸಹ ಪೌರಾಣಿಕ ಕಾವ್ಯಗಳನ್ನು ತಿಳಿಯುವಂತೆ, ಕಲಿಯುವಂತೆ ಮಾಡಿದೆ. ಈ ಪೌರಾಣಿಕ ಗೀತೆಗಳು ಸ್ತ್ರೀಯನ್ನು ವಿದ್ಯಾವಂತಳಾಗಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಪ್ರಾಚೀನ ಕಾಲದಲ್ಲಿ ಗುರುಕುಲದಲ್ಲಿ ಪಾಠವನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡುವಲ್ಲಿ ರಾಮಾಯಣ. ಮಹಾಭಾರತವು ಮುಖ್ಯಪಾಠವಾಗಿರುತ್ತಿತ್ತು. ಆದರೆ ಮಹಿಳೆಯರಿಗೆ ವಿದ್ಯಭ್ಯಾಸದ ಅವಕಾಶ ಇಲ್ಲದಿರುವುದರಿಂದ ಇವುಗಳನ್ನು ಕಲಿಯಲು ಬೇರೆ ಯಾವುದೇ ಮಾರ್ಗವಿರಲಿಲ್ಲ. ಅದರಲ್ಲೂ ಸಂಸಾರದ ಜವಾಬ್ದಾರಿಯನ್ನು ಹೊರಬೇಕಾದ ಮಹಿಳೆಗೆ ನೂರಾರು ಪುಟಗಳನ್ನು ಓದುವುದಕ್ಕೆ ಸಮಯಾವಕಾಶವು ಇರುತ್ತಿರಲಿಲ್ಲ. ಇಷ್ಟು ಸರಳವಾಗಿ ರಚಿತವಾದ ಹಾಡುಗಳು ಮಹಿಳೆ ತನ್ನ ಕೆಲಸದ ನಂತರ ಮಿಕ್ಕ ಅವಕಾಶದಲ್ಲೇ ಕಲಿಯಬಹುದಿತ್ತು. ಜೊತೆಗೆ ಬೇಸರವನ್ನು ನೀಗಿ ಮನರಂಜನೆಯನ್ನು ನೀಡುತ್ತಿತ್ತು. ಈ ಗೀತೆಗಳ ರಚನಾ ತಂತ್ರವನ್ನು ಗಮನಿಸಿದರೆ ಚೆನ್ನಾಗಿ ಓದು-ಬರಹ ಬಲ್ಲ ಕವಿಗಳು, ಪಂಡಿತರೇ ಹಾಡುಗಳನ್ನು ರಚಿಸಿಕೊಟ್ಟಿದ್ದಾರೆಂದು ತಿಳಿದುಬರುತ್ತದೆ. ಹಾಡುಗಳಲ್ಲಿ ಬರುವ ವರ್ಣನೆಗಳು ಶಿಷ್ಟ ಕವಿಯೊಬ್ಬನಿಂದಲೇ ರಚಿತವಾಗಿದೆ ಎಂಬುದಕ್ಕೆ

ಸಾಕ್ಷಿಯಾಗಿದೆ. ಆದರೆ ಕೆಲವೊಂದು ಸನ್ನಿವೇಶಗಳಲ್ಲಿ ಬಿಟ್ಟರೆ ಇಲ್ಲಿ ವರ್ಣನೆಗಳ ಬಳಕೆ ಕಡಿಮೆಯಾಗಿದೆ. ನೇರವಾಗಿ ಯಾವುದೇ ಹೆಚ್ಚುಗಾರಿಕೆಯಿಲ್ಲದೆ ಘಟನೆಯನ್ನು ವಿವರಿಸುತ್ತದೆ. ಸಾಹಿತ್ಯ ಪ್ರಕಾರಗಳಾದ ರೂಪಕ, ಪ್ರತಿಮೆ, ಅಲಂಕಾರಗಳ ಬಳಕೆ ಮೇಲೆ ವಿವರಿಸಿರುವ ಕಥನಗೀತೆಗಳಲ್ಲಿ ಕಂಡು ಬರುತ್ತದೆ. ಕಥೆಯನ್ನು ಗೀತೆಗಳ ಉದಾಹರಣೆಯೊಂದಿಗೆ ಕಾವ್ಯವನ್ನು ಹಿಡಿಯಾಗಿ ಹೇಳುವ ರಚನಾ ತಂತ್ರವನ್ನಾಗಿ ಗಮನಿಸಬಹುದು. ಇಲ್ಲಿ ನೇರ, ಸರಳ, ಸೂಕ್ಷ್ಮತೆಯನ್ನು ಹಾಡುಗಳ ರಚನೆಯಲ್ಲಿ ಅನುಸರಿಸಲಾಗಿದೆ. ಶಿಷ್ಟಕಾವ್ಯ ರಚನೆಯಲ್ಲಿ ವರ್ಣನೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತದೆ. ಆ ಮೂಲಕ ಓದುಗನಿಗೆ ರಸಾನುಭವವನ್ನು ಉಂಟು ಮಾಡಲು ಯತ್ನಿಸುತ್ತಾನೆ. ಕಾವ್ಯ ಸುಂದರವಾಗಿ ರಚಿಸಲು ಕವಿ ಅನುಸರಿಸುವ ಮಾರ್ಗಗಳಲ್ಲಿ ಇದು ಒಂದು. ಆದರೆ. ಕಥನಗೀತೆಗಳಲ್ಲಿ ಕೆಲವೊಂದು ಕಡೆ ಮಾತ್ರ ಅನಿವಾರ್ಯವೆನಿಸಿದಾಗ. ವರ್ಣನೆಯನ್ನು ತರಲಾಗಿದೆ. ಕಥನಗೀತೆಗಳಲ್ಲಿ ಒಂದೆರಡು ಸಂದರ್ಭದಲ್ಲಿ ವರ್ಣನೆಯನ್ನು ಕಾಣಬಹುದು. ದ್ವಾರಕಾನಗರದ ವರ್ಣನೆಯೆಂಬ ಶೀರ್ಷಿಕೆಯಡಿಯಲ್ಲಿ ಎರಡು ಸಾಲುಗಳಲ್ಲಿ ದ್ವಾರಕನಗರದ ವರ್ಣನೆ ಮಾಡುತ್ತಾರೆ. ಮತ್ತೊಂದು ಕಡೆ ಭೀಮ–ವೃಷಕೇತು. ಇಬ್ಬರು ಧರ್ಮರಾಯ ವ್ಯಾಸ. ಕೃಷ್ಣನ ಆಣತಿಯಂತೆ ಅಶ್ವಮೇಧಯಾಗವನ್ನು ಮಾಡಲು ಯವನೇಶ್ವರನ ಬಳಿಯಿರುವ ಪಂಚವರ್ಣದ ಕುದುರೆಯನ್ನು ಕೇಳಿ ತರುವಂತೆ ಹೇಳುತ್ತಾರೆ. ಆದರೆ ವೃಷಕೇತು ಯವನೇಶ್ವರನನ್ನು ಹಿಡಿದು ಜೀಳಿಸಿ ಕುದುರೆಯನ್ನು ಎಳೆದು ತರಲು ಪ್ರಯತ್ನಿಸುತ್ತಾನೆ. ಒಡೆತನದಿಂದ ಕೆಳಗೆ ಬಿದ್ದ ಯವನೇಶ್ವರನನ್ನು ಬದುಕಿಸುವಂತೆ ಕಾಪಾಡುವಂತೆ ಸೂರ್ಯನ ಪ್ರಾರ್ಥನೆ ಮಾಡುತ್ತಾನೆ. ಹೀಗೆ ಪ್ರಾರ್ಥಿಸುವ ವೇಳೆಯಲ್ಲಿ ಸೂರ್ಯನ ವರ್ಣನೆಯನ್ನು ಮಾಡಿದ್ದಾರೆ. ಸೂರ್ಯನನ್ನು ಕುರಿತು ವರ್ಣಿಸುವಿಕೆ ಕನ್ನಡ ಕಾವ್ಯಗಳಲ್ಲಿ ಅತಿ ಕಡಿಮೆ. ವರ್ಣಿಸಿರುವ ಕೆಲವು ಕಾವ್ಯಗಳಲ್ಲಿ ಈ ಕಥನ ಕಾವ್ಯವು ಒಂದು. ಹೀಗೆ ಅಲ್ಲೊಂದು–ಇಲ್ಲೊಂದು ವರ್ಣನೆಗಳನ್ನು ಕಾಣಬಹುದು. ಬಬ್ರುವಾಹನ ಕಾಳಗದ ಸಂಪೂರ್ಣ ಚಿತ್ರಣವನ್ನು ಹಾಡಿನಲ್ಲಿ ತಂದಿದ್ದಾರೆ.

ಧರ್ಮರಾಯ ಮತ್ತು ವ್ಯಾಸರ ಸಂಭಾಷಣೆಯು ಮುಂದುವರೆಯುತ್ತಾ, ನಂತರದಲ್ಲಿ ಕೃಷ್ಣಭೀಮರ ಸಂವಾದ, ಯವನೇಶ್ವರನ ಬಳಿ ಭೀಮ ಮತ್ತು ವೃಷಕೇತು ಹೋಗಿ ಪಂಚವರ್ಣದ ಕುದುರೆಯನ್ನು ತುರುವುದು. ವಿವೇಕವನ್ನೇಳಿದ ಕೃಷ್ಣನೇ ಯಾಗಕ್ಕೆ ಬರದಿದ್ದರೆ ಹೇಗೆ ಎಂದು ಭೀಮನನ್ನು ಕೃಷ್ಣನ ಕರೆತರಲು ದ್ವಾರಕೆಗೆ ಕಳುಹಿಸುವುದು. ಭೀಮ ಹೋಗಿ ಕೃಷ್ಣನನ್ನು ಕರೆತರುವಾಗ ಮಾರ್ಗಮಧ್ಯದಲ್ಲಿ ಸಾಲ್ವ–ಅನುಸಾಲ್ವರೊಡನೆ ಕಾಳಗ ನಡೆಸುವುದು. ಮೊದಲು ಕರ್ಣನ ಮಗ ಅವರೊಡನೆ ಹೋರಾಡಿ ಮೂರ್ಛೆ ಹೋಗಿಬಿಡುತ್ತಾನೆ. ನಂತರ ಮನ್ಮಥನನ್ನು ಕಳುಹಿಸಿದರೆ ಅವನು ಸೋತುಬಿಡುತ್ತಾನೆ. ಮತ್ತೆ ಕರ್ಣನ ಮಗನೆ ಮೂರ್ಛೆಯಿಂದೆದ್ದು ಸಾಲ್ವ–ಅನುಸಾಲ್ವನನ್ನು ಸಾಯಿಸಿ

ಅವರನ್ನು ತಮ್ಮ ಯುದ್ಧಗಳಲ್ಲಿ ಸಹಾಯಕ್ಕಾಗಿ ಇಟ್ಟುಕೊಳ್ಳೋಣ ಅವರನ್ನು ಬದುಕಿಸು ಎಂದು ಪುನಃ ಬದುಕಿಸಿಕೊಳ್ಳುವುದು. ಮುಂತಾದ ಪ್ರಸಂಗಗಳನ್ನು ಮೊದಲನೇ ಭಾಗದಲ್ಲಿದೆ.

ಅರ್ಜುನ ನೇತೃತ್ವದಲ್ಲಿ ಯುದ್ಧಕ್ಕೆಂದು ಕುದುರೆಯನ್ನು ಮುಂದಿಟ್ಟು ಕೊಂಡು ಹೋರಾಡುತ್ತಾರೆ. ಹೀಗೆ ಹೋದ ಸಂದರ್ಭದಲ್ಲಿ ಹಲವು ರಾಕ್ಷಸ. ರಾಕ್ಷಸಿಯರು ಎದುರುಗೊಂಡು ಅವರೊಡನೆ ಹೋರಾಟ ಮಾಡಬೇಕಾಗುತ್ತದೆ. ಮೊದಲಿಗೆ ಚಂಡಿ ಎಂಬುವವಳ ಶಾಪವಿಮೋಚನೆ. ಹಂಸಧ್ವಜನ ವೃತ್ತಾಂತ, ಪಾರ್ವತಿ ಹಿಂದೆ ಕೊಟ್ಟಿದ್ದ ಶಾಪದಿಂದ ಅರ್ಜುನ ಮತ್ತು ಅವನ ಕುದುರೆ, ಹೆಣ್ಣಾಗಿ. ಹುಲಿಯಾಗಿ ಪರಿವರ್ತಿತವಾಗಿ ಮತ್ತೆ ನಿಜರೂಪ ತಾಳುವುದು ಮುಂತಾದ ಘಟನೆಗಳನ್ನು ಹಾಡುಗಳ ಮೂಲಕ ವಿವರಸಿಲಾಗುತ್ತದೆ. ಸ್ತ್ರೀಯರ ಸಾಮ್ರಾಜ್ಯವಾದ ಪ್ರಮೀಳೆಯ ರಾಜ್ಯಕ್ಕೆ ಹೋಗಿ ಅಲ್ಲಿ ಅವಳೊಂದಿಗೆ ವಾದ, ಜಗಳವನ್ನು ಮಾಡಿಕೊಂಡು ಆನಂತರ ಅಶರೀರವಾಣಿಯ ಆಣತಿಯಂತೆ ಪ್ರಮೀಳೆಯೊಂದಿಗೆ ರಾಜಿ ಮಾಡಿಕೊಳ್ಳುತ್ತಾನೆ. ಅಲ್ಲಿಂದ ಮುಂದುವರೆದಂತೆ ಭೀಷಣನೊಂದಿಗೆ ಹೋರಾಡಿ ಜಯಗಳಿಸಿ ಮುಂದೆ ಸಾಗಲು ತನ್ನ ಮಗನೆ ಆದ ಬಬ್ರುವಾಹನನು ಕುದುರೆಯನ್ನು ಕಟ್ಟಿಹಾಕಿರುವುದನ್ನು ನೋಡಿ ತನ್ನ ಹಿಂದಿನ ವೃತ್ತಾಂತವನ್ನು ಮರೆತಿದ್ದ ಅರ್ಜುನ ಅವನೊಂದಿಗೆ ಹೋರಾಡಿ ಯುದ್ಧದಲ್ಲಿ ಮಡಿಯುತ್ತಾನೆ. ಇದರ ಸೂಚನೆಯೋ ಎಂಬಂತೆ ಕುಂತಿಗೆ ದುಃಸ್ವಪ್ನ ಬೀಳುವುದು, ಅರ್ಜುನನ್ನು ಬಬ್ರುವಾಹನ ಯುದ್ಧದಲ್ಲಿ ಹತನಾಗಿಸುವುದು ನಂತರ ನಾಗಲೋಕಕ್ಕೆ ಹೋಗಿ ಸರ್ಪಗಳನ್ನು ಸದೆಬಡಿದು ಸಂಜೀವಿನಿ ಮಣಿಯನ್ನು ತರುವುದು ಮತ್ತು ಅರ್ಜುನ ಬದುಕುವುದು ಇಷ್ಟೆಲ್ಲ ವೃತ್ತಾಂತವನ್ನು ಬಬ್ರುವಾಹನ ಕಾಳಗದ ಕಥನಗೀತೆಯಲ್ಲಿ ವಿವರಿಸಿದ್ದಾರೆ.

ಬಬ್ರುವಾಹನ ಕಾಳಗದ ಸಂಪೂರ್ಣ ಭಾಗವನ್ನು ಹಾಡುಗಳ ಮೂಲಕ ಸಂಕ್ಷಿಪ್ತವಾಗಿ ಕಥನಗೀತೆಯಲ್ಲಿ ಹೇಳಲಾಗಿದ್ದು, ಪೌರಾಣಿಕ ಕಥನಗೀತೆಯಾಗಿದೆ. ಒಂದು ಘಟನೆಯಿಂದ ಇನ್ನೊಂದು ಘಟನೆಯನ್ನು ಪ್ರವೇಶಿಸುವಾಗ ಹಿಂದಿನ ಭಾಗದ ಪರಿಚಯ ಮಾಡಿಕೊಡಲು ವಚನಗಳನ್ನು ಅಲ್ಲಲ್ಲಿ ಹೆಚ್ಚಾಗಿ ಬಳಸಿಕೊಳ್ಳಲಾಗಿದೆ. ಇಲ್ಲಿ ರಾಕ್ಷಸಿಯು ಅರ್ಜುನನ, ಸ್ಪರ್ಶದಿಂದ ಶಾಪ ಮುಕ್ತಳಾಗುವುದು. ಅರ್ಜುನ ಮತ್ತು ಕುದುರೆ ಇಬ್ಬರು ಹೆಣ್ಣಾಗುವುದು ಕಥೆಯನ್ನು ಮುಂದುವರೆಸಲು ಬಳಸುವ ತಂತ್ರಗಳಾಗಿ ಕಂಡುಬರುತ್ತದೆ.

ಲವ-ಕುಶರ ಕಾಳಗ:-

ಜನಪದ ಸಾಹಿತ್ಯವು ಹತ್ತನೇ ಶತಮಾನದಿಂದ ಈಚೆಗೆ ಶಿಷ್ಟ ಸಾಹಿತ್ಯಗಳ ಪ್ರಭಾವದಿಂದ ಸೊರಗಿದೆ. ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳ ರಚನೆಗೆ ಜಾನಪದ ಕಥೆಗಳೇ ಮೂಲ. ಜಾನಪದೀಯವಾಗಿದ್ದ ಅನೇಕ ಧಾರ್ಮಿಕ ಆಚರಣೆಗಳು ಹಾಗೂ ಸಾಹಿತ್ಯಿಕ ಅಂಶಗಳು ಶಿಷ್ಟ ಕವಿಗಳಿಗೆ ಸಿಕ್ಕಿ ರಚನೆಯಲ್ಲಿ ಶಿಷ್ಟರೂಪವನ್ನು ಪಡೆಯಿತು. ಆ ಕಾಲದಲ್ಲಿ ಈ ರಈತಿಯ ರಚನೆ ಬಹುಮನ್ನಣೆಯನ್ನು ಪಡೆಯಿತು. ಮತ್ತೆ ಶಿಷ್ಟ ಕಾವ್ಯಗಳು ಜನಪದಕ್ಕೆ, ಸಮಾಜಕ್ಕೆ ಬಂದವು. ಇಲ್ಲಿ ತನ್ನದೇ ಆದ ವಿಭಿನ್ನ ಶೈಲಿಯಲ್ಲಿ ರಚನೆಯಾದವು. ಇಲ್ಲಿ ಮೂರು ವರ್ಗವನ್ನು ಕಾಣಬಹುದು.

೧)ಜನಪದ ಮೂಲ, ೨) ಶಿಷ್ಟಕಾವ್ಯದ ರಚನೆ ೩) ಜನಪದ

ಜನಪದದಿಂದ ಪ್ರೇರಪಣೆಗೊಂಡು ರಚನೆಯಾದ ಶಿಷ್ಟಕಾವ್ಯವನ್ನು ಮತ್ತೆ ಮುಂದಿನ ಪೀಳಿಗೆಯ ಜನಪದಿಗರು ಪುನರ್ ಸೃಷ್ಟಿಸುತ್ತಾರೆ. ಇದು ಜಾನಪದ ಸಾಹಿತ್ಯವು ಕಾಲಾನಂತರದಲ್ಲಿ ಹೊಂದಿರುವ ಪ್ರಭಾವ ಸ್ಥಿತ್ಯಂತರವನ್ನು ಸೂಚಿಸುತ್ತದೆ. 'ಹೃದಯಸಂಪುಟ'ದಲ್ಲಿ ಬರುವ ಕಥನಗೀತೆಗಳು ಮೂರನೇ ಸಂದರ್ಭಗಳಲ್ಲಿ ರಚನೆಗೊಂಡ ಹಾಡುಗಳಾಗಿವೆ. ಭಾಗವತ ಹಿನ್ನೆಲೆಯಲ್ಲಿ ರಚಿಸಿರುವ ಗೀತೆಗಳಾಗಿವೆ. ಈ ಹಾಡುಗಳಲ್ಲಿ ಬರುವ ಭಾಷೆ ಅಲ್ಲಲ್ಲಿ ಸ್ವಲ್ಪ ಒರಟು ಛಾಯೆಯನ್ನು ಕಾಣಬಹುದು. ಭಾಗವತ ಹಿನ್ನೆಲೆಯಲ್ಲಿ ರಚಿಸಿರುವುದರಿಂದ ಅಲ್ಲಲ್ಲಿ ಸಂಭಾಷಣಾ ತಂತ್ರ, ಪದ್ಯಗಳನ್ನು ವಚನ ಮಟ್ಟುಗಳನ್ನು ಬಳಸಿಕೊಂಡಿದೆ. ಇವುಗಳನ್ನೇ ಸಾಹಿತ್ಯಿಕ ಅಂಶವಾಗಿ ಗುರುತಿಸಬಹುದು. ಲವ-ಕುಶರ ಕಾಳಗದ ಕೊನೆಯಲ್ಲಿ ರಾಮನನ್ನು ಸೋಲಿಸಿ, ಲವ-ಕುಶರು ಗೆಲುವನ್ನು ಸಾಧಿಸುತ್ತಾರೆ. ಅದನ್ನು ಮುನಿ ವಾಲ್ಮೀಕಿಗೆ ಹೇಳಲು ಮುನಿಯು ರಾಮನು ನಿಮ್ಮ ತಂದೆ ಎಂದು ತಿಳಿಸಿ ರಾಮನನ್ನು ಬದುಕಿಸಿ ಅವನಿಗೆ ಲವ-ಕುಶರು ನಿನ್ನ ಮಕ್ಕಳು ಎಂದು ಹೇಳುತ್ತಾನೆ. ನಂತರ ಯುದ್ಧದಲ್ಲಿ ಮಡಿದ ಲಕ್ಷ್ಮಣ ಇತರರನ್ನು ಬದುಕಿಸಿ, ಆಶ್ರಮಕ್ಕೆ ಬಂದು ಸೀತೆಗೆ ನಡೆದ ವಿಷಯವನ್ನು ತಿಳಿಸಿ ಮತ್ತೆ ಎಲ್ಲರು ಒಟ್ಟುಗೂಡುತ್ತಾರೆ. ಇಷ್ಟೂ ಘಟನೆಯನ್ನು ಪದ್ಯದ ಮೂಲಕವೇ ವಿವರಿಸಲಾಗುತ್ತದೆ. ಪದ್ಯ ಪ್ರಕಾರದ ಬಳಕೆ ಕಥನಗೀತೆಗಳಲ್ಲಿ ಹೆಚ್ಚಾಗಿದೆ. ಇದೇ ರಈತಿ ಕಥನಗೀತೆಗಳಲ್ಲಿ ವಚನವನ್ನು ಹೇರಳವಾಗಿ ಬಳಸಿಕೊಂಡಿದ್ದಾರೆ.

ಉದಾ:ಹ ವಚನ; **ಇಂತು ಭಾಷೆಯಂ ಕೊಟ್ಟು । ಕುಶಕುಮಾರಂಗೆ**

ಶತ್ರುಗಳ ಜಯಿಸುವಂತಾ । ವಜ್ರಕವಚಂ ತೊಡಿಸಿ

ಮಂಗಳ ವಚನಗಳಿಂದ ಹರಿಸಿದಳದೆಂತೆನೀ

ಕೆಲವೊಮ್ಮೆ ವಚನಗಳ ಬಳಕೆಯಲ್ಲಿ ಹೆಚ್ಚು ದೀರ್ಘವಾಗಿರುವುದನ್ನು ಈ ಹಾಡುಗಳಲ್ಲಿ ಗಮನಿಸಬಹುದು. ಲವ-ಕುಶರ ಕಾಳಗದಲ್ಲಿ ಯಾವುದೇ ಘಟನೆಯನ್ನು ಪ್ರತ್ಯೇಕವಾಗಿ ಹೆಸರಿಸದೆ

ಹಾಡಿನ ಪ್ರಾರಂಭದಿಂದ ಕೊನೆಯವರೆಗೂ ಒಂದೇ ಎಳೆಯಲ್ಲಿ ಸಾಗುತ್ತದೆ. ಶಿಷ್ಟ ಕಾವ್ಯಗಳಿಗೆ ಹೋಲಿಸಿದರೆ ಲವ-ಕುಶರ ಕಾಳಗದ ಕಥನ ಗೀತೆ ಸಂಕ್ಷಿಪ್ತ ಹಾಗೂ ಸರಳ ಭಾಷೆಯನ್ನು ಅನುಸರಿಸಿ ರಚಿಸಲಾಗಿದೆ. ಶಿಷ್ಟ ಕಾವ್ಯಕ್ಕೆ ಹೋಲಿಸಿದಾಗ ಪ್ರಸಂಗಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳಿಲ್ಲ ಎಲ್ಲವನ್ನು ಯಥಾವತ್ತಾಗಿ ವಿವರಿಸಲಾಗಿದೆ. ಆದರೆ ವರ್ಣನೆ, ಅಲಂಕಾರ, ಛಂದಸ್ಸಿನ ದೃಷ್ಟಿಯಿಂದ ಶಿಷ್ಟಕಾವ್ಯಗಳ ರಚನೆಗಿಂತ ಸ್ವಲ್ಪ ಹಿಂದೆ ಎಂದು ಹೇಳಬಹುದು. ಕಥನಗೀತೆಗಳಲ್ಲಿ ಬಳಕೆಯಾಗಿರುವ ಭಾಷೆಯು ಸರಳವಾಗಿದ್ದು ಸುಲಭವಾಗಿ ಅರ್ಥವಾಗುತ್ತದೆ. ಇವುಗಳನ್ನು ಹಬ್ಬ ಹರಿದಿನಗಳಲ್ಲಿ ಹಾಡುವ ಸಲುವಾಗಿಯೇ ಭಾಗವತ ರೂಪದಲ್ಲಿ ರಚಿಸಿಕೊಳ್ಳಲಾಗಿದೆ.

ಸಾಮಾನ್ಯ ಹಾಡುಗಳು

ರುದ್ರಾಕ್ಷಿ ಮಹಿಮೆ:-

ರುದ್ರಾಕ್ಷಿ ಮಹಿಮೆಯು ಆಧ್ಯಾತ್ಮದ ಮಹಿಮೆಯನ್ನು ಸಾರುವ ಹಾಡು. ಇಲ್ಲಿ ರುದ್ರಾಕ್ಷಿಯ ಮೂಲಕ ಶಿವನ ಮಹಿಮೆಯನ್ನು ತಿಳಿಸಲಾಗಿದೆ. ಹಾಡಿನಲ್ಲಿ ಕೇವಲ ಎರಡೆರಡು ಸಾಲುಗಳ ಮುಖಾಂತರ. ಒಂದೊಂದು ಘಟನೆಯನ್ನು ವಿವರಿಸುತ್ತಾರೆ. ಇದು ಶಿವನನನ್ನು ಕುರಿತ ಹಾಡಾದ್ದರಿಂದ ಬಹುಶಃ ಶಿವರಾತ್ರಿಯ ದಿನದಂದು ಈ ಗೀತೆಯನ್ನು ಕಡ್ಡಾಯವಾಗಿ ಹಾಡುತ್ತಿದ್ದರೇನೋ? ಆಸ್ತಿಕರಲ್ಲಿ ರುದ್ರಾಕ್ಷಿ ಹಾಡು ಆಧ್ಯಾತ್ಮಜ್ಞಾನವನ್ನು, ಧಾರ್ಮಿಕಶ್ರದ್ಧೆಯನ್ನು, ಇಮ್ಮಡಿಗೊಳಿಸುತ್ತದೆ. ಒಮ್ಮೆ ಶಿವನು ಪಾರ್ವತಿಯು ಒತ್ತಾಯ ಮಾಡಿ ರುದ್ರಾಕ್ಷಿಯ ಪೂರ್ವ ವೃತ್ತಾಂತವನ್ನು ಕೇಳುತ್ತಾಳೆ. ಆಗ ಶಿವ ಎರಡು ಕಥೆಗಳನ್ನು ಹೇಳುತ್ತಾನೆ. ಎರಡರಲ್ಲೂ ರುದ್ರಾಕ್ಷಿ ಎಷ್ಟು ಮಹತ್ವವುಳ್ಳದ್ದು, ಪವಿತ್ರವಾದದ್ದು ಎಂಬುದನ್ನು ಅರ್ಥೈಸುತ್ತಾನೆ. ಮೊದಲನೇ ಕಥೆಯಲ್ಲಿ ರುದ್ರಾಕ್ಷಿಯ ಜನ್ಮರಹಸ್ಯವನ್ನು ಹೇಳುತ್ತಾನೆ. ಒಮ್ಮೆ ಶಿವನ ಕಣ್ಣುಗಳಿಂದ ಬಂದ ನೀರ ಹನಿಯೇ ರುದ್ರಾಕ್ಷಿಯಾಗಿದೆ. ಆನಂತರದಲ್ಲಿ ರುದ್ರಾಕ್ಷಿಯ ಆಧ್ಯಾತ್ಮಿಕವಾಗಿ ಎಷ್ಟು ಬೆಲೆಯುಳ್ಳದ್ದು ಎಂದು ಹೇಳಲು ಅದೇ ಕಥೆಯನ್ನು ಮುಂದುವರೆಸಿ ಇನ್ನೊಂದು ಘಟನೆಯನ್ನು ಸೃಷ್ಟಿಸುತ್ತಾನೆ. ಪಾರ್ವತಿಗೆ ಕುಬೇರನ ಬಳಿ ಹೋಗಿ ರುದ್ರಾಕ್ಷಿಯ ಬೆಲೆ ತಿಳಿದುಬರಲು ಹೇಳುತ್ತಾನೆ. ಕುಬೇರನ ಮನೆಗೆ ಹೋದ ಪಾರ್ವತಿಗೂ, ಕುಬೇರನಿಗೂ, ರುದ್ರಾಕ್ಷಿಯನ್ನು ತೂಕಕಟ್ಟಿ ಮೇಲೆ ಅದು ಮೇಲೆ ಏಳದೇ ಇರುವುದು ಅದರ ಮಹತ್ವವನ್ನು ಇಬ್ಬರಿಗೂ ತಿಳಿವಂತೆ ಮಾಡುತ್ತದೆ. ಇಷ್ಟಕ್ಕೆ ಸುಮ್ಮನಾಗದ ಶಿವನು ರುದ್ರಾಕ್ಷಿಯನ್ನು ಕುರಿತು ಇನ್ನೊಂದು ಕಥೆ ಹೇಳುತ್ತಾನೆ. ಒಮ್ಮೆ ಕಟುಕ ಕ್ರೂರಿಯೊಬ್ಬ ಮನುಷ್ಯ, ಪ್ರಾಣಿಗಳನ್ನು ತಿಂದು ಮುಗಿಸುತ್ತಿರುತ್ತಾನೆ. ಹಿಂಸೆಯು ಎಷ್ಟು ಕ್ರೂರ ಭಯಾನಕ ಕೆಲಸವೆಂಬುದು ನಮ್ಮೆಲ್ಲರಿಗೂ ತಿಳಿದಿರುವಂತಹದ್ದು ಅಂತಹ ಪಾಪವನ್ನು ಈ ರುದ್ರಾಕ್ಷಿ ಕಳೆಯುತ್ತದೆ ಎಂದು ಶಿವ

ಹೇಳುತ್ತಾನೆ. ಅದಕ್ಕೆ ಸಾಕ್ಷಿಯೊ ಎಂಬಂತೆ ಎರಡನೇ ಕಥೆಯಿದೆ. ಕಟುಕನು ಹಾಲನ್ನು ಕುಡಿದು ಹಾಲು ರುಚಿಯಾಗಿರಲು ಅದನ್ನು ನೀಡಿದ ಆಕಳೆಷ್ಟು ರುಚಿಯಾಗಿರುತ್ತದೆ ಎಂದು ಆಕಳನ್ನು, ದಿನವು ಒಂದೊಂದು ಶಿಶುವನ್ನು, ಮನುಜರ ಮಾಂಸವನ್ನು ತಿನ್ನುತ್ತಿದ್ದನು. ಒಮ್ಮೆ ರಾಜಕನ್ಯೆಯೊಬ್ಬಳನ್ನು ಕಬಳಿಸಲು ಯತ್ನಿಸಿದಾಗ ಚೆನ್ನಾಗಿ ಹೊಡೆದು ಬಡಿದು ಹಾಕುತ್ತಾರೆ. ಅದೇ ಮಾರ್ಗವಾಗಿ ಬಂದ ಸನ್ಯಾಸಿಯು ಆಕಸ್ಮಿಕವಾಗಿ ಮರದಲ್ಲಿ ಕಟುಕನಿಗೆ ನೇರವಾಗಿ ನೇತುಹಾಕಿದ್ದ ರುದ್ರಾಕ್ಷಿಯನ್ನು ಮರೆತು ಹೋಗಿರುತ್ತಾನೆ. ಸತ್ತ ಆ ಕಟುಕನ ಮೇಲೆ ರುದ್ರಾಕ್ಷಿ ಮಾಲೆ ಬಿದ್ದು ಒಂದು ಆಶ್ಚರ್ಯವನ್ನು ಸೃಷ್ಟಿಸುತ್ತದೆ. ಅವನನ್ನು ಕರೆದೊಯ್ಯಲು ಬಂದಿದ್ದ ಯಮದೂತರ ಬದಲು ದೇವಲೋಕದಿಂದ ಶಿವದೂತರು ಬಂದು ಕೊಂಡೊಯ್ಯುತ್ತಾರೆ. ಈ ಹಾಡಿನಲ್ಲಿ ದರೋಡೆಕೋರನ ಮೂಲಕ ಭೀಭತ್ಸ, ಭಯಾನಕ, ರಸಗಳನ್ನು ಹಾಡಿನಲ್ಲಿ ತಂದಿದ್ದಾನೆ. ಧಾರ್ಮಿಕ ಅಂಶವನ್ನು ಕೇಂದ್ರವಾಗಿಟ್ಟುಕೊಂಡು ಕಾವ್ಯ ರಚಿಸಿದ್ದಾನೆ.

ಬಂಡೀಹಾಡು :-

ಬಂಡೀ ಹಾಡು ಇತರ ಕಥನಗೀತೆಗಳಿಗಿಂತ ಭಿನ್ನವಾದದ್ದು. ಈ ಹಾಡಿನ್ನಲಿ ಸಾಮಾಜಿಕ ಮತ್ತು ಧಾರ್ಮಿಕ ಅಂಶಗಳನ್ನು ತರಲಾಗಿದೆ. ಸಮಾಜದಲ್ಲಿನ ಸಮಸ್ಯೆಯೊಂದರ ಚಿತ್ರಣವನ್ನು ಕಾಣಬಹುದು. ಆದರೆ ಕವಿ ಇದನ್ನು ಉದ್ದೇಶಪೂರ್ವಕವಾಗಿ ಸಮಸ್ಯೊಂದನ್ನು ವಿವರಿಸ ಹೊರಟಿಲ್ಲ. ಹಾಡಿನ ಸೃಷ್ಟಿಗೆ ಒಂದು ಪ್ರಾರಂಭವನ್ನಾಗಿ ಅಷ್ಟೇ ಬಳಸಿಕೊಂಡಿದ್ದಾನೆ. ಅವನ ಒಲವೇನಿದ್ದರು ಆಧ್ಯಾತ್ಮಶಕ್ತಿಯನ್ನು ಎತ್ತಿಹಿಡಿಯುವುದು. ವಿವಾಹ ಕೇವಲ ಸಂಗಾತಿಗಾಗಿ ಅಷ್ಟೇ. ಅಲ್ಲದೆ ವಂಶದ ಮುಂದುವರಿಕೆಗಾಗಿಯೂ ಸಹಾಯಕವಾಗಿದೆ. ಈ ನಿಟ್ಟಿನಲ್ಲಿ ವಿವಾಹವನ್ನು ಕಂಡುಕೊಳ್ಳಲಾಯಿತು. ಬರುಬರುತ್ತಾ ಮಕ್ಕಳನ್ನು ಹಡೆಯದವರನ್ನು ಸಮಾಜದಲ್ಲಿ ಗೌರ. ಮನ್ನಣೆಯಿಂದ ಕಾಣುತ್ತಿರಲಿಲ್ಲ. ಇದು ಅವರನ್ನು ಮಾನಸಿಕವಾಗಿ ನೋವಾಗುವಂತೆ ಮಾಡುತ್ತಿತ್ತು. ಸಂತಾನ ಪ್ರಾಪ್ತಿಯು ಹೊಂದಲು ಮಾರ್ಗ ಎಂದು ನಂಬಲಾಗಿತ್ತು. ಬಂಡೀಹಾಡಿನಲ್ಲಿ ಸಮಾಜದಲ್ಲಿ ಸಂತಾನವಿಲ್ಲದವರನ್ನು ನಡೆಸಿಕೊಳ್ಳುವ ರೀತಿ ಅದರಿಂದ ತಪ್ಪಿಸಿಕೊಳ್ಳಲು ದೈವರಲ್ಲಿ ಮೊರೆಯನಿಡುವ ಪರಿಯನ್ನು ಬಂಡೀ ಹಾಡಿನಲ್ಲಿ ನೋಡಬಹುದು. ಇದು ಒಂದು ಭಕ್ತಿಪ್ರಧಾನವಾದ ಹಾಡಾಗಿದೆ. ಬಾಲಕಿಯೊಬ್ಬಳು ಮಕ್ಕಳ ಭಾಗ್ಯವನ್ನು ಕರುಣಿಸಬೇಕೆಂದು ಹರಕೆಯನ್ನು ಮಾಡಿಕೊಳ್ಳುತ್ತಾಳೆ. ನನಗೆ ಮಗುವಾದರೆ ನಿನ್ನ ರಥದ ಬಂಡಿಗೆ ಒಪ್ಪಿಸುವೆನೆಂದು ಅಂತೆಯೇ ಅವಳ ಅತ್ತೆ, ಮಾವ, ಗಂಡ, ಮೂವರು ಒಂದೊಂದು ರೀತಿಯಲ್ಲಿ ಹರಕೆ ಮಾಡಿಕೊಳ್ಳುತ್ತಾರೆ. ಇವರ ಬೇಡಿಕೆ ಫಲಿಸಿತೋ ಎಂಬಂತೆ ಆಕೆಗೆ ಮಗುವಾಗುತ್ತದೆ. ಆದರೆ ನಾಲ್ಕು ಜನರು ಮಗುವಿನ ಆಗಮನದ ಸಂತೋಷದಲ್ಲಿ ಮಗುವಿಗೆ ನೇರವೇರಿಸಬೇಕಾದ ಜಾತ-ಕರ್ಮಗಳನ್ನೆಲ್ಲ ನಡೆಸುತ್ತಾ ನೆಂಟರಿಷ್ಟರೊಂದಿಗೆ ಸಂಭ್ರಮಿಸುತ್ತಾ ಹಿಂದೆ

ಮಾಡಿಕೊಂಡ ಹರಿಕೆಯನ್ನೇ ಮರೆತು ಬಿಡುತ್ತಾರೆ. ದೈವವು ಅದನ್ನು ಅವರಿಗೆ ನೆನಪಿಸಲು ಮಗುವಿಗೆ ಅನಾರೋಗ್ಯವನ್ನು ತಂದೊಡ್ಡುತ್ತಾನೆ. ನಂತರ ಜೋಯಿಸರು ಹಿರಿಯರಿಂದ ತಮ್ಮ ತಪ್ಪನ್ನು ಮನಗೊಂಡ ಮೂವರು ತಮ್ಮ ಹರಕೆಯನ್ನು ತೀರಿಸುತ್ತಾರೆ. ಆದರೆ ಬಾಲಕಿಗೆ ಮಾತ್ರ ಅದು ಸಾಧ್ಯವಾಗುವುದಿಲ್ಲ. ಕಾರಣ ಅವಳು ಮಾಡಿಕೊಂಡಿರುವ ಹರಕೆ ಅಂತಹದ್ದು. ಈ ಹಾಡು ಮನುಷ್ಯ ತನ್ನ ಸಂದಿಗ್ಧ ಪರಿಸ್ಥಿತಿಯಲ್ಲಿ ತನಗೆ ಅರಿವಿಲ್ಲದಂತೆ ತಾನು ತೆಗೆದುಕೊಳ್ಳುವ ನಿರ್ಧಾರವನ್ನು ನಂತರ ಅದರಿಂದಾಗಿ ಪಡುವ ವ್ಯಥೆಯನ್ನು ಹೇಳುತ್ತದೆ. ಮಗುವನ್ನು ಒಪ್ಪಿಸಲಾರದ ಮನಸ್ಸಲ್ಲಿ ಬಂಡಿಗೆ ಒಪ್ಪಿಸುತ್ತಾಳೆ. ಇದೇ ಅವಳು ಮಾಡಿಕೊಂಡ ಹರಿಕೆ. ಜೊತೆಯಲ್ಲಿ ತಾನು ಮಲಗುತ್ತಾಳೆ. ಭಕ್ತಳನ್ನು ಪರೀಕ್ಷಿಸುವ ಹರಿಯು ರಥದ ಬಂಡಿಯಿಂದ ಇಬ್ಬರಿಗೂ ಯಾವುದೇ ತೊಂದರೆ ಮಾಡುವುದಿಲ್ಲ. ತಾಯಿಯಿಂದ ಮಗುವನ್ನು ದೂರಮಾಡದೇ ಅವಳಿಗಾಗಿ ಉಳಿಸುತ್ತಾನೆ. ಮಾನಿನಿಯು ಹರಿಯ ಈ ಪರಿಯನ್ನು ಹಾಡಿ. ಹೊಗಳುತ್ತಾ ನಡೆದದ್ದೆಲ್ಲವನ್ನು ವಿವರಿಸಿ ಹರಿಯನ್ನು ಕೊಂಡಾಡುತ್ತಾಳೆ. ಹರಕೆ ಹಾಡಿನ ಮುಖ್ಯ ವಸ್ತುವಾಗಿದೆ. ದೇವರು ಭಕ್ತರನ್ನು ಪರೀಕ್ಷಿಸುವ ಪರಿಯನ್ನು ವಿವರಿಸಲಾಗಿದೆ. ಧಾರ್ಮಿಕ ಹಿನ್ನೆಲೆಯಲ್ಲಿ ಬಂಡೀ ಹಾಡನ್ನು ಗಮನಿಸಬಹುದು.

ಕಮಲೆಯ ಹಾಡು:–

ಕಮಲೆಯ ಹಾಡು ಹರಿಯ ಲೀಲೆಯನ್ನು ತೋರುವ ಹಾಡು. ಹಬ್ಬ–ಹರಿದಿನಗಳಲ್ಲಿ ಹಾಡಲೆಂದು ರಚಿಸಿಕೊಂಡಿರುವಂತಹದ್ದಾಗಿದೆ. ಮಾಯಾವಿ ಕೃಷ್ಣ ಹೆಣ್ಣುಮಕ್ಕಳನೊಲಿಸಿಕೊಳ್ಳುವ ತಂತ್ರವೆಂತಹದು ಎನ್ನುವುದು ಈ ಹಾಡಿನಲ್ಲಿ ಕಂಡುಬರುತ್ತದೆ. ಕಥನಗೀತೆಯ ಪೂರ್ಣಭಾಗವನ್ನು ಹಾಡುಗಳೇ ಆವರಿಸಿದೆ. ಅಲ್ಪಪ್ರಮಾಣದಲ್ಲಿ ವಚನ ಕಂಡುಬರುತ್ತದೆ. ಎಲ್ಲಾ ಕಥನಗೀತೆಗಳ ರಚನೆಯಲ್ಲಿ ಅನುಸರಿಸುವಂತೆ ಇಲ್ಲಿಯೂ ಸಹ ಪ್ರಾರಂಭವನ್ನು ದೇವರ ಪ್ರಾರ್ಥನೆಯ ಮೂಲಕ ಮಾಡಲಾಗಿದೆ. ಈ ಹಾಡಿನಲ್ಲಿ ಕೃಷ್ಣನ ಚೇಷ್ಟೆ, ಮಾಯಾಜಾಲತನವನ್ನು ಚಿತ್ರಿಸಲಾಗಿದೆ. ಕಮಲೆಯ ಹಾಡು ಯಾವುದೇ ಸಾಹಿತ್ಯಿಕ ಉದ್ದೇಶದಿಂದ ರಚಿಸಲಾಗಿಲ್ಲ. ಈ ಮಾತು ಸ್ವತಃ ಭಾಗವತನಿಂದಲೇ ಹಾಡಿನಲ್ಲಿ ಹೇಳಲ್ಪಟ್ಟದೆ.

ಕೃಷ್ಣ, ಕಮಲೆ ಇಬ್ಬರು ಹಾಡಿನ ಮುಖ್ಯಪಾತ್ರಗಳು. ಈ ಹಾಡಿನಲ್ಲಿ ಪರರ ಹೆಣ್ಣಾದ ರೂಪವತಿ, ಸೌಂದರ್ಯವತಿ. ಬುದ್ಧಿವಂತೆಯಾದ ಕಮಲೆಯನ್ನು ವರಿಸುವ ಕೃಷ್ಣನ ತಂತ್ರ ಹಾಡಿನಲ್ಲಿ ವ್ಯಕ್ತವಾಗಿದೆ. ಅವನಿಂದ ತಪ್ಪಿಸಲು ಕಮಲೆಗೆ ಮದುವೆ ಮಾಡಿ ಗಂಡನ ಮನೆಗೆ ಕಳಿಸಿರುತ್ತಾರಾದರೂ ಗೌರಿ ಪೂಜೆಗೆಂದು ಬಂದ ಕಮಲೆಯನ್ನು ಕೃಷ್ಣ ಪಡೆಯಲು ತಂತ್ರಗಳನ್ನು ಮಾಡುತ್ತಾನೆ. ಕಮಲೆಯ ಹಾಡಿನಲ್ಲಿ ಬರುವ ಕೃಷ್ಣನ ಪಾತ್ರ ನೈತಿಕವಾಗಿ ಆದರ್ಶಪ್ರಾಯವಾಗಿಲ್ಲ. ಪರ ಸ್ತ್ರೀಯೊಬ್ಬಳನ್ನು ವರಿಸಲು ಬಯಸುವುದು ಅನೈತಿಕವೆನಿಸುತ್ತದೆ. ಕೃಷ್ಣ ರಸಿಕಪ್ರಿಯ ಪುಂಡನಾದರೂ ಪರಸ್ತ್ರೀಯನ್ನು

ಬಯಸುವುದು ತಪ್ಪೆನಿಸುತ್ತದೆ. ಕಮಲೆಯ ಬೆರಳಿಗೆ ಮಾಯದ ಉಂಗುರವನ್ನಿಟ್ಟು ತನ್ನ ವಶಮಾಡಿಕೊಳ್ಳುತ್ತಾನೆ.

ಹಾಡಿನ ಪೂರ್ಣಭಾಗ ಕಮಲೆಯ ವಿರಸ ಕೃಷ್ಣನ ಸರಸ ರೂಪವನ್ನು ಒಳಗೊಂಡಿದೆ. ಕೊನೆಗೂ ಕಮಲೆಯನ್ನು ತನ್ನ ಪಾಶದೊಳಗೆ ಸಿಲುಕಿಸಿಕೊಳ್ಳುವ ಪರಿಗಳನ್ನು ಹಾಡುಗಳಲ್ಲಿ ವಿವಿಧ ವರ್ಣನೆಗಳ ಮೂಲಕ ಹೇಳಲಾಗಿದೆ. ಕೃಷ್ಣನ ರಸಿಕತೆಯನ್ನು ಬಿಂಬಿಸುತ್ತದೆ. ಕಪಟಧಾರಿ ಕೃಷ್ಣನ ಆಟಗಳನ್ನು ಚಿತ್ರಿಸುತ್ತದೆ.

ಐತಿಹಾಸಿಕ ಕಥನಗೀತೆ:–

ಜನಪದ ಸಾಹಿತ್ಯದಲ್ಲಿ ಕಥನಗೀತೆಗಳು ಪ್ರಮುಖಸ್ಥಾನವನ್ನು ಗಳಿಸಿಕೊಂಡಿದೆ. ಐತಿಹಾಸಿಕ ಅಥವಾ ಚಾರಿತ್ರಿಕ ಕಥನಗೀತೆಗಳು ಜನಪದ ಕಥನಗೀತೆಗಳ ಒಂದು ಭಾಗವಾಗಿದೆ. ಸಾಹಿತ್ಯ ರಚನೆಯ ಆರಂಭದ ಕಾಲದಲ್ಲಿ ಪೌರಾಣಿಕ ವಸ್ತುಗಳನ್ನು ಮಾತ್ರ ಆಧರಿಸಿ ಕಾವ್ಯ ರಚಿಸುವಂತಹ ಬೃಹತ್ ಪರಂಪರೆಯಿತ್ತು. ಅನಂತರದ ದಿನಗಳಲ್ಲಿ ತಮ್ಮ ಸಮಕಾಲೀನ ಸಂದರ್ಭದಲ್ಲೋ ಇಲ್ಲದ ತಮ್ಮ ಹಿರಿಯರ ಸಮಕಾಲೀನರಾಗಿ ಬದುಕಿದ್ದು ಅವರ ಒಳ್ಳೆಯ ಇಲ್ಲವೇ ಕೆಟ್ಟಗುಣಗಳಿಂದ ತಾವು ಬದುಕಿದ್ದ ಸಮಾಜಕ್ಕೆ ತಿಳಿದಿದ್ದಂತಹ ಪರಿಚಿತರಾಗಿದ್ದಂತಹ ಪ್ರಸಿದ್ಧಿಯನ್ನು ಹೊಂದಿದವರನ್ನು ತಮ್ಮ ಕಾವ್ಯದ ವಸ್ತು, ನಾಯಕನನ್ನಾಗಿಸಿ ಕಾವ್ಯ ರಚನೆಯನ್ನು ಮಾಡುವಂತಹ ಪರಂಪರೆಯೊಂದು ಸೃಷ್ಟಿಯಾಯಿತು. ಶಿಷ್ಟ ಕವಿಗಳು ರಾಜನ ಆಶ್ರಯದಲ್ಲಿದ್ದಂತಹವರು ರಾಜನಿಗೆ ನಿಷ್ಠನಾಗಿದ್ದು ಅವನ ಪರಾಕ್ರಮ ಪಡೆದ ಬಿರುದಗಳ ಗೆದ್ದ ಪ್ರದೇಶಗಳು ಮುಂತಾದವುಗಳನ್ನು ಹಾಡಿ ಹೊಗಳುವಂತಹ ವಿಷಯವನ್ನು ತಮ್ಮ ಕಾವ್ಯಗಳ ವಸ್ತುವಾಗಿಸಿಕೊಂಡು ಪುರಾಣ ವ್ಯಕ್ತಿಗಳೊಂದಿಗೆ ಹೋಲಿಸಿ ಸಾಹಿತ್ಯ ರಚನೆ ಮಾಡುತ್ತಿದ್ದರು. ಇದು ಚಾರಿತ್ರಿಕ ಕಥನಗೀತೆಗಳ ಹತ್ತಿರವಾಗಿದೆ. ಏಕೆಂದರೆ ಚಾರಿತ್ರಿಕ ಕಥನಗೀತೆಗಳ ರಚನಕಾರರು ತಾನು ಕಂಡು ಕೇಳಿದ ಬದುಕಿದ್ದಾಗ ಪವಾಡ, ಚಮತ್ಕಾರ, ತಂತ್ರ, ಸನ್ನಡತೆಗಳ ಮೂಲಕ ಜನರ ಮನಸಿನಲ್ಲಿ ನೆಲೆಸಿದ ಇಲ್ಲವೇ ಕೆಡುಕನ್ನುಂಟು ಮಾಡಿ ತಿರಸ್ಕಾರ, ದ್ವೇಷಕ್ಕೆ ಗುರಿಯಾದ ವ್ಯಕ್ತಿಗಳನ್ನು ಕುರಿತು ಕಾವ್ಯವನ್ನು ರಚಿಸಲಾಗುತ್ತದೆ. ಇದು ಇತಹಾಸ ಪ್ರಸಿದ್ಧ ಘಟನೆ ಮತ್ತು ವ್ಯಕ್ತಿಯೊಬ್ಬರ ವ್ಯಕ್ತಿತ್ವವನ್ನು ಮತ್ತೊಮ್ಮೆ ನೆನಪಿಸುವಂತಹ ಕೆಲಸವನ್ನು ಮಾಡುತ್ತದೆ. ಬ್ರಾಹ್ಮಣರ ಸಂಪ್ರದಾಯದಲ್ಲಿ ಕಥನಗೀತೆಗಳ ರಚನೆಯಲ್ಲಿ ಅನುಸರಿಸುವ ಒಂದು ಮಾರ್ಗವೆಂದರೆ ಯಕ್ಷಗಾನಧಾಟಿ. ಹಾಗಾಗಿ ಬಹು ವಿಸ್ತಾರವಾಗಿ ಹೇಳಲ್ಪಡುವ ಮಟ್ಟುಗಳಿಂದ ಕೂಡಿರುತ್ತದೆ. ಯಕ್ಷಗಾನದಧಾಟಿಯ ಕಾವ್ಯವನ್ನು ಎರಡು ರೀತಿಯಾಗಿ ವಿಂಗಡಿಸಬಹುದು. ೧.ನಾಟಕಪ್ರದಾನ ೨.ಕಾವ್ಯಪ್ರದಾನ. 'ಹೃದಯಸಂಪುಟ' ಗ್ರಂಥದಲ್ಲಿ ಬರುವ ಸಂಪ್ರದಾಯದ

ಹಾಡುಗಳ ಕಥನಗೀತೆ ಕಾವ್ಯಪ್ರಧಾನವಾದದ್ದು. ದೀರ್ಘವಾದ ಕಥನಗೀತೆಗಳನ್ನು ಕೇವಲ ಜ್ಞಾಪಕಶಕ್ತಿಯ ಮೂಲಕವಷ್ಟೇ ಉಳಿಸಿಕೊಂಡು ಬಂದಿರುವುದು. ಮಹಿಳೆಯರ ಬೌದ್ಧಿಕ ಹಾಗೂ ಪ್ರಾಮಾಣಿಕ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಬ್ರಾಹ್ಮಣರ ಸಂಪ್ರದಾಯದ ಹಾಡುಗಳ ರಚನೆಯಾಗಿರುವುದು. ವಸ್ತುವನ್ನಾಗಿ ಆಶ್ರಯಿಸಿರುವುದು ಬಹುಪಾಲು ರಾಮಾಯಣ, ಮಹಾಭಾರತವನ್ನೇ. ಚೋರಕಥೆ ಜನಪದ ಸಾಹಿತ್ಯದಲ್ಲಿ ಎಷ್ಟೋ ವೇಳೆ ಬಿಡಿ ಬಿಡಿ ಸಣ್ಣದಾದ ಕಥೆಗಳನ್ನೇ ಹೆಣೆದು ಒಂದು ದೊಡ್ಡ ಕಥನ ಗೀತೆಯನ್ನಾಗಿ ಮಾರ್ಪಡಿಸಿಕೊಂಡಿದೆ. ವಿಸ್ತಾರವಾದ ಹಾಡಾಗಿದ್ದು ಕಾವ್ಯ ರೂಪವನ್ನು ಪಡೆದುಕೊಂಡಿದೆ. ಯಕ್ಷಗಾನ ಕ್ರಮದ ರಚನೆಯ ಹಾಡುಗಳಲ್ಲಿ ಒಂದು ಅಪೂರ್ವ ಐತಿಹಾಸಿಕ ವಿಚಾರಗಳಿಂದ ಕೂಡಿದ ರಾಜಕುಮಾರರ ಕಥೆ ರಚಿತವಾಗಿರುವುದು ಎಲ್ಲರಿಗೂ ತಿಳಿದಿತ್ತಾದರು ಅದನ್ನು ಹಾಡಿನ ರೂಪದಲ್ಲಿ ರಚಿಸಲಾಗಿದೆ ಎಂದು ತಿಳಿದಿರಲಿಲ್ಲ. ಒಬ್ಬೊಬರು ಮಾತ್ರ 'ಚೋರ ಸಹೋದರರ ಕಥೆ'ಯ ಹಾಡನ್ನು ಶೋಧಿಸಿ ಅದನ್ನು ಪ್ರಕಟಿಸಲು ಯತ್ನಿಸಿದರು. ಅಂತಹದರಲ್ಲಿ ಬಾಗೂರು ನಾಗರಾಜಪ್ಪ ಕೂಡ ಒಬ್ಬರು.

ವಾಗೀಶ್ವರಿ ಶಾಸ್ತ್ರೀಯವರು ಸಂಶೋಧಕ ನಾಗರಾಜಪ್ಪನವರು 'ಚೋರಕಥೆ'ಯನ್ನು ಕುರಿತು ಬರೆದ ಸಂಶೋಧನಾ ಲೇಖನದ ಹಿನ್ನೆಲೆಯಲ್ಲಿ ಇದನ್ನು ಐತಿಹಾಸಿಕ ಕಥನಗೀತೆಯೆಂದು ಗುರುತಿಸುತ್ತಾರೆ. ಇವರು ಬರೆದಿರುವ 'ನೀರ್ಗುಂದ ಎರಡು ಸಹಸ್ರ ವರ್ಷಗಳ ಇತಿಹಾಸ' ಎಂಬ ಸಂಶೋಧನಾ ಲೇಖನ ಚೋರ ಕಥೆಯ ಐತಿಹಾಸಿಕ ಹಿನ್ನೆಲೆಯನ್ನು ತಿಳಿಸುತದೆ. ಸಂಪ್ರದಾಯದ ಹಾಡುಗಳ ಗ್ರಂಥದಲ್ಲಿರುವ ಚೋರ ಕಥೆ ಹಾಡಿನ ರೂಪದ ಕಥೆ. "ಚೋರ ಸಹೋದರರು ರಾಜಕುಮಾರರಾಗಿದ್ದರೂ ಚೋರರಾದದ್ದು ಏಕೆ? ಇದಕ್ಕೆ ಕಾರಣವೇನು? ಇತ್ಯಾದಿ ಕುತೂಹಲಕಾರಿ ಸನ್ನಿವೇಶಗಳು ಈ ಹಾಡಿನಲ್ಲಿ ಚಿತ್ರಿಸಲಾಗಿದೆ. ವಾಗೀಶ್ವರಿ ಶಾಸ್ತ್ರಿಯವರು 'ಚೋರಕಥೆ' ಹಾಡನ್ನು ರಚಿಸಿದ ಕವಿಯನ್ನು ಕುರಿತು ಹೀಗೆ ಹೇಳುತ್ತಾರೆ. "ಚೋರಕಥೆಯ ಕರ್ತೃವೂ ಕೂಡ ವಿದ್ಯಾವಂತನೇ ಆಗಿರಬೇಕು ಮತ್ತು ರಾಜನೀತಿಯನ್ನು ತಿಳಿದವನಾಗಿರಬೇಕು. ಕವನದ ಉದ್ದಕ್ಕೂ ಬರುವ ವಿಷಯಗಳನ್ನು ಗಮನಿಸಿದಾಗ ಈ ಕವಿಗೆ ಪುರಾಣ ಪುಣ್ಯ ಕಥೆಗಳ ಅರಿವು ಸಾಕಷ್ಟಿದೆ ಎನಿಸುತ್ತದೆ" ಒಟ್ಟಾರೆಯಾಗಿ ಸಾಹಿತ್ಯದ ರಚನೆಯಲ್ಲಿ ಅಗತ್ಯವಾದಷ್ಟು ಜ್ಞಾನ, ಸಾಹಿತ್ಯ ಆಸಕ್ತಿ ಕವಿಗೆ ಇತ್ತೆಂಬುದು ವಾಗೀಶ್ವರಿಯವರ ಮಾತಿನಿಂದ ತಿಳಿದುಬರುತ್ತದೆ. ಎಲ್ಲ ವಿದ್ವಾಂಸರು ಸಂಶೋಧಕರಿಗೆ ಚೋರಕಥೆ ಇದೆ ಎಂದು ತಿಳಿದಿತ್ತಾದರೂ ಅದನ್ನು ಹುಡುಕಿ ಪ್ರಕಟಿಸುವಂತಹ ಕೆಲಸವನ್ನು ಯಾರು ಮಾಡಿರಲಿಲ್ಲ. ಆಕಸ್ಮಿಕವಾಗಿ ವಾಗೀಶ್ವರಿ ಶಾಸ್ತ್ರಿಯವರಿಗೆ ಸಿಕ್ಕಿದ ಚೋರಕಥೆಯನ್ನು ಸಾಹಿತ್ಯ ಪ್ರೇಮಿಗಳಿಗೆ, ಸಾಹಿತ್ಯ ಕ್ಷೇತ್ರಕ್ಕೆ ಉಳಿಸಿಕೊಟ್ಟ ಕೀರ್ತಿ ವಾಗೀಶ್ವರಿಯವರಿಗೆ ಸಲ್ಲುತ್ತದೆ.

ಕಾವ್ಯದ ರಚನಕಾರ ಅಗಾಧವಾದ ಶಿವಭಕ್ತನೆಂಬುದಕ್ಕೆ ಉದಾಹರಣೆಗಳನ್ನು ಕೊಡುತ್ತಾರೆ. ಕವಿಯು ಕಾವ್ಯದ ಆರಂಭವನ್ನು ಶಿವನ ಮಹಿಮೆ, ಮಹತ್ವವನ್ನು ಹೊಗಳುವುದರಿಂದ ಸ್ತುತಿಸುವುದರಿಂದಲೇ ಪ್ರಾರಂಭವಾಗುತ್ತದೆ. ಎಲ್ಲ ಬಗೆಯ ಶಿಷ್ಟಕವಿಗಳು, ಜನಪದಕವಿಗಳು ತಮ್ಮ ಇಷ್ಟದೇವರನ್ನು ಕಾವ್ಯದ ಪ್ರಾರಂಭದಲ್ಲಿ ಸ್ತುತಿಸುವುದು ಸಾಮಾನ್ಯ. ಆದರೆ ಇದಕ್ಕೆ ಮುಂಚೆ ವಿದ್ಯಾಧಿದೇವತೆಗಳಾದ ಗಣೇಶ, ಶಾರದೆಯನ್ನು ಪ್ರಾರ್ಥಿಸಿದ ನಂತರವಷ್ಟೇ ತಮ್ಮ ಇಷ್ಟದೇವರನ್ನು ಪ್ರಾರ್ಥಿಸುತ್ತಾರೆ. ಆದರೆ ಚೋರಕಥೆ ಹಾಡಿನಲ್ಲಿ ಮೊದಲಿಗೆ ಶಿವನನ್ನು, ನಂತರ ಗಣಪತಿ, ಶಾರದೆಯನ್ನು ನೆನೆಯುತ್ತಾರೆ. ಶಿವನೇ ಆರಾಧ್ಯದೈವವಾದ ಕವಿ. ಶಿವನ ಹಲವು ನಾಮಸ್ಮರಣೆಗಳನ್ನು ಪ್ರಸಂಗಗಳನ್ನು ಹೇಳುತ್ತಲೇ ಕಥೆಯನ್ನು ಮುಂದುವರೆಸುತ್ತಾರೆ. ಹಾಗೂ ತನ್ನ ಹೆಸರನ್ನು 'ಕಸ್ತೂರಿಸಿದ್ಧನೆಂದು' ಹೇಳಿಕೊಂಡಿದ್ದಾನೆ. ಇವನು ಮಹಾಶಿವಭಕ್ತನೆಂಬುದು ಈತ ಕಾವ್ಯದಿಂದ ತಿಳಿದುಬರುತ್ತದೆ. ಇತರ ಶಿಷ್ಟಕವಿಗಳಂತೆ ಈತನು ಸಹ ತನ್ನ ಕಾವ್ಯವನ್ನು ಹೊಗಳಿಕೊಂಡಿದ್ದಾನೆ. ಈ ಹೊಗಳಿಕೆಯು ಸಹ ಇತರರಿಗಿಂತ ಭಿನ್ನವಾಗಿದೆ. ವೀಣೆಸ್ವರದಂತೆ, ಕೆನೆಹಾಲು, ಕಬ್ಬಿನರಸ, ಮಾವಿನರಸದಂತೆ ಮುಂತಾದ ಪದಗಳಿಂದ ಹೊಗಳಿಕೊಂಡಿದ್ದಾನೆ. ಈ ಕಾವ್ಯವು ಪ್ರಾಯದ ವಯಸ್ಕರ ಮನಸ್ಸಿನಲ್ಲಿನ ವಿಚಾರಗಳನ್ನು ಒಳಗೊಂಡಿದೆ. ಇದು ಇವನ ಕಾವ್ಯದ ಆಕರ್ಷಣೆಯ ಅಂಶಗಳಲ್ಲೊಂದು. ಹಾಗೆ ಕಾವ್ಯದ ಶೀರ್ಷಿಕೆಯೂ ಆಕರ್ಷಕವಾಗಿದೆ. ಕವಿಯು ಕಾವ್ಯವನ್ನು ಆರಂಭಿಸುವಾಗ "ನರಕೃತಿಯ ಪೇಳ್ವೆನೆಂದು ನಿಂದ್ಯವ ಮಾಡದೇ" ಕೇಳಿ ಎಂದು ಹೇಳಿದ್ದಾನೆ.

ಶಿಷ್ಟಕವಿಗಳ ರೀತಿಯ ರಚನಾ ವೈಖರಿಯನ್ನೇ ತನ್ನ ಕಾವ್ಯದಲ್ಲೂ ತಂದಿದ್ದಾನೆ. ಕಾವ್ಯದ ಮೊದಲಲ್ಲಿ ತನ್ನ ದೈವವನ್ನು ಸ್ತುತಿಸಿದ ಆನಂತರದ ಭಾಗದಲ್ಲಿ ಪಟ್ಟದ ವರ್ಣನೆಯನ್ನು ಮಾಡಿದ್ದಾನೆ. ಈತ ತನ್ನ ಕಾವ್ಯದಲ್ಲಿ ವರ್ಣನಾಪೂರಿತವಾದ ರಚನೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದಾನೆ. ಶಿಷ್ಟಕವಿಗಳಂತೆ ತನ್ನ ಕಾವ್ಯದ ಕಥಾನಾಯಕನನ್ನು ಪೌರಾಣಿಕ ವ್ಯಕ್ತಿಗಳಿಗೆ ಹೋಲಿಸಿ ಹೇಳುತ್ತಾನೆ. ಉದಾಹರಣೆಗೆ ಈ ರಾಜನಾದರೋ ಐಶ್ವರ್ಯದಲ್ಲಿ ಕುಬೇರನನ್ನು, ಶಾಂತಗುಣದಲ್ಲಿ ಬ್ರಾಹ್ಮಣರನ್ನು, ವನಿತೆಯರನ್ನು ಆಳುವುದರಲ್ಲಿ ವಸುದೇವ ಸುತನನ್ನು, ದಾನದಲ್ಲಿ ಕರ್ಣನನ್ನು ಎಂದು ಹೋಲಿಸುತ್ತಾ ಮಾತನಾಡುತ್ತಾನೆ.

"ಚೋರಸಹೋದರರ ಕಥೆ" ಎಂಬ ಗೀತೆಯ ರಚನೆಯನ್ನು ಅದರ ಕಾಲವನ್ನು ಕುರಿತು ಹೇಳುವುದಾದರೆ ನಿಷ್ಠನಾದ ಶಿವಭಕ್ತಿ, ಕಾವ್ಯರಚನೆಯಲ್ಲಿ ಬಳಸಿಕೊಂಡಿರುವಂತಹ ಸಾಹಿತ್ಯ ಪ್ರಕಾರಗಳನ್ನು ನೋಡಿದರೆ ಈತ ಲಿಂಗಾಯಿತನಿರಬೇಕೆಂದು ತಿಳಿದುಬರುತ್ತದೆ. ಇದಕ್ಕೆ ಪುಷ್ಠಿ ನೀಡುವಂತೆ ಬಸವಣ್ಣನ ಪ್ರಸ್ತಾಪವನ್ನು ಹಾಡಿನಲ್ಲಿ ಮಾಡಿದ್ದಾನೆ. ಹಾಡಿನ ಪಾತ್ರಗಳ ಮೂಲಕ ಕವಿ ತನ್ನ ಹಿಂದಿನ ವ್ಯಕ್ತಿಗಳ ಪೂರ್ವಕಥೆಯನ್ನು ತಿಳಿಸಿ ಅಂತಹವರೇ ಹೀಗಿರುವಾಗ ನಮ್ಮದೇನೂ

ಎಂದು ಹೇಳಿಸುತ್ತಾರೆ. ಜೊತೆಗೆ ಪೌರಾಣಿಕ ಕಾವ್ಯಗಳು, ವ್ಯಕ್ತಿಗಳನ್ನು ಪ್ರಸ್ತಾಪಿಸುತ್ತಾನೆ. ಉದಾಹರಣೆ ರಾಮಾಯಣ. ಮಹಾಭಾರತ (ರಾಮ. ಕೃಷ್ಣ. ಶಿವ)ಇತ್ಯಾದಿ. ಇದು ಕವಿಗೆ ರಾಮಾಯಣ. ಮಹಾಭಾರತದ ಕಾವ್ಯಗಳ ಮೇಲೆ ಅಗಾಧವಾದ ಒಲವು ಪರಿಚಯ ಸಾಕಷ್ಟಿದ್ದು ಅದನ್ನು ಅಭ್ಯಾಸ ಮಾಡಿದ್ದನು ಎಂಬುದನ್ನು ತಿಳಿದುಬರುತ್ತದೆ. ಹಾಗೆಯೇ ಕಲ್ಯಾಣದಲ್ಲಿ ಜಂಗಮರಿಗೆ ದಾಸೋಹವನ್ನು ನೀಡಿದ ಬಸವಣ್ಣನವರನ್ನು ಉದಾಹರಿಸುತ್ತಾನೆ. ಇದರಿಂದ ಈತ ಲಿಂಗಾಯಿತ ಜನಾಂಗಕ್ಕೆ ಸೇರಿದವನಾಗಿದ್ದಾನೆ. ಹಾಗೂ ೧೩ನೇ ಶತಮಾನದಿಂದ ಈಚಿನ ಕಾಲದಲ್ಲಿ 'ಚೋರ ಸಹೋದರರ ಕಥೆ' ಎಂಬ ಕಾವ್ಯವನ್ನು ರಚಿಸಿದ್ದಾನೆಂದು ತಿಳಿದುಬರುತ್ತದೆ. ಕಥೆಯ ಮಧ್ಯೆ ಕಾವ್ಯದ ಮುಂದುವರಿಕೆಗಾಗಿ ವಿಶಿಷ್ಟ ತಿರುವುಗಳನ್ನು ಕವಿ ಸೃಷ್ಟಿಸಿದ್ದಾನೆ. ಚೋರಕಥೆ ಕೇವಲ ಮನರಂಜನೆಯ ಇಲ್ಲವೇ ಧರ್ಮಪ್ರಸಾರದ ದೃಷ್ಟಿಯಿಂದ ಮಾತ್ರ ರಚನೆಯಾಗಿಲ್ಲ. ವೈಚಾರಿಕ ಮತ್ತು ತಾತ್ವಿಕ ಗುಣಗಳನ್ನು ಸಹ ಒಳಗೊಂಡು ಸಹೃದಯನನ್ನು ತಲುಪುವ ಪ್ರಯತ್ನವಿದೆ. ಚೋರಕಥೆ ಸಾಹಿತ್ಯಿಕ ಅಂಶಗಳನ್ನು ಒಳಗೊಂಡು ರಚನೆಯಾಗಿರುವಂತಹ ಕಾವ್ಯ ಸಾಹಿತ್ಯ ಪ್ರಕಾರಗಳಾದ ಉಪಮಾನ. ಉಪಮೇಯಗಳ ಬಳಕೆ ಕಾವ್ಯದಲ್ಲಿ ಸಾಕಷ್ಟಿದೆ. ಉದಾಹರಣೆಗೆ:–ಸೂರ್ಯಾಸ್ತವನ್ನು ಹಾಗೂ ರಾತ್ರಿ ಆಗುವ ಕಾಲವನ್ನು ಕವಿ ಸೊಗಸಾದ ಉಪಮಾನ, ಉಪಮೇಯಗಳಿಂದ ವಿವರಿಸಿದ್ದಾನೆ. ಕಾವ್ಯದ ಹಲವು ಕಡೆಗಳಲ್ಲಿ ವರ್ಣನಾತ್ಮಕ ರಚನೆಯ ಸಂದರ್ಭದಲ್ಲಿ ಇವುಗಳು ಹೆಚ್ಚಾಗಿ ಬಳಸಿಕೊಳ್ಳಲಾಗಿದೆ. ಕಾವ್ಯದ ಉದ್ದಗಲಕ್ಕೂ ಶಿವನ ಮಹಿಮೆ. ಆಶೀರ್ವಾದಗಳ ಪ್ರಸ್ತಾಪ ಬಹಳಷ್ಟಿದೆ. ಇದು ಐತಿಹಾಸಿಕ ಅಷ್ಟೇ ಅಲ್ಲದೇ ಧಾರ್ಮಿಕ ಅಂಶಗಳನ್ನು ಒಳಗೊಂಡಿರುವ ಕಾವ್ಯ. ಹಾಗಾಗಿಯೇ ಇಲ್ಲಿ ರಾಮ. ಕೃಷ್ಣ. ಶಿವ. ಇಂದ್ರ. ಚಂದ್ರ. ಸೂರ್ಯ ಎಲ್ಲ ದೇವತೆಗಳ ಪ್ರಸ್ತಾಪವನ್ನು ಕಾಣಬಹುದು. ಕಥೆಯ ಮುಂದುವರಿಕೆಗೆ ದೇವರನ್ನೇ ಮುಖ್ಯವಸ್ತುವಾಗಿ ಬಳಸಿಕೊಂಡಿದ್ದಾನೆ. ರಾಮಾಯಣ ಮಹಾಭಾರತದ ಹಲವು ಸನ್ನಿವೇಶ ಪ್ರಸಂಗಗಳನ್ನು ಬಳಸಿಕೊಂಡಿದ್ದಾನೆ. ಉದಾಹರಣೆಗೆ: ರಾವಣನ ಗುಣವನ್ನು ಆಂಜನೇಯ ಲಂಕೆಗೆ ಹೋಗುವಾಗ ಸಮುದ್ರ ಹಾರಿದ ಪರಿ ಇತ್ಯಾದಿ. ಮಹಾಕಾವ್ಯಗಳನ್ನಷ್ಟೇ ಅಲ್ಲದೆ ಇತರ ದೃಷ್ಟಾಂತಗಳನ್ನು ಒಳಗೊಂಡಿದೆ. ಹಾಗಾಗಿ ಕವಿಯೂ ಚೋರಕಥೆಯನ್ನು ರಚಿಸುವಲ್ಲಿ ಪ್ರಾಚೀನ ಪುರಾಣ ಸಂಗತಿಗಳನ್ನೆಲ್ಲವನ್ನೂ ತಮ್ಮ ಕಾವ್ಯದಲ್ಲಿ ಅಡಕವಾಗಿಸಿದ್ದಾರೆ. ಈ ಕಾವ್ಯವು ರಾಜಕುಮಾರರ ಅನೇಕ ಚಮತ್ಕಾರ, ಮಾಯಮಂತ್ರಗಳಿಂದ ಕೂಡಿದ ಸಾಹಸಗಳು ಮತ್ತು ರೋಮಾಂಚನಗೊಳಿಸುವ ಸನ್ನಿವೇಶಗಳು ಮತ್ತು ಅವುಗಳ ವರ್ಣನಾ ಭಾಗ ಇವುಗಳಿಂದ ಕೂಡಿದ ಅನೇಕ ಕುತೂಹಲಕರ ಸನ್ನಿವೇಶಗಳಿಂದ ಕೂಡಿದೆ. ಚೋರಕಥೆ ಕಾವ್ಯವನ್ನು ಪ್ರಾಚೀನ ಶಿಷ್ಟಕವಿಗಳ ಕಾವ್ಯದಿಂದ ಪ್ರೇರಿತನಾಗಿ ಅವರ ರಚನಾ ಮಾರ್ಗವನ್ನು ಅನುಸರಿಸಿ ರಚಿಸಲಾಗಿದೆ ಎಂಬುದಂತೂ ಮನದಟ್ಟಾಗುತ್ತದೆ. ಅಲ್ಲದೆ ಪುರಾಣ ಸಂಗತಿಗಳೆಲ್ಲದರ ಪ್ರಸ್ತಾಪವನ್ನು ತನ್ನ ಕಾವ್ಯದಲ್ಲಿ

ಮಾಡಿರುವುದನ್ನು ಕಾವ್ಯರಚನಾ ವಿಧಾನವನ್ನು ಗಮನಿಸಿದರೆ ವಿದ್ಯಾವಂತ ಕವಿಯೇ ಇಂತಹ ಕಾವ್ಯವನ್ನು ರಚಿಸಿದ್ದಾನೆಂದು ತಿಳಿಯುತ್ತದೆ. ಭಯ, ಚೇಷ್ಟೆ, ಕುತೂಹಲ, ಹಾಸ್ಯ ಎಲ್ಲವನ್ನು ಒಳಗೊಂಡು ರಚಿಸಲಾಗಿರುವ ಈ ಕಾವ್ಯ ಓದುಗನಿಗೆ ಸಂಪೂರ್ಣ ಮನರಂಜನೆಯನ್ನು ಒದಗಿಸುತ್ತದೆ. ಹಿಂದಿನ ಪ್ರಸಂಗ ಸನ್ನಿವೇಶವನ್ನು ಮಾಡಿಕೊಡಲು ಅಲ್ಲಲ್ಲಿ ವಚನಗಳನ್ನು ಬಳಸಲಾಗಿದೆ.

ಉದಾ:- ಅಣ್ಣ-ತಮ್ಮಂದಿರಿಬ್ಬರ ಚಮತ್ಕಾರಗಳಿಂದ ತಣ್ಣಗಾದ ರಾಜ ಅವರೊಡನೆ ತಾನು ಹೋರಾಡಲು ಸಾಧ್ಯವಿಲ್ಲವೆಂಬುದು ತಿಳಿದು ಒಂದು ಉಪಾಯವನ್ನು ಮಾಡುತ್ತಾನೆ. ಪಟ್ಟಣದ ಹೊರಗಿರುವ ಗ್ರಾಮ ಸಿಂಹವನ್ನು ಯಾರು ಕೊಲ್ಲುತ್ತಾರೋ ಅವರಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡುವುದಾಗಿ ಊರ ತುಂಬಾ ಡಂಗೂರ ಸಾರಿಸುತ್ತಾನೆ. ಈ ವೇಳೆಯಲ್ಲಿ ಕಥೆಯನ್ನು ಮುಂದುವರೆಸಲು ಕವಿ ವಚನದ ಬಳಕೆಯನ್ನು ಮಾಡಿದ್ದಾನೆ. ಸಾಹಿತ್ಯಿಕ ಅಂಶವನ್ನಾಗಿ ಕಂದಪದ್ಯವನ್ನು ಗಮನಿಸಬಹುದು. ಜೊತೆಗೆ ಸೀಸಪದ್ಯ ಯಕ್ಷಗಾನದ ಹಾಡುಗಳಲ್ಲಿ ವಿರಳವಾಗಿ ಬಳಕೆಗೊಳ್ಳುತ್ತವೆ. ಹೆಚ್ಚಾಗಿ ಕಂದಪದ್ಯಗಳನ್ನು ಕಾವ್ಯ ರಚನೆಯಲ್ಲಿ ಬಳಸಿಕೊಳ್ಳಲಾಗುತ್ತದೆ. ಸೀಸಪದ್ಯವೊಂದನ್ನು ರಚಿಸಿ ಅದರಲ್ಲಿ ನಾನಾರೀತಿಯ ಶೃಂಗಾರರಸವನ್ನು ತರಲಾಗಿದೆ.

ಕಾವ್ಯರಚನೆಯ ಕಾಲದಲ್ಲಿ ನಾಗರೀಕತೆಯಾದ ಬೆಳವಣಿಗೆಯ ಹಂತದಲ್ಲಿದ್ದು ಎಂಬುದನ್ನು ತಿಳಿಯಲು ಸಾಧ್ಯ. ಒಂದು ಪ್ರಸಂಗದಲ್ಲಿ ಚಿತ್ರರಾಜಶೇಖರನು ಒಲೆಯನ್ನು ಹತ್ತಿಸುವಾಗ ಕಲ್ಲುಗಳನ್ನು ಉಜ್ಜಿ ಬೆಂಕಿಯನ್ನು ಪಡೆಯುವುದು. ಕಾವ್ಯದ ರಚನೆಯ ಕಾಲವನ್ನು ನಾಗರೀಕತೆ ಇದ್ದ ಸ್ಥಿತಿಯನ್ನು ಹೇಳುತ್ತದೆ. ಜನಪದೀಗರ ರಚನೆ ಎಂದೇ ತಿಳಿದಿರುವ ಮಾಟ, ಮಂತ್ರ, ವಶೀಕರಣ, ಅಂಜನ ಹಾಕುವುದು ಹೀಗೆ ಅನೇಕ ವಿಷಯವನ್ನು. ಕಾವ್ಯವನ್ನು ಆಕರ್ಷಕವಾಗಿ ರಚಿಸಲು ಬಳಸಿಕೊಂಡಿದ್ದಾನೆ. ಕಥೆಯನ್ನು ಹಿಂದೂ ಸಂಪ್ರದಾಯದ ಸಂಸ್ಕೃತಿಯಂತೆ 'ಶುಭಂ' ಹಾಗೆ ಮುಗಿಸುತ್ತಾನೆ. ಕವಿಯೂ ಹಾಡಿನಲ್ಲಿ ಅನೇಕ ತಿರುವುಗಳನ್ನು ತರುವುದರ ಮೂಲಕ ಕಾವ್ಯವನ್ನು ದೀರ್ಘಕಥನ ಗೀತೆಯಾಗಿಸಿದ್ದಾನೆ.

ಹಿಂದಿನ ಕಾಲದಲ್ಲಿ ಕಾವ್ಯರಚನೆಯಲ್ಲಿ ಅಲಂಕಾರ, ವರ್ಣನೆ, ರಸಯುಕ್ತವಾದ ಅಂಶಗಳಿದ್ದಾಗ ಮಾತ್ರ ಅದು ಒಳ್ಳೆಯ ಕಾವ್ಯ ಎನಿಸಿಕೊಳ್ಳುತ್ತಿತ್ತು. ಪ್ರಾಚೀನ ಮಹಾಕಾವ್ಯಗಳಿಂದ ಪ್ರೇರಿತನಾದ ಚೋರಕಥೆ ಕಾವ್ಯದ ರಚನಾಕಾರ ಅಲಂಕಾರಗಳನ್ನು ನವರಸಗಳನ್ನು ಒಳಗೊಂಡ ರಸಾನುಭವವನ್ನು ಉಂಟು ಮಾಡುವಂತಹ ಕಾವ್ಯರಚನೆಯನ್ನು ಮಾಡಿದ್ದಾನೆ. ಈ ಕಥನಗೀತೆಯಲ್ಲಿ ಶೃಂಗಾರ, ಹಾಸ್ಯ, ಕರುಣಾ, ರೌದ್ರ, ವೀರ, ಭೀಭತ್ಸ, ಭಯಾನಕ, ಅದ್ಭುತ, ಶಾಂತಿ ನವರಸಗಳನ್ನು ತಂದಿರುವುದು. ಕವಿಯ ಅಪೂರ್ವ ಸೃಜನಶೀಲ ಪ್ರತಿಭಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ.

[illegible]

ಕಥನಗೀತೆಗಳನ್ನು ಸುಖಾಂತ್ಯವಾಗಿ ಮಂಗಳಗೀತೆಯನ್ನು ಹಾಡುವುದರ ಮೂಲಕ ಮುಗಿಸುತ್ತಾನೆ. ಅಲ್ಲಿಯೂ ಸಹ ರಾಜಕುಮಾರರ ಗುಣಗಳನ್ನು ಹಾಡಿಹೊಗಳುತ್ತಾನೆ. ಚೋರರಾಗಿದ್ದಂತಹ ರಾಜರು ಮುಂದೆ ಸನ್ನಡತೆಯಿಂದ ಸುಭದ್ರರಾಜ್ಯವನ್ನು ಒಳ್ಳೆಯ ಆಳ್ವಿಕೆಯನ್ನು ನಡೆಸುವುದನ್ನು ಕಾಣಬಹುದು. ಐತಿಹಾಸಿಕ ವಿಷಯಗಳನ್ನು ಒಳಗೊಂಡ ಬೃಹತ್ ಕಥನಗೀತೆ ಇದಾಗಿದೆ.

ಅಡಿ ಟಿಪ್ಪಣಿ

೧. ಚೆನ್ನಬಸವನಾವಲಗಿ : (ಸಂ) ಶಕುಂತಲ ಚೆನ್ನಬಸಪ್ಪ , ಪುಟ–viii . ೨೦೦೨

೨. ವಾಗೀಶ್ವರಿ ಶಾಸ್ತ್ರಿ : ಹೃದಯ ಸಂಪುಟ, ೨ನೇ ಮುದ್ರಣ, ಪುಟ–೮೮೯. ೨೦೦೮

೩. ವಾಗೀಶ್ವರಿ ಶಾಸ್ತ್ರಿ : ಹೃದಯ ಸಂಪುಟ, ೨ನೇ ಮುದ್ರಣ, ಪುಟ–೮೮೯. ೨೦೦೮

ಅಧ್ಯಾಯ – ೫

ಮಕ್ಕಳಸಾಹಿತ್ಯ

ಪ್ರಪಂಚದ ಎಲ್ಲಾ ದೇಶಗಳಲ್ಲೂ, ಭಾಷೆಗಳಲ್ಲೂ ಮಕ್ಕಳ ಸಾಹಿತ್ಯವನ್ನು ಕಾಣಬಹುದು. ವೈವಾಹಿಕ ಜೀವನದ ಮುಖ್ಯ ಉದ್ದೇಶ ಸಂತಾನೋತ್ಪತ್ತಿ ಹಾಗೂ ಸುಖ, ಬಯಕೆಗಳ ಈಡೇರಿಕೆ. ಮನುಷ್ಯನಿಗೆ ತನ್ನ ಮಕ್ಕಳ ಬಗ್ಗೆ, ಪ್ರಾಣಿಗಳಿಗೆ ತನ್ನ ಮರಿಗಳ ಬಗ್ಗೆ ಕಾಳಜಿ. ಆಸಕ್ತಿ. ಪ್ರೀತಿ ಭಾವನಾತ್ಮಕವಾಗಿ, ನೈಸರ್ಗಿಕವಾಗಿ ಬಂದಿರುವ ಸಹಜಗುಣ. ಆದರೆ ಮನುಷ್ಯ ಬುದ್ಧಿಜೀವಿಯಾದ್ದರಿಂದ ತನ್ನ ಮಕ್ಕಳ ಪಾಲನೆ–ಪೋಷಣೆಯಲ್ಲಿ ಪ್ರಾಣಿವರ್ಗಕ್ಕಿಂತ ಭಿನ್ನಮಾರ್ಗವನ್ನು ಅನುಸರಿಸುತ್ತಾನೆ. ತನ್ನ ಜೀವದ ಹಂಗುತೊರೆದು ಮಕ್ಕಳ ರಕ್ಷಣೆಯನ್ನು, ಬೆಳವಣಿಗೆಯನ್ನು ಅಪೇಕ್ಷಿಸುತ್ತಾರೆ. ಈ ಗುಣವನ್ನು ಪ್ರಾಣಿ. ಪಕ್ಷಿಗಳಲ್ಲೂ ಕಾಣಬಹುದು.

ಉದಾ:– ಗ್ರಾಮೀಣ ಪರಿಸರದಲ್ಲಿ ಹಸು, ಕುರಿ, ಕೋಳಿ, ಮುಂತಾದ ಪ್ರಾಣಿಗಳ ಸಾಕುವಿಕೆ ಸಾಮಾನ್ಯ. ಅವುಗಳ ತಮ್ಮ ಮರಿಗಳ ವಿಷಯದಲ್ಲಿ ವಹಿಸುವ ಸೂಕ್ಷ್ಮ ಕಾಳಜಿಯನ್ನು ಗಮನಿಸಿದರೆ ತಿಳಿದುಬರುತ್ತದೆ. ಕಾಗೆಯೂ, ಗಿಡುಗನೋ, ನಾಯಿಯೋ ಹೀಗೆ ಯಾವುದಾದರೂ ಪ್ರಾಣಿ ಪಕ್ಷಿಗಳು ಕೋಳಿ ಮರಿಗಳಿಗೆ ತೊಂದರೆ ಕೊಡಲು, ತಿನ್ನಲು ಹೋದಾಗ ತಾಯಿಯೂ ತೀವ್ರಸ್ವರೂಪದ ಹೋರಾಟ ಮಾಡುತ್ತದೆ. ತನ್ನ ರೆಕ್ಕೆಗಳ ಒಳಗೆ ಮರಿಗಳನ್ನು ಅವಿಚಿಟ್ಟುಕೊಂಡು ರಕ್ಷಣೆ ನೀಡುತ್ತದೆ.

ಮಕ್ಕಳ ಸಾಹಿತ್ಯದಲ್ಲಿ ಮಕ್ಕಳನ್ನೇ ಕೇಂದ್ರವಾಗಿರಿಸಿಕೊಂಡು ಕಾವ್ಯ ರಚಿಸಲಾಗುತ್ತದೆ. ಪ್ರಾಚೀನ ಕಾಲದಿಂದ ಮಕ್ಕಳಿಗಾಗಿ ಸರಳ ಕಥೆಗಳನ್ನು, ಹಾಡುಗಳನ್ನು ಸೃಷ್ಟಿಸುತ್ತಾ ಬಂದಿದ್ದಾರೆ. ಉದಾ:– ದುರ್ಗಸಿಂಹನ ಪಂಚತಂತ್ರ, ಮಕ್ಕಳಿಗೆ ನೀತಿಬೋಧನೆಯನ್ನು, ಮನರಂಜನೆಯನ್ನು ಒದಗಿಸುವ ಕೃತಿ. ಮಕ್ಕಳ ಸಾಹಿತ್ಯದಲ್ಲಿ ಎರಡು ಬಗೆಯನ್ನು ಕಾಣಬಹುದು.

೧. ಮಗುವು ಹುಟ್ಟಿದಾಗಿನಿಂದ ಎರಡು–ಮೂರು ವರ್ಷ ತುಂಬುವವರೆಗೂ ಮಗುವಿನ ಚಲನವಲನಗಳನ್ನು ಗಮನಸಿದ ತಾಯಿ ಮಗುವನ್ನು ಸಂತೋಷಪಡಿಸಲು, ಆಟವಾಡಿಸಲು, ಅತ್ತಾಗ ಸಮಾಧಾನ ಮಾಡಲು ಜನನದ ಕೆಲವು ತಿಂಗಳಿನಿಂದ ವರ್ಷಗಳವರೆಗೆ ನಡೆಸುವ ವಿವಿಧ ಶಾಸ್ತ್ರಗಳಲ್ಲಿ ತಾಯಿ, ಮನೆಯ ಹಿರಿಯರು ಮಗುವಿಗಾಗಿ ಹಾಡುವ ಹಾಡುಗಳು.

೨. ಮಕ್ಕಳು ಬೆಳೆ ಬೆಳೆಯುತ್ತಾ ನಾಲ್ಕೈದು ವರ್ಷ ದಾಟಿದ ಮೇಲೆ ಅವರ ಅರಿವನ್ನು ವಿಸ್ತಾರಗೊಳಿಸಲು, ಮನರಂಜಿಸಲು ಹಬ್ಬಹರಿದಿನಗಳಲ್ಲಿ ಸ್ವತಃ ಮಕ್ಕಳಿಂದಲೇ ಹಾಡಿಸುವ ಹಾಡುಗಳು.

ಶಿಷ್ಟ ಸಾಹಿತ್ಯದಲ್ಲಿ ಈ ಬಗೆಯಾಗಿ ಮಕ್ಕಳಿಗೆ ಕಲಿಸಿ ಹಾಡುವಂತಹ ಹಾಡುಗಳ ರಚನೆಗಳು ಕಂಡುಬರುವುದಿಲ್ಲ. ನಗು ತರಿಸುವಂತಹ, ನೀತಿಬೋಧಿಸುವಂತಹ ಕಥೆಗಳನ್ನು ಕಾಣಬಹುದು. ಆದರೆ ಜನಪದ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯಕ್ಕೆ ಹೆಚ್ಚು ಒತ್ತನ್ನು ನೀಡಲಾಗಿದೆ. ಇಲ್ಲಿ ಶಿಷ್ಟ ಜಾನಪದವಾಗಲಿ, ಗ್ರಾಮೀಣ ಜಾನಪದವಾಗಲಿ, ಮಕ್ಕಳ ಸಾಹಿತ್ಯಕ್ಕೆ ಪ್ರಾಶಸ್ತ್ಯವಿದೆ. ಇದು ಜಾನಪದೀಗರಲ್ಲಿ ಮಕ್ಕಳಿಗೆ ನೀಡಿರುವ ಸ್ಥಾನವನ್ನು ತಿಳಿಸುತ್ತದೆ. ಮಕ್ಕಳಿರುವ್ವ ಮನೆ ತುಂಬ ಎನ್ನುವುದು ಜನಪದಿಗರ ಮನಸ್ಸು.

ವಾಗೀಶ್ವರಿಯವರ 'ಹೃದಯಸಂಪುಟ'ದಲ್ಲಿ ಮಕ್ಕಳಿಗಾಗಿ ತಾಯಿ ಹಾಡುವ, ಮಕ್ಕಳು ತಾವೇ ಹಾಡಿಕೊಂಡು ಸಂತೋಷ ಪಡುವ ಎರಡು ಬಗೆಯ ಹಾಡುಗಳನ್ನು ಕಾಣಬಹುದು. ಅತಿ ಮಡಿವಂತ ಬ್ರಾಹ್ಮಣ ಸಂಪ್ರದಾಯದಲ್ಲಿ ಬಸಿರು, ಬಾಣಂತನ, ಮಕ್ಕಳ ಪೋಷಣೆ, ವಾತ್ಸಲ್ಯ, ಪ್ರೀತಿ, ಮುದ್ದಿಸುವ ಸಂದರ್ಭದಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ಹಾಡುಗಳಿವೆ. ಮಗು ಬಾಣಂತಿಯರಿಗೆ ಮನೆಮಂದಿಯೆಲ್ಲಾ ನಿಂತು ಹಾರೈಕೆ ಮಾಡುವುದು ಎಲ್ಲಾ ಮನೆಯಲ್ಲಿ ಸರ್ವೇಸಾಮಾನ್ಯ.

ಅ. ಬಾಣಂತಿಯರು ಕುಯಿಲು ಹೋಗುವ ಹಾಡು:-

ಬಾಣಂತಿಯ ಮಗುವಿನ ದೃಷ್ಟಿಯಿಂದ ಕೆಲವು ಆಚರಣೆಗಳನ್ನು ಅನುಸರಿಸುತ್ತಾ ಅದು ವೈಜ್ಞಾನಿಕವಾಗಿದ್ದು ಇಬ್ಬರ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ರೂಪಿಸಿಕೊಂಡಿರುವ ಶಾಸ್ತ್ರಗಳಾಗಿ ಪರಿಗಣಿಸಬಹುದು. ತಾಯಿ-ಮಗು ಇಬ್ಬರಿಗೆ ಯಾವುದೇ ರೀತಿ ಸೋಂಕು ತಾಗದಿರಲಿ ಎಂದು ಕತ್ತಲೆ ಕೋಣೆಯಲ್ಲಿಟ್ಟು ಹರಳೆಣ್ಣೆ ದೀಪವನ್ನು ಹಚ್ಚಿ ಶಾಂತ ವಾತಾವರಣವನ್ನು ಇಬ್ಬರಿಗೂ ಕಲ್ಪಿಸಿಕೊಡಲಾಗುತ್ತದೆ. ಯಾವುದೇ ಕಾಯಿಲೆಗಳು ಬರದ ಹಾಗೆ ಒಂದು ವೇಳೆ ಬಂದರೆ ಅದನ್ನು ಹೋಗಲಾಡಿಸಲು ಮನೆಯಲ್ಲಿಯೇ ಔಷಧಿಗಳನ್ನು ತಯಾರಿಸುತ್ತಿದ್ದರು.

ಬ್ರಾಹ್ಮಣ ಸಂಪ್ರದಾಯದಲ್ಲಿ ಮಗು-ತಾಯಿ ಇಬ್ಬರಿಗೂ ವಿವಿಧ ಹೆಸರುಗಳಲ್ಲಿ ಆರತಿಗಳನ್ನು ಮಾಡುತ್ತಿರುತ್ತಾರೆ. ಮಗುವು ಹಟ, ಚಂಡಿ ಹಿಡಿದಾಗ 'ರಚ್ಚೆನೀರು' ಎಂದು ಆರತಿ ಮಾಡಿ ಆ ನೀರನ್ನು ಆಚೆ ಹಾಕುತ್ತಾರೆ. ಅಲ್ಲಿಗೆ ದೃಷ್ಟಿಯೇನಾದರೂ ಆಗಿದ್ದರೆ ಪರಿಹಾರವಾಯಿತು ಎಂಬುದು ಅವರ ನಂಬಿಕೆ. ಹಸಿಬಾಣಂತಿ ಆರೋಗ್ಯವಂತಳಾಗಿರಲಿ ಎಂದು 'ಕುಶದ ಆರತಿ'ಯನ್ನು ಮಾಡುತ್ತಾರೆ. ಮಗುವು ಹುಟ್ಟಿದ ದಿನದಿಂದ ಹನ್ನೊಂದು ದಿನದವರೆಗೂ ದಿನವಯ ಒಂದೊಂದು ಶಾಸ್ತ್ರಗಳನ್ನು ನೆರವೇರಿಸುತ್ತಾರೆ. ಎಂಟು ದಿನ ಕಳೆದು ಒಂಭತ್ತನೇ ದಿನವಾಗಲು ತಾಯಿ ಮಗುವು ಆರೋಗ್ಯವಂತರಾಗಿದ್ದು ಯಾವುದೇ ತೊಂದರೆಗಳಾಗದಿದ್ದಕ್ಕೆ 'ಗೆದ್ದ ವೀಳ್ಯ ಎಂಬ ಶಾಸ್ತ್ರವನ್ನು ಮಾಡಿ, ಎಲೆ, ಅಡಿಕೆ, ಕೊಬ್ಬರಿ, ಸಕ್ಕರೆಯನ್ನು ಹಂಚುತ್ತಾರೆ. ಹತ್ತನೆಯ ದಿನ 'ಕಡುಬಿನ ಬಾಗಿನದ ಆರತಿ' ಮಾಡುತ್ತಾರೆ. ಹನ್ನೊಂದನೆ ದಿನದಂದು ಅಷ್ಟು ದಿನಗಳವರೆಗೂ ಸ್ನಾನ ಮಾಡಿಸದೇ ಇದ್ದ

ಬಾಣಂತಿಗೆ ಅಂದು ಸ್ನಾನದ ಶಾಸ್ತ್ರವನ್ನು ಮಾಡುತ್ತಾರೆ. ಆ ಸಂದರ್ಭದಲ್ಲಿ ಕುಯಿಲು ಹೋಗುವುದು ಎನ್ನುವ ಆಚರಣೆಯೊಂದನ್ನು ನಡೆಸುತ್ತಾರೆ. ಅಷ್ಟು ದಿನಗಳಿಂದ ಕತ್ತಲೆಯ ಕೋಣೆಯಲ್ಲೇ ಇದ್ದ ತಾಯಿಗೆ ಅಂದು ಸೂರ್ಯನ ದರ್ಶನಕ್ಕೆ ಅವಕಾಶ ನೀಡುತ್ತಾರೆ.

ಕತ್ತಲೆಯ ಕೋಣೆಯಿಂದ ಎಲ್ಲರ ಕಣ್ಣಿನ ಮುಂದೆ ಕಾಣಿಸಿಕೊಳ್ಳುವ ಬಾಣಂತಿಗೆ ದೃಷ್ಟಿಯಾಗುವುದನ್ನು ತಪ್ಪಿಸಲು ಅಣಕುತಾಯಿ–ಮಗುವನ್ನು ಸೃಷ್ಟಿಸುತ್ತಾರೆ. ತಾಯಿಯನ್ನಾಗಿ. ಇನ್ನೂ ಮಕ್ಕಳಾಗದ ಇಲ್ಲವೇ ಮದುವೆಯಾಗಿರದ ಹೆಣ್ಣು ಮಕ್ಕಳನ್ನು ಮಗುವಾಗಿ ಗುಮಡಕಲ್ಲನ್ನು ಈ ಶಾಸ್ತ್ರಕ್ಕೆ ಆರಿಸಿಕೊಳ್ಳುತ್ತಾರೆ. ಯಾವುದೇ ಪೂಜೆಯು ಮೊದಲು ಇವರಿಗೆ ಮಾಡಿ ನಂತರ ಅವರ ಹಿಂದೆ ನಿಜವಾದ ಬಾಣಂತಿಗೆ ಶಾಸ್ತ್ರ ಮಾಡಿಸುತ್ತಾರೆ. ಜೊತೆಗೆ ಅವಳಿಗೆ ಆರಿಸಿಕೊಳ್ಳುತ್ತಾರೆ. ಯಾವುದೇ ಪೂಜೆಯು ಮೊದಲು ಇವರಿಗೆ ಮಾಡಿ ನಂತರ ಅವರ ಹಿಂದೆ ನಿಜವಾದ ಬಾಣಂತಿಗೆ ಶಾಸ್ತ್ರ ಮಾಡಿಸುತ್ತಾರೆ. ಜೊತೆಗೆ ಅವಳಿಗೆ ದೃಷ್ಟಿಯಾಗದಿರಲಿ ಎಂಬುದು ಈ ನಕಲಿ ತಾಯಿ–ಮಗುವಿನ ಸೃಷ್ಟಿಗೆ ಕಾರಣ. ಈ ವೇಳೆಯಲ್ಲಿ ಕುಡುಗೋಲನ್ನು ಹಿಡಿದುಕೊಂಡು ಸೂರ್ಯನ ದರ್ಶನದ ಜಾಗಕ್ಕೆ ಬರುತ್ತಾಳೆ. ಬೇವಿನಸೊಪ್ಪು, ಸುಣ್ಣ ಮತ್ತು ಅರಿಶಿನ ಕದಡಿದ ನೀರನ್ನು ಅಂದು ಸ್ನಾನಕ್ಕೆ ಬಳಸುತ್ತಾರೆ. ಮನೆಯ ಅಂಗಳವನ್ನು ರಂಗೋಲೆಯಿಂದ ಸಿಂಗರಿಸಿ. ನಾಲ್ಕು ದಿಕ್ಕಿಗೂ ಭೂತ ಬಲಿಗಾಗಿ ನೆನೆಸಿದ ಕಡಲೆ. ಅಡಿಕೆ, ಎಲೆ, ಇಡುತ್ತಾರೆ. ನಂತರದಲ್ಲಿ ಸೂರ್ಯನಿಗೆ ಅರ್ಘ್ಯಕೊಟ್ಟು ನಮಸ್ಕರಿಸಿ ಸ್ನಾನಕ್ಕೆ ಒಳಹೋಗುವಾಗ ಹಿಂತಿರುಗಿ ನೋಡುತ್ತಾ ಹೋಗಬೇಕು. ಹೀಗೆ ಹಿಂತಿರುಗಿ ನೋಡುವುದರ ಒಂದು ಉದ್ದೇಶವಿದೆ. ಮತ್ತೆ ಮಕ್ಕಳಾಗಬೇಕೆಂಬ ಆಸೆ. ಸಂಪ್ರದಾಯಸ್ಥ ಜನಪದೀಯರಲ್ಲಿ ಮಕ್ಕಳ ಬಗೆಗೆ ಎಷ್ಟು ಆಸೆ, ಕಾಳಜಿ ಇತ್ತು ಎಂಬುದಕ್ಕೆ ಈ ಶಾಸ್ತ್ರ ಸಾಕ್ಷಿಯಾಗಿದೆ. ಒಂದು ಎರಡು ಮಕ್ಕಳನ್ನು ಸುಧಾರಿಸಿ ಪೋಷಿಸುವುದೇ ಕಷ್ಟ ಎನ್ನುವ ಈ ಕಾಲದಲ್ಲಿ ಅಂದು ಅವರು ಮಕ್ಕಳ ಬಗೆಗೆ ಅಪಾರಮೋಹವಿತ್ತು ಎಂದು ತೋರಿಸುತ್ತದೆ. ಈ ಆಚರಣೆಯ ಸಮಯದಲ್ಲಿ ಬಾಣಂತಿಯರ 'ಕುಯಿಲು ಹೋಗುವ ಹಾಡ'ನ್ನು ಹಾಡುತ್ತಾರೆ. ಈ ಶಾಸ್ತ್ರ ತಾಯಿ ಮಗುವಿನ ದೃಷ್ಟಿಯಲ್ಲಿ ಮಾನಸಿಕವಾಗಿ. ದೈಹಿಕವಾಗಿ. ವೈಜ್ಞಾನಿಕವಾಗಿ ಅವಶ್ಯವಾದದ್ದು. ಮಗುವಿಗೆ ಜನ್ಮ ನೀಡಿದ ತಾಯಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಹೊಂದಿರುವ ಗೊಂದಲಗಳಿಗೆ ನಿವಾರಣೆಯನ್ನು ನೀಡುತ್ತದೆ. ಹಾಗಾಗಿ ಈ ಹಾಡನ್ನು ಒಂದು ಜನಾಂಗದ ಸಂಪ್ರದಾಯ ಸಂಸ್ಕೃತಿಯ ದೃಷ್ಟಿಯಲ್ಲಿ ಗಮನಿಸಬಹುದು.

ದಶರಥ ರಾಮರ ಸತಿಸುತರಿಗೆ । ದಶರಾತ್ರಿ ಆಗಿರಲೂ
ಹೊಸಮಿಸಣಿ ಮಾಣಿಕ್ಯದಾ । ಹೊಸ ಮುತ್ತು
ಹೊಸ ಮುತ್ತಿನಾ ಕುಯಿಲಾ । ರಚಿಸಿದರೆ ಒಂದು ನಿಮಿಷಾದಿ ॥

ಈ ಶಾಸ್ತ್ರವು ಬಾಣಂತಿಗೆ ಮಾನಸಿಕವಾಗಿ ಧೈರ್ಯವನ್ನು ತುಂಬುತ್ತದೆ. ಇಂತಹ ಸಂಪ್ರದಾಯ ಎಲ್ಲಾ ವರ್ಗ, ಜನಾಂಗದಲ್ಲಿ ಕಂಡುಬರುವುದಿಲ್ಲ.

ಆ. 'ತೊಟ್ಟಿಲು ಶಾಸ್ತ್ರದ ಹಾಡು':–

ತೊಟ್ಟಿಲು ಶಾಸ್ತ್ರವನ್ನು ಎಲ್ಲಾ ಜಾತಿಯವರಲ್ಲೂ ಆಚರಿಸುವ ಶಾಸ್ತ್ರ ಮಗುವು ಹುಟ್ಟಿದ ಹನ್ನೊಂದನೆಯ ದಿನದಂದು ತೊಟ್ಟಿಲನ್ನು ಸಿಂಗರಿಸಿ, ತೊಟ್ಟಿಲಿಗೆ ಪೂಜೆ ಮಾಡಿ ಮಗುವನ್ನು ಅದರಲ್ಲಿ ಹಾಕಿ ತೂಗುತ್ತಾರೆ. ಅಂದು ಮುತ್ತೈದೆಯರನ್ನೆಲ್ಲಾ ಕರೆದು ಅರಿಶಿನ ಕುಂಕುಮ, ಎಲೆ, ಅಡಿಕೆಯನ್ನು ಕೊಟ್ಟು ಸತ್ಕರಿಸುತ್ತಾರೆ. ಹುಟ್ಟಿದಾಗಿನಿಂದ ತಾಯಿಯ ಮೈಶಾಖದಲ್ಲಿ ಬೆಚ್ಚಗಿದ್ದ ಮಗುವನ್ನು ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಮಾಡಲು ಹಾಗೂ ತಾಯಿಯು ಆರಾಮವಾಗಿ ಮಲಗಿ ಸುಧಾರಿಸಿಕೊಳ್ಳಲಿ ಎಂಬ ಕಾರಣಕ್ಕೆ ತೊಟ್ಟಿಲಕ್ಕೆ ಹಾಕಲಾಗುತ್ತದೆ. (ತೊಟ್ಟಿಲು ಶಾಸ್ತ್ರದಲ್ಲಿ ಬ್ರಾಹ್ಮಣ ಸಂಪ್ರದಾಯ) ಮೇಲೆ ತಿಳಿಸಿದ ಶಾಸ್ತ್ರವನ್ನು ಮುಂದುವರೆದು ಇನ್ನು ಕೆಲವು ಆಚರಣೆಗಳನ್ನು ಮಾಡುತ್ತಾರೆ. 'ಬಜಬೆಣ್ಣೆ ತಿನಿಸುವ' ಶಾಸ್ತ್ರ ತೊಟ್ಟಿಲಶಾಸ್ತ್ರದ ದಿನ ಸಾಧ್ಯವಾದಷ್ಟು ಮನೆಗಳಿಗೆ ಕನಿಷ್ಟಪಕ್ಷ ಐದುಮನೆಗಳಿಗಾದರೂ ಹೋಗಿ "ಮಗುವಿಗೆ ಬಜೆಬೆಣ್ಣೆಗೆ ಹಾಲು ಬೆಣ್ಣೆ ಕೊಡಿ" ಎಂದು ಬೇಡಿ ಬರುವ ಪದ್ಧತಿ ಇದೆ. ಈ ಶಾಸ್ತ್ರದ ಉದ್ದೇಶ ಮಕ್ಕಳು ದಷ್ಟಪುಷ್ಟವಾಗಿ ಬೆಳೆಯಲಿ ಎಂದು.

ಬಜಬೆಣ್ಣೆ ತಿನ್ನಿಸುವ ಹಾಡು

ಬಜಬೆಣ್ಣೆ ಇಡುವೆನು ಬಾರೋ ರಂಗ । ಬಜಬೆಣ್ಣೆ ಇಡುವನು ಬಾರೋ ॥

ಬಜ ಬೆಣ್ಣೆ ಇಡುವೆನು ನಿಜರೂಪ ತೋರೆನಗೆ । ಭಜನೆಯ ಮಾಡಿ

ನಾ ನೋಡುವೆ ರಂಗ ॥

ಆ. ಕಪ್ಪನಿಟ್ಟ ಹಾಡು :–

ತೊಟ್ಟಿಲು ಶಾಸ್ತ್ರದ ದಿನದಂದು ಕಪ್ಪನಿಡುವ, ಕಿವಿ ಚುಚ್ಚುವ ಶಾಸ್ತ್ರವನ್ನು ಮಾಡುತ್ತಾರೆ. ಕಪ್ಪು ಬಣ್ಣವನ್ನು ಕರಾಳ, ದುಃಖ, ರಕ್ಷೆ ಹಲವು ಅರ್ಥಗಳಲ್ಲಿ ಬಳಸಿಕೊಳ್ಳಲಾಗುತ್ತದೆ. ಚಿಕ್ಕಮಕ್ಕಳಿಗೆ ಕಪ್ಪನ್ನಿಡುವುದು ವಾಡಿಕೆ. ದೃಷ್ಟಿ ತಾಗದಂತಿರಲು ಎಂದು ಅದನ್ನು ಇಡಲಾಗುತ್ತದೆ. ಎಲ್ಲ ತಾಯಂದಿರು ತಮ್ಮ ಮಕ್ಕಳನ್ನು ರಾಮ, ಕೃಷ್ಣರಂತಹ ಗುಣವನ್ನು ಹೊಂದಬೇಕೆಂದು ಬಯಸುತ್ತಾರೆ. ತುಂಟತನ, ಚೇಷ್ಟೆಗಳಿಗೆ ಕೃಷ್ಣ ಹೆಸರು ವಾಸಿಯಾಗಿದ್ದಾನೆ. ವೈದಿಕ ಸಂಪ್ರದಾಯಕ್ಕೆ ಸಂಬಂಧಿಸಿದ ಹಾಡುಗಳಾಗಿದ್ದರಿಂದ ಕೃಷ್ಣನ ಭಕ್ತರು ಕೃಷ್ಣನ ಬಾಲಲೀಲೆಗಳು ಎಲ್ಲರಿಗೂ ತಿಳಿದಿರುವುದರಿಂದ ಸಂಪ್ರದಾಯದ ಹಾಡುಗಳಲ್ಲಿ ಹೆಚ್ಚು ಕೃಷ್ಣನನ್ನು ಹಾಡಿನ ವಸ್ತುವನ್ನಾಗಿಸಿಕೊಂಡಿದ್ದಾರೆ.

ಕಪ್ಪನ್ನಚ್ಚಿಳಿದಳೀ ಗೋಪಿ । ರಂಗಯ್ಯಗೇ

ಕಪ್ಪನ್ನಚ್ಚಿದಳೀ ಗೋಪಿ ॥

ಕಪ್ಪನ್ನಚ್ಚಿದಳೂ ತಾ । ಸರ್ಪಶಯನಾ ಹರಿಗೇ ।

ದೃಷ್ಟಿತಾಕುವಂಥಾ । ಚೆಲುವರಂಗಯ್ಯಗೇ

ಎಳೆಯ ಮಕ್ಕಳನ್ನು ಎಲ್ಲರೂ ಇಷ್ಟ ಪಡುತ್ತಾರೆ. ಅದರ ನಗು ಕೈಕಾಲುಗಳ ಚಲನೆಗಳನ್ನು ಕಂಡು ಮಗುವೊಂದಿಗೆ ಹೆಚ್ಚು ಕಾಲ ಕಳೆಯಲು ಇಷ್ಟಪಡುತ್ತಾರೆ. ಎಷ್ಟು ನೋಡಿದರೂ ಬೇಸರವೆನಿಸುವುದಿಲ್ಲ. ಜೊತೆಗೆ ಮಗುವನ್ನು ನೋಡಲು ಬರುವವರು ತುಂಬಾ ಇರುತ್ತಾರೆ. ಇದರಿಂದ ಮಗುವಿಗೆ ದೃಷ್ಟಿ ತಾಗದಿರಲೆಂದು ಕಪ್ಪನ್ನಿಡುತ್ತಾರೆ.

ಕಿವಿ ಚುಚ್ಚುವುದು ಒಂದೊಂದು ವರ್ಗದವರಲ್ಲಿ ಬೇರೆಯಾಗಿ ಆಚರಿಸುತ್ತಾರೆ. ಬ್ರಾಹ್ಮಣ ಸಂಪ್ರದಾಯವನ್ನು ಹೊರತುಪಡಿಸಿ ಉಳಿದವರು ಒಂಭತ್ತನೇ ತಿಂಗಳಿನಲ್ಲಿ, ಕೆಲವರು ಐದನೆಯ ತಿಂಗಳು ಹೀಗೆ ಒಬ್ಬೊಬ್ಬರು ಒಂದೊಂದು ಸಮಯದಲ್ಲಿ ಚುಚ್ಚುತ್ತಾರೆ. ಸಾಮಾನ್ಯವಾಗಿ ಮಗು ಸ್ವಲ್ಪ ದೊಡ್ಡದಾದ ಮೇಲೆ ಅಂದರೆ ಕೆಲವು ತಿಂಗಳುಗಳಾದ ಮೇಲೆ ಕಿವಿ ಚುಚ್ಚುವ ಶಾಸ್ತ್ರ ಮಾಡುತ್ತಾರೆ. ಆದರೆ ಬ್ರಾಹ್ಮಣ ಸಂಪ್ರದಾಯದಲ್ಲಿ ಮಗು ಜನಿಸಿದ ಹನ್ನೊಂದನೆಯ ದಿನಕ್ಕೆ ಈ ಶಾಸ್ತ್ರ ಮಾಡುತ್ತಾರೆ. ಹನ್ನೊಂದನೆಯ ದಿನವೇ ಅದಕ್ಕೆ ಶ್ರೇಷ್ಟವೆಂಬುದು ಅವರ ನಂಬಿಕೆ. ಕಿವಿ ಚುಚ್ಚಲು ಹೂವಿನ ತೊಟ್ಟನ್ನು ಸುಣ್ಣದಲ್ಲಿ ಅದ್ದಿ ಮಗುವಿನ ಕಿವಿಗಳಿಗೆ ಗುರುತು ಮಾಡಿ ಯಾವ ಬೇಕಾದರೂ ಚುಚ್ಚಿ ಆಭರಣವಿಡಲು ಅವಕಾಶ ಮಾಡಿಕೊಡುತ್ತಿದ್ದರು.

ದಿನ ಒಳ್ಳೆದೆಂದು ಗೋ ।ಕುಲ ಶೃಂಗಾರವ ಮಾಡಿ ।

ಮದನೈಯನ । ಕಿವಿಗಳ ಚುಚ್ಚಿದರು ॥

ವಾರ ಒಳ್ಳೆಯದೆಂದು । ನಾರಿಯರೆಲ್ಲರು ।

ಮಾರ ಸುಂದರನಾ । ಕಿವಿಗಳ ಚುಚ್ಚಿದರು.

ಇ. ಜೋ ಜೋ ಹಾಡು ಮತ್ತು ಲಾಲಿ ಹಾಡು:-

ಹಾಡು, ಸಂಗೀತ ಎರಡೂ ವೈಜ್ಞಾನಿಕವಾಗಿ, ಮಾನಸಿಕವಾಗಿ ನೆಮ್ಮದಿಯನ್ನು ಶಾಂತಿಯನ್ನು ನೀಡುತ್ತದೆ. ಇತ್ತೀಚಿನ ದಿನಗಳಲ್ಲಿ ಸಂಶೋಧನೆಯ ಮೂಲಕ ಗರ್ಭದಲ್ಲಿರುವ ಮಗುವಿನಿಂದ ಹಿಡಿದು ಜನನವಾದ ನಂತರವೂ ಸಂಗೀತವು ಮಗುವಿನ ಮನಸ್ಸಿಗೆ ಮುದನೀಡುತ್ತದೆ, ಸ್ಪಂದಿಸುತ್ತದೆ ಎಂಬುದನ್ನು ದೃಶ್ಯಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ ನೋಡಿರಬಹುದು. ಆದರೆ ನಮ್ಮ ಹಿರಿಯರು ಯಾವುದೇ ತಂತ್ರಜ್ಞಾನಗಳು ಬಳಕೆಯಿಲ್ಲದ ಕಾಲದಲ್ಲಿ ಈ ಅಂಶವನ್ನು ಮನಗೊಂಡಿದ್ದರು. ಅದಕ್ಕಾಗಿಯೇ ಮಗುವು ಅತ್ತಾಗ, ನಿದ್ದೆ ಮಾಡಿಸಬೇಕಾದಾಗ ಹಾಡುಗಳನ್ನು

ಹಾಡುತ್ತಿದ್ದರು. ಆ ಹಾಡುಗಳನ್ನೇ ಜೋ ಜೋ ಹಾಡು, ಲಾಲಿ ಹಾಡುಗಳೆಂದು ಕರೆಯಲಾಗುತ್ತದೆ. ಈ ಹಾಡುಗಳ ರಚನೆಗೆ ಪುರಾಣ ಪುರುಷರನ್ನು ವಸ್ತುವಾಗಿ ಆಯ್ಕೆ ಮಾಡಿಕೊಂಡಿದೆ. ಸಂಪ್ರದಾಯದ ಹಾಡುಗಳಲ್ಲಿ ಗುಂಡಪ್ಪನ ಜೋ ಜೋ, ಲವ-ಕುಶರಿಗೆ ಜೋ, ಜೋ. ಶ್ರೀಕೃಷ್ಣಲಾಲಿ, ಶ್ರೀರಾಮದೇವರ ಲಾಲಿ. ಶ್ರೀವಾಸುದೇವ ಲಾಲಿ ಹಾಡುಗಳನ್ನು ರಚಿಸಿದ್ದಾರೆ.

ಮಗುವು ತಿಂದು ಉಂಡು ದಷ್ಟಪುಷ್ಟವಾಗಿರಬೇಕು. ಗುಂಡುಕಲ್ಲಿನಂತೆ ಗಟ್ಟಿಯಾಗಿರಬೇಕು, ಆರೋಗ್ಯವಂತರಾಗಿರಬೇಕು ಎಂಬುದು ಅವರ ಆಸೆ. ಜೋ ಜೋ ಹಾಡನ್ನು ಹಾಡುವ ಮುಂಚೆ ತೊಟ್ಟಿಲಿಗೆ ರಕ್ಷೆ ಇಡುತ್ತಾರೆ. ರಕ್ಷೆ ಎಂದರೆ ಕಾಪಾಡು, ಕಾಯು ಎಂದು ಅರ್ಥೈಸಿಕೊಳ್ಳಬಹುದು. ಯಾವುದೇ ತೊಂದರೆ ಯಾಗದಿರಲೆಂದು ಮಾಡುವ ಒಂದು ಮುನ್ನೆಚ್ಚರಿಕೆಯ ಕ್ರಮವಾಗಿ ರಕ್ಷೆ ಇಡುವುದು. ರಕ್ಷೆ ಕಟ್ಟುವುದನ್ನು ಮಾಡಲಾಗುತ್ತದೆ. ಹೆಚ್ಚಾಗಿ ಚಿಕ್ಕ ಮಕ್ಕಳಿಗೆ ಇದನ್ನು ಮಾಡುತ್ತಾರೆ.

ರಕ್ಷೆಯನಿಟ್ಟರು ರಘುಪತಿಗೆ । ಲಕ್ಷ್ಮೀನಾರಾಯಣ ದೊರೆಗೇ

ದಕ್ಷ ಶಿಕ್ಷಕ ಪ್ರಿಯ ಹರಿಗೇ । ಪಕ್ಷೀವಾಹನ ಶ್ರೀ ಹರಿಗೇ

ಮಕ್ಕಳನ್ನು ಕುರಿತಾದ ಹಾಡುಗಳಲ್ಲಿ ಎಲ್ಲ ಸಂಪ್ರದಾಯದವರು ದೇವರುಗಳನ್ನೇ ಹಾಡುಗಳಲ್ಲಿ ಬಳಸಿಕೊಂಡಿದ್ದಾರೆ. ರಕ್ಷೆಯನ್ನಿಟ್ಟನಂತರ ಮಕ್ಕಳನ್ನು ಹೇಗೆ ಆರೋಗ್ಯವಂತರಾಗಿ ಬೆಳೆಸಬೇಕೆಂಬುದನ್ನು ತಿಳಿಸುವಂತೆ ಗುಂಡಪ್ಪ ಜೋ ಜೋ ಹಾಡನ್ನು ರಚಿಸಿದ್ದಾರೆ.

ರಾಜ್ಯವನಾಳ್ವದ । ರಾಗಿಯ ಕಲ್ಲು

ಜೀವನ ಉಳಿಸೋದು । ನೂರುವ ಕಲ್ಲು

ಪಾವನ ಮಾಳ್ಪುದು । ಅಗಸರ ಕಲ್ಲು

ಲೇಸಮುಟ್ಟಿತು ನಮ್ಮ । ದೋಸೆಯ ಕಲ್ಲು ॥ ಜೋ ಜೋ

ಲಾಲಿ ಹಾಡುಗಳನ್ನು ಮಗುವಿನ ಮನಸ್ಸನ್ನು ಶಾಂತಗೊಳಿಸಿ ಮಲಗಿಸುವ ವೇಳೆಯಲ್ಲಿ ಲಾಲಿ ಹಾಡುಗಳನ್ನು ಹಾಡುತ್ತಾರೆ. ಹಿಂದೂ ಸಂಪ್ರದಾಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯಂದು ಕೃಷ್ಣನ ಪ್ರತಿಯನ್ನು ತೊಟ್ಟಿಲಲ್ಲಿಟ್ಟು ತೂಗುತಾ ಲಾಲಿ ಹಾಡುಗಳನ್ನು ಹಾಡುತ್ತಾರೆ. ವಿವಿಧ ಸಂದರ್ಭಗಳಲ್ಲಿ ದೇವರನ್ನು ಜೋಕಾಲಿಯ ಮೇಲಿಟ್ಟು ತೂಗುತ್ತಾ ಲಾಲಿ ಹಾಡು. ಜೋ ಜೋ ಹಾಡನ್ನು ಹಾಡುತ್ತಾರೆ.

ಉದಾ:– **ಶ್ರೀವಾಸುದೇವ ಲಾಲಿ । ಶ್ರಿತ । ಪಾಲ ಲೀಲ ಲಾಲಿ**

ದೇವಾದಿ ವಂದ್ಯ ಲಾಲಿ । ದೀ । ನಾಳಿಪಾಲ ಲಾಲಿ

ಕರುಣಾಲವಾಲ ಸಾಲ । ಕಮ । ಲಾ ವಿನೋದ ಶೀಲಾ॥

[illegible]

ಶರಣಾಗತಾನುಕೂಲ । ಕ್ಷಮಿ ।ತಾಖಿಳಾಂಕ ಜಾಲಾ

ವಾಗೀಶ್ವರಿ ಶಾಸ್ತ್ರಿಯವರು ಸಂಪ್ರದಾಯದ ಹಾಡುಗಳನ್ನು ಕುರಿತು ಹಲವಾರು ಲೇಖನಗಳನ್ನು ತರಂಗ. ವನಿತಾ ಮುಂತಾದ ಪತ್ರಿಕೆಗಳಲ್ಲಿ ಬರೆದಿದ್ದಾರೆ. ಸಂಪ್ರದಾಯದ ಹಾಡುಗಳ ಬೃಹತ್ ಗ್ರಂಥ 'ಹೃದಯಸಂಪುಟ'ದಲ್ಲಿ ಇಲ್ಲದ ಮಕ್ಕಳಿಗೆ ಸಂಬಂಧಿಸಿದ ಹಾಡನ್ನು ಲೇಖನವೊಂದರಲ್ಲಿ ಎಳೆಯ ಮಗುವನ್ನು ಆಡಿಸಿ. ನಗಿಸಲು ಹೇಳುವ ಹಾಡು ಬರೆದಿದ್ದಾರೆ. ಇದು ಮಕ್ಕಳ ಮನೋವಿಕಾಸಕ್ಕೆ. ಚುರುಕುತನಕ್ಕೆ, ತುಂಬ ಅಗತ್ಯವಾದ ಹಾಡು. ಮಗುವಿನ ಪ್ರತಿಯೊಂದು ಚಲನವಲನವನ್ನು ಅರಿತು ಮಕ್ಕಳ ಚಟುವಟಿಕೆಯನ್ನು ಕ್ರಿಯಾಶೀಲವಾಗಿಸುವಂತೆ ಮನೋವೈಜ್ಞಾನಿಕ ಹಾಡುಗಳ ರಚನೆಯನ್ನು ಹಿಂದಿನ ಕಾಲದ ತಾಯಂದಿರು ಮಾಡಿದ್ದಾರೆ. ಸಮಾಜದೊಂದಿಗೆ ಬೆರೆಯುವ. ಗುರುಹಿರಿಯರಲ್ಲಿ ಗೌರವ, ಒಳ್ಳೆಯ ಗುಣವನ್ನು ರೂಪಿಸುವ ಮೊದಲ ಗುರು ತಾಯಿ ಎಂಬುದು ಈ ಹಾಡುಗಳಿಂದ ತಿಳಿಯುತ್ತದೆ. ಮಗುವಿಗೆ ಯಾವ ಸಮಯದಲ್ಲಿ ಎಂತಹ ಹಾಡುಗಳನ್ನು ಹಾಡಬೇಕು ಎಂಬುದನ್ನು ತರಂಗ ಪತ್ರಿಕೆಯಲ್ಲಿ ೧೯೮೩ ಸೆಪ್ಟೆಂಬರ್ ೧೮ರ ಸಂಚಿಕೆಯಲ್ಲಿ ಬರೆದಿದ್ದಾರೆ. ಈ ಹಾಡಿನಲ್ಲಿ ಮಗುವನ್ನು ವಿವಿಧ ಭಂಗಿಗಳಲ್ಲಿ ಮಲಗಿಸಿ. ಕೂರಿಸಿ. ಆಟವಾಡಿಸುತ್ತಾ. ಆಟವನ್ನು ಹೇಗೆ ಕಲಿಸುತ್ತಾರೆಂಬುದನ್ನು ಈ ಹಾಡಿನಲ್ಲಿ ನೋಡಬಹುದು. ಆ ಸಂಚಿಕೆ ಹಾಡುಗಳನ್ನು ಉದಾಹರಣೆಯಾಗಿ ಗಮನಿಸಬಹುದು.

ಮೂರುತಿಂಗಳಿಂದ ಆರು ತಿಂಗಳ ಮಕ್ಕಳು ಆಳು ನಿಲ್ಲಿಸದಿದ್ದಾಗ ತೊಡೆಯ ಮೇಲೆ ಕೂರಿಸಿಕೊಂಡು ಎಡಗೈಯಿಂದ ತಲೆಯನ್ನು ಹಿಡಿದು ಹಿತವಾಗಿ ಹಿಂದಕ್ಕೂ. ಮುಂದಕ್ಕೂ ಮಗುವನ್ನು ತೂಗಿ ತೂಗಿ ಆಡಿಸುತ್ತಾ ಹೀಗೆ ಹೇಳುವರು.

ದೂರಿ ದೂರೀ ದುಂಡು ಮುತ್ತು

ನಾರಿ ಕೇಳೇ ನಂದಗೋಪೀ

ಚಿಕ್ಕಾನೇ ದೂರಿ ದೂರಿ

ಮರಿಯಾನೇ ದೂರಿ ದೂರಿ

ಹೀಗೆ ಆನೆಯ ಕುರಿತು ಪದಗಳು ಇನ್ನು ಅನೇಕವಿದೆ. ಮಗುವಿನ ಅಂಗೈ ಬಿಡಿಸಿ ಸವರುತ್ತಾ

"ಸಾರ್ಸಿ, ಗುಡ್ಸಿ, ರಂಗೋಲಿ ಹಾಕಿ,

ಅಗ್ರದ ಬಾಳೆಲೆ ತಂದು

ಅನ್ನ, ಸಾರು, ತೊವ್ವೆ, ಪಾಯಸ,

ಹುಳಿ, ಪಲ್ಯ, ಕೋಸಂಬ್ರಿ

ಎಲ್ಲಾ ಬಡಿಸಿ ಅನ್ನ, ಸಾರು, ಎಲ್ಲಾ ಕಲಸಿ

ಎಂದು ಹೇಳಿ ಕಚಗುಳಿ ಇಟ್ಟಾಗ ಮಕ್ಕಳು ತಡೆಯಲಾರದ ನಗು ನಗುತ್ತಾರೆ. ಇಷ್ಟು ಹಾಡಗಳನ್ನು ತಾಯಿ ಎಳೆಯ ಮಗುವಿಗೆ ಹಾಡುವಂತಹವು. ಮಕ್ಕಳ ಸಾಹಿತ್ಯದ ಎರಡನೇ ಭಾಗ ಮಕ್ಕಳು ಸ್ವತಃ ಹಾಡಿ ನಲಿಯಲೆಂದು ಅವರ ಮನೋವಿಕಾಸಕ್ಕೆ ಎಡೆ ಮಾಡಿ ಕೊಡುವ ಹಾಡುಗಳನ್ನು ದೊಡ್ಡವರು ಹೇಳಿಕೊಟ್ಟು ಮಕ್ಕಳೇ ಹಾಡುವಂತಹ ಹಾಡುಗಳು ಸಂಪ್ರದಾಯದ ಹಾಡುಗಳಲ್ಲಿವೆ. ಈ ಹಾಡುಗಳನ್ನು ಸಭೆ, ಸಮಾರಂಭಗಳಲ್ಲಿ ಹಬ್ಬ ಹರಿದಿನಗಳಲ್ಲಿ ಮಕ್ಕಳು ಹಾಡಿ ಎಲ್ಲರನ್ನು ರಂಜಿಸುತ್ತಾ ತಾವು ಸಂತೋಷಪಡುತ್ತಿದ್ದವು. ಮಕ್ಕಳಿಗೆಂದೇ ಕೆಲವು ಶಾಸ್ತ್ರ, ಸಂಪ್ರದಾಯಗಳನ್ನು ರೂಢಿಗೆ ತಂದು ಆ ಕಾರ್ಯಕ್ರಮಗಳಲ್ಲಿ ಮಕ್ಕಳೇ ವಿಶೇಷ ವ್ಯಕ್ತಿಯಾಗಿರುವಂತೆ ಕೆಲವು ಹಬ್ಬಗಳನ್ನು ಬ್ರಾಹ್ಮಣ ಸಂಪ್ರದಾಯದಲ್ಲಿ ಕಾಣಬಹುದು. ಹೃದಯಸಂಪುಟದಲ್ಲಿ ಮಕ್ಕಳ ಸಾಹಿತ್ಯ ಭಾಗದಲ್ಲಿ 'ರೈಲುಹಾಡು', ಬೊಂಬೆ ಹಬ್ಬದ ಹಾಡು, ಸುಂದರವದನೇ, ಅಕ್ಕ ಆರತಿ ತುಂಜಿ, ಸರಸ್ವತಿ ಪೂಜೆಯ ಹಾಡುಗಳು, ಕರಗಳ ಜೋಡಿಸಿ, ಶಾರದೆ ಶುಭ ನೀರದೆ, ತಾಯೇ ಭಾರತಿ, ಶಾರದ ಪರಿಪಾಲಿಸೌ, ಆಕಾಶದ ಮೇಲಣ, ಸಣ್ಣ ಬೆತ್ತದ ಕೋಲು, ಬಸವ-ಬಸವ, ಮೊಸರು ಮಾರುತ, ಇತ್ಯಾದಿ.

ಸಂಪ್ರದಾಯ ಹಾಡುಗಳು ಗ್ರಂಥದಲ್ಲಿ ಬರುವ ಮಕ್ಕಳನ್ನು ಕುರಿತು ರಚಿಸಿರುವ ಹಾಡುಗಳಲ್ಲಿ ಎರಡು ಮುಖ್ಯವಾದ ಸಂಗತಿಗಳನ್ನು ಕಾಣಬಹುದು. ಮಗು ಜನಿಸಿದ ಸಂದರ್ಭದಲ್ಲಿ ತಾಯಿ, ಹಿರಿಯರು ಮಗುವಿಗಾಗಿ ಹಾಡುವ ಹಾಡುಗಳಲ್ಲಿ ಗಂಡು ಮಕ್ಕಳನ್ನು ಕೇಂದ್ರಿಕರಿಸಿ ಹಾಡಲಾಗಿದೆ. ಉದಾ:- ಜೋ ಜೋ ಹಾಡು, ರಕ್ಷೆಯಿಟ್ಟು ಹಾಡು . ಬಜೆ ಬೆಣ್ಣೆ ತಿನ್ನಿಸುವ ಹಾಡು, ಲಾಲಿ ಹಾಡು ಇದು ಗಂಡು ಮಕ್ಕಳ ಬಗ್ಗೆ ಹೊಂದಿರುವ ಅಪಾರ ಆಸೆಯನ್ನು, ಆಸಕ್ತಿ, ಕಾಳಜಿಯನ್ನು ತಿಳಿಸುತ್ತದೆ.

ಬಾಲ್ಯದ ಸಹಜ ಆಟಗಳಿಗೆ ತುಂಟಾಟಗಳಿಗೆ ಅವಕಾಶವಿರುತ್ತಿತ್ತು. ಮನೆಯವರು ಅದಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ಅದಕ್ಕಾಗಿ ಅವರಿಗೆಂದೇ ಆಟ, ಪಾಠ, ಮನರಂಜನೆ ಎಲ್ಲವು ಸಿಗುವಂತೆ ಆಚರಣೆಯನ್ನು ಅದಕ್ಕೆ ತಕ್ಕಂತೆ ಹಾಡುಗಳನ್ನು ರಚಿಸಿದ್ದಾರೆ. ವಿದ್ಯೆಯ ಕಲಿಕೆಗೆ ಅವಕಾಶವಿರದ ಕಾರಣ ಅವರ ಪಾಲಿಗೆ ಹಾಡುಗಳೇ ವಿದ್ಯಾಭ್ಯಾಸ. ಈ ಬಗೆಯ ಹಾಡುಗಳನ್ನು ಮಕ್ಕಳಿಗೆಂದೆ ದೊಡ್ಡವರು ರಚಿಸಿ ಹೇಳಿಕೊಟ್ಟು ಕಲಿಸುತ್ತಿದ್ದರು. ಸೃಜನಶೀಲ ಪ್ರತಿಭೆಯುಳ್ಳ ಮಕ್ಕಳು ತಾವು ಸಹ ಹಾಡುಗಳ ರಚನೆಯನ್ನು ತಮ್ಮ ಬಾಲ ಭಾಷೆಯಲ್ಲಿ ರಚನೆ ಮಾಡುತ್ತಿದ್ದರು.

ಬೊಂಬೆ ಹಾಡುಗಳು:-

ದಸರಾ ಹಬ್ಬವನ್ನು ದುರ್ಗಾದೇವಿಯು ವಿಜಯ ಸಾಧಿಸಿದ ಸಲುವಾಗಿ ನವರಾತ್ರಿ ಎಂದು ಕರೆದು ಒಂಭತ್ತುದಿನಗಳು ಚಾಮುಂಡೇಶ್ವರಿಯನ್ನು ಪೂಜಿಸಲಾಗುತ್ತದೆ. ಬ್ರಾಹ್ಮಣ ಸಂಪ್ರದಾಯದಲ್ಲಿ ಮಕ್ಕಳಿಗೆ ಈ ಹಬ್ಬದಲ್ಲಿ ವಿಶೇಷ ಸ್ಥಾನವನ್ನು ನೀಡಿ ಆ ಹಬ್ಬವನ್ನು ಮಕ್ಕಳಿಗೆ

"ಬೊಂಬೆ ಹಬ್ಬವೆಂದು ಆಚರಿಸಲು ಪ್ರೋತ್ಸಾಹ ನೀಡಿದ್ದಾರೆ. ಹೆಣ್ಣು ಮಕ್ಕಳಿಗೆ ಪೂಜೆ ಪುನಸ್ಕಾರಗಳಿಗೆ ಆ ವಯಸ್ಸಿನಿಂದಲೇ ಅನುವು ಮಾಡಿಕೊಡುವುದು ಅವರ ಉದ್ದೇಶ. ಈ ಹಬ್ಬದಲ್ಲಿ ಅಲಂಕರಿಸಿ ಇಡುವುದರಿಂದ ಹಿಡಿದು ಪೂರ್ಣ ಹಬ್ಬ ಮುಗಿಯುವವರೆಗೂ ಎಲ್ಲ ಕಾರ್ಯವನ್ನು ಮಕ್ಕಳಿಂದಲೇ ಮಾಡಿಸುತ್ತಿದ್ದರು. ಹಿರಿಯರು ಅವರೊಂದಿಗೆ ಇದ್ದು ಸಲಹೆ, ಸೂಚನೆಗಳನ್ನು ಕೊಡುತ್ತಿದ್ದರು. ಜೊತೆಯಲ್ಲಿ ಮಕ್ಕಳಿಗೆ ಸಾಮಾಜಿಕ ಪ್ರಜ್ಞೆಯನ್ನು, ಪೌರಾಣಿಕ, ಚಾರಿತ್ರಿಕ ವಿಷಯವನ್ನು ಕುರಿತು ಮಾಹಿತಿಯನ್ನು ಅದರಲ್ಲಿ ಬಿತ್ತುವಲ್ಲಿ ಇಂತಹ ಆಚರಣೆಗಳ ಮಹತ್ವದ್ದಾಗಿದೆ. ಬೊಂಬೆ ಹಬ್ಬದ ಆಚರಣೆ ಮಕ್ಕಳಲ್ಲಿ ಸೃಜನಶೀಲತೆ, ಕ್ರಿಯಾಶೀಲತೆಯನ್ನು ಉಂಟು ಮಾಡಿ ಬೌದ್ಧಿಕ ವಿಕಾಸಕ್ಕೆ ಕಾರಣವಾಗುತ್ತಿತ್ತು. ಹಬ್ಬದ ದಿನದೊಂದು ಹಲವು ಬಗೆಯ ಬೊಂಬೆಗಳನ್ನು ಕೂರಿಸುತ್ತಿದ್ದರು. ಪೌರಾಣಿಕ ಚಿತ್ರಣವನ್ನು ಬಿಂಬಿಸುವ ರಾಮಾಯಣ ಮಹಾಭಾರತದ ಕೆಲವು ಸನ್ನಿವೇಶಗಳನ್ನು ಬಿಂಬಿಸುವಂತೆ, ಅರಮನೆ, ರಾಜ, ರಾಣಿ, ಕುದುರೆ, ಸೈನ್ಯ ಹೀಗೆ ರಾಜಕೀಯ, ಸಾಮಾಜಿಕ, ಚಿತ್ರಣವನ್ನು ಕೊಡುವ ಹಾಗೆ ಬೊಂಬೆಗಳನ್ನು ಕೂಡಿಸುತ್ತಾರೆ. ಆಗ ಹಾಡಲೆಂದೇ ಕೆಲವು ಹಾಡುಗಳನ್ನು ಬೊಂಬೆಯ ಮೇಲೆ ರಚಿಸಿದ್ದಾರೆ. ಇವುಗಳನ್ನು ಬೊಂಬೆ ಹಾಡುಗಳೆಂದೇ ಕರೆಯಲಾಗುತ್ತದೆ.

ಚಂದಣವಾ ಬೊಂಬಕ್ಕೆ

ಚಂದಣದಾ ಬೊಂಬಕ್ಕಾ । ಗಂಧಾವ ತೇಯ್ಯೋಳೀ

ಗುಂಡೂಗುಲಗಂಜೀ । ಮುಡಿಯೋಳೇ

ಮುಡಿಯೋಳೀ ಬೊಂಬಕ್ಕಾ । ಬೊಂಬೆ ಬಾಹಸೆಗೇ । ಕರೆದಾರೂ॥ ಶೋಭಾನೇ

ಇದೇ ರೀತಿ ಬೊಂಬೆಯನ್ನು ಕುರಿತ ತೊಟ್ಟಲ್ಲಿ ಹೂ ಬಂದು, ಅಡ್ಡ ಮುಡಿ ಮುಡಿಸುವ ಎನ್ನುವ ಹಾಡುಗಳಿವೆ. ಸಂಪ್ರದಾಯದ ಹಾಡುಗಳ ಗ್ರಂಥದಲ್ಲಿ ಭಾಷಾವೈವಿಧ್ಯತೆಯನ್ನು ಕಾಣಬಹುದು. ಇಂಗ್ಲೀಷ್, ತೆಲುಗು, ಕನ್ನಡ, ಸಂಸ್ಕೃತ, ಪದಗಳ ಬಳಕೆಯನ್ನು ಕಾಣಬಹುದು. ಸಂಸ್ಕೃತ ಪದಗಳ ಬಳಕೆಯನ್ನು ತುಂಬಾ ಪ್ರಾಚೀನ ಕಾಲದಲ್ಲಿ ರಚಿಸಿರುವ ಹಾಡುಗಳಲ್ಲಿ ಗುರುತಿಸಬಹುದು. ಮಕ್ಕಳಲ್ಲೂ ಭಾಷಾ ಜ್ಞಾನವನ್ನು ಬೆಳೆಸುವಲ್ಲಿ ಹಾಗೂ ಮಿಶ್ರಭಾಷೆಯಲ್ಲಿ ರಚಿಸಿದ ಹಾಡುಗಳು ಒಂದು ರೀತಿ ಆಕರ್ಷಣೆಯಾಗಿಯೂ, ಕುತೂಹಲಭರಿತ ಹಾಸ್ಯವಾಗಿಯೂ ಕಂಡುಬರುತ್ತದೆ. ಇಂತಹ ಹಾಡನ್ನು ಮಕ್ಕಳಿಗಾಗಿ ದೊಡ್ಡವರು ಕಟ್ಟಿಕೊಟ್ಟಿದ್ದಾರೆ. ಉದಾಹರಣೆಗೆ:-

ಕಮಾನ್ ಸಿಡೌನ್

ಕಮಾನ್ ಸಿಡೌನ್ ದಿ ಬ್ಯೂಟಿಫುಲ್ ಲೇಡಿ

ವೈ ಯೂ । ಲೇಟು ಕಂ ॥

ಇತ್ತ ಬಾರೆ ಮುತ್ತಿನಾ ಹಸೆಗೇ

ಯತ್ನದಿಂದ ಕರೆವೆ ಎತ್ತ ನೋಡಿದರು

ನವರತ್ನದಿಂದ ಹೊಳೆವೇ ॥

ಹಾಡಿನಲ್ಲಿ ಇಂಗ್ಲೀಷ್ ಪದಗಳ ಬಳಕೆ ಇರುವುದರಿಂದ ಇದು ಹತ್ತೊಂಭತ್ತನೇ ಶತಮಾನದಿಂದ ಈಚೆಗೆ ರಚಿಸಲಾಗಿರುವ ಹಾಡೆಂದು ಊಹಿಸಬಹುದು. ಮತ್ತು ಆಧುನಿಕ ಸಂದರ್ಭದಲ್ಲೂ ಈ ಹಾಡುಗಳ ಸೃಷ್ಟಿ ನಡೆಯುತ್ತಿತ್ತೆಂಬುದು ತಿಳಿದು ಬರುತ್ತದೆ.

ಕೋಲು ಹುಯ್ಯುವ ಹಬ್ಬ :-

ಕೋಲು ಹುಯ್ಯುವ ಹಬ್ಬವನ್ನು ಮಕ್ಕಳಿಗೆಂದೇ ಒಂದು ವಾರದವರೆಗೂ ನಡೆಸುವ ಮೇಳ. ಇದನ್ನು "ಬಸವನ ಅಷ್ಟಮಿ ಹಬ್ಬ" ಎಂದು ಕರೆಯುತ್ತಾರೆ. ಈ ಪೂಜೆಯಲ್ಲಿ ಬಸವನೇ ಮುಖ್ಯ ದೈವ. ಮುಖ್ಯವಾಗಿ ಹೆಣ್ಣು ಮಕ್ಕಳು ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ. ಯಾರಾದರೊಬ್ಬರ ಮನೆಯಲ್ಲಿ ಜೋಡಿ ಬಸವನ ಮೂರ್ತಿಯನ್ನಿಟ್ಟು ಪೂಜಿಸುತ್ತಾರೆ. ಅಂದು ಮುಂಜಾವಿನಲ್ಲೇ ಎದ್ದು ಮಡಿಯನ್ನುಟ್ಟು ಬಸವನ ಸಂಧ್ಯಾವಂದನೆಗೆ ನೀರನ್ನೂ, ಹುಲ್ಲನ್ನೂ ತರಲು ನದಿಗೆ ಹೋಗುತ್ತಾರೆ. ಅಲ್ಲಿ ಕೋಟೆಯನ್ನು ಕಾಯುವ ತಳವಾರನನ್ನು ಎಲೆ. ಅಡಿಕೆ ತೋರಿಸಿ ಬಾಗಿಲು ತೆರೆಸಿ. ಹೊಳೆಯಲ್ಲಿ ಆಟವಾಡಿ ಕೋಲುಗಳನ್ನು ನೀರಲ್ಲಿ ಆಡಿಸಿ ಗಂಗೆ ಪೂಜೆ ಮಾಡಿ ಅಲ್ಲಿಂದ ಊರಿಗೆ ಬಂದು ಬ್ರಾಹ್ಮಣರ ಕೇರಿಗಳಲ್ಲಿ ಮಾತ್ರ ಎಲ್ಲರ ಮನೆಯ ಮುಂದೆ ಹೋಗಿ ಕೋಲಾಟವನ್ನು ಆಡುವುದು. ಹಬ್ಬದ ಪದ್ಧತಿ ಒಂದೊಂದು ಶಾಸ್ತ್ರವನ್ನು ಮಾಡುವಾಗಲೂ ಒಂದೊಂದು ಹಾಡನಾಡುತ್ತಾರೆ. ತಳವಾರನಿಗೆ ಬಾಗಿಲು ತೆಗೆಸಲು ಮಕ್ಕಳು ಹಾಡುವ ಹಾಡು

ಊರ್ ಬಾಗಿಲ್ ತೆಗೆಯೋನೆ ಜಾಣ ತಳವಾರ । ಶಾರೆ ಅಡಿಕೇ ಚಿಗುರೆಲೆ

ಶಾರೇಲಿ ಅಡಿಕೇ ಚಿಗುರೆಲೆ ಕೊಟ್ಟಿನೂ

ಹಬ್ಬದಲ್ಲಿ ಮನೆ ಮನೆ ಮುಂದೆ ಕೋಲಾಟ ಹಾಡಿದ ಮಕ್ಕಳಿಗೆ ಹಣ ಕೊಡಬೇಕು. ಏನಾದರೂ ಕಮ್ಮಿ ದುಡ್ಡನ್ನು ಕೊಟ್ಟರೆ ಮಕ್ಕಳು ನಿರಾಕರಿಸುತ್ತಾರೆ. ಇದು ಮಕ್ಕಳ ಚುರುಕುತನವನ್ನು ತೋರುತ್ತದಲ್ಲದೇ ಎಲ್ಲರಿಗೂ ವಿನೋದವನ್ನು, ಮನರಂಜನೆಯನ್ನೂ ಒದಗಿಸುವುದು. ಈ ರೀತಿಯ ಹಾಡುಗಳು ಮಕ್ಕಳ ಲವಲವಿಕೆಯನ್ನು ಹೆಚ್ಚಿಸುತ್ತದೆ.

ಒಳ್ಳೆಯ ವಾತಾವರಣದಲ್ಲಿ ಬೆಳೆದ ಮಕ್ಕಳು ಗುಣವಂತರಾಗುತ್ತಾರೆ

ತಿರುಗಿ ತಿರುಗಿ ನಮ್ಮ ಬರಿಗಾಲು ನೊಂದವು

ತಿರುಗೇವು ಎಂದರೆ ಬಹು । ಬಿಸಿಲು

ಸರಸ್ವತಿ ಪೂಜೆಯ ಹಾಡುಗಳು:–

ಬ್ರಾಹ್ಮಣ ಸಂಪ್ರದಾಯದಲ್ಲಿ ಹೆಣ್ಣು ಮಕ್ಕಳಿಗೆ ಮನೆಯೇ ವಿದ್ಯಾಮಂದಿರ. ಹುಡುಗರಿಗಿರುವಂತೆ ವಿದ್ಯೆ ಕಲಿಯಲು ಅವರಿಗೆ ಮನೆಯ ಹೊರಗೆ ಅವಕಾಶವಿರಲಿಲ್ಲ. ಆದರೂ ಜೀವನಕ್ಕೆ ಬೇಕಾದಷ್ಟು ತಾಳ್ಮೆ. ಸಹನೆ. ಬುದ್ಧಿವಂತಿಕೆ, ಅನುಭವವನ್ನು ಪಡೆಯಲು ಸೂಕ್ತ ವಾತಾವರಣವನ್ನು ಸೃಷ್ಟಿಸಿಕೊಡುತ್ತಿದ್ದರು. ಹಾಡುಗಳನ್ನು ಕಲಿತು ಹಾಡುವುದು ಒಂದು ರೀತಿಯ ವಿದ್ಯೆ. ಯಾವುದು ಒಳಿತು ಎಂದು ಭಾವಿಸಲಾಗುತ್ತದೆಯೋ ತಾವು ಕಲಿತು ಇನ್ನೊಬ್ಬರಿಗೂ ಕಲಿಸುವಂತಹದ್ದು ವಿದ್ಯೆ. ಇಂದಿನ ಕಾಲದಲ್ಲಿ ವಿದ್ಯೆ ಎಂದರೆ ಸಾಮಾನ್ಯವಾಗಿ 'ಅಕ್ಷರವಿದ್ಯೆ' ಎಂದೇ ತಿಳಿಯಲಾಗುತ್ತದೆ. ಗಣಪತಿ, ಶಾರದೆಯನ್ನು ವಿದ್ಯಾಧಿದೇವತೆಗಳೆನ್ನಲಾಗುತ್ತದೆ. ಈಗಲೂ ಸಹ ಯಾವುದೇ ಕಲಿಕೆಯಲ್ಲಿ ದೇವರಿಗೆ ವಂದಿಸುತ್ತೇವೆ. ಹೆಣ್ಣು ಮಕ್ಕಳಿಗೆ ಅಕ್ಷರ ವಿದ್ಯೆಯ ಬದಲು ಬೇರೆ ವಿದ್ಯೆಯನ್ನು ಕಲಿಸಲಾಗುತ್ತಿತ್ತು. ಹಾಡು. ಸಂಗೀತ. ನೃತ್ಯ ಇತ್ಯಾದಿ. ಇವುಗಳನ್ನು ಕಲಿಸುವುದಕ್ಕೆ ಮುಂಚೆ ಶಾರದೆಯನ್ನು ಪೂಜಿಸುತ್ತಿದ್ದರು. ನವರಾತ್ರಿಯ ಹಬ್ಬದಲ್ಲಿ ಶಾಲೆಗಳಲ್ಲಿ, ಕಛೇರಿಗಳಲ್ಲಿ, ಸರಸ್ವತಿ ಪೂಜೆಯನ್ನು ಮಾಡುತ್ತಾರೆ. ಮಕ್ಕಳ ಸಾಹಿತ್ಯದಲ್ಲಿ ಶಾರದೆಯ ಹಾಡುಗಳನ್ನು ರಚಿಸಿದ್ದಾರೆ. ಶ್ರೀವಾಣಿಕಲ್ಯಾಣಿ. ಶಾರದೆ ಶುಭ ನೀರದೆ. ಶಾರದಾ ಸದಾ ಬೋಧೇ, ತಾಯೇ ಭಾರತಿ. ವಾಣಿ ಬ್ರಹ್ಮನ ರಾಣಿಯೇ. ಶಾರದೆಯೇ ಕರಗಳ ಜೋಡಿಸಿ ಇಷ್ಟು ಹಾಡುಗಳನ್ನು ಶಾರದೆಯನ್ನು ಒಲಿಸಿಕೊಳ್ಳಲು ಮಕ್ಕಳಿಗೆ ಅಗತ್ಯವಾದ ಬುದ್ಧಿ. ಬೆಳವಣಿಗೆಯನ್ನು ನೀಡಲು ಎಂಬ ಉದ್ದೇಶದಿಂದ ಹಾಡಿಸುತ್ತಿದ್ದರು.

ತರಕಾರಿ ಹಾಡು:–

ಮಕ್ಕಳ ಸಾಹಿತ್ಯದಲ್ಲಿ ಅವರನ್ನು ರಂಜಿಸಲು. ಸಂಸ್ಕಾರವಂತರನ್ನಾಗಿಸಲು ಉತ್ತಮ ಮಾರ್ಗವನ್ನಾಗಿ ಪೌರಾಣಿಕ – ಚಾರಿತ್ರಿಕ ಅಂಶಗಳ ಜೊತೆಗೆ ಮಕ್ಕಳಿಗೆ ಹತ್ತಿರವಾದ ವಿಷಯ ವಸ್ತುಗಳನ್ನು ಈ ಸಾಹಿತ್ಯದ ರಚನೆಗೆ ಬಳಸಿಕೊಂಡಿದ್ದಾರೆ. ಇದು ಮಕ್ಕಳ ಮನಸ್ಸನ್ನು ಆಕರ್ಷಿಸುವ ತಂತ್ರಗಳಲ್ಲಿ ಒಂದು. ಮಕ್ಕಳ ಮೆಚ್ಚಿನ ಸಂಗತಿಗಳ ಮೂಲಕವೇ ಅವರಿಗೆ ತತ್ವ. ನೀತಿಯನ್ನು ಕಷ್ಟವಿಲ್ಲದೆ ಮುಟ್ಟಿಸುತ್ತಿದ್ದರು. ಮಕ್ಕಳಿಗೆ ತಿಂಡಿ ತಿನಿಸುಗಳೆಂದರೆ ಎಲ್ಲಿಲ್ಲದ ಆಸೆ. ಅವರಿಗೆ ಇಷ್ಟವಾದ ವಿಷಯದ ಬಗ್ಗೆ ಮಾತನಾಡಿದರೆ ಕುತೂಹಲಭರಿತರಾಗಿ ಆಸಕ್ತಿ ತೋರುತ್ತಾರೆ.

ಮೂರು ಲೋಕಕ್ಕೆ ಶಿವಾ ಕಳಿಸಿದಾ । ಮೂರು ಕಣ್ಣಿನ ತೆಂಗಿನಕಾಯಿ
ಭಕ್ತಜನರು ಹೇಳಿಕೊಳ್ಳುತಿಹರೇ । ಕೃಷ್ಣನೆಂಬ ಕುಂಬಳಕಾಯಿ
ಸುತ್ತಲ ರಾಜ್ಯದ ಒತ್ತಿ ಅಳುತಿರೆ । ಹಿತ್ತಲೊಳಗೆ ಪರಂಗಿಕಾಯಿ

ಈ ಹಾಡು ಎರಡು ರೀತಿಯಲ್ಲಿ ಮಕ್ಕಳಿಗೆ ಉಪಯುಕ್ತವಾಗಿದೆ. ಒಂದು ಯಾವುದು ಒಳ್ಳೆಯದು, ಕೆಟ್ಟದು ಎಂಬುದನ್ನು ತಿಳಿಸುವುದರೊಂದಿಗೆ ಯಾವ ಮಾರ್ಗದಲ್ಲಿ ನಡೆದರೆ ಜೀವನ ಸುಗಮವಾಗಿರುತ್ತದೆ. ಇದೇ ರೀತಿಯಲ್ಲಿ ಹುರಿಹಿಟ್ಟು ಹಾಡು, ಅವಲಕ್ಕಿಹಾಡು, ಕಾಫಿ ಹಾಡುಗಳು ಮಕ್ಕಳ ಸಾಹಿತ್ಯದಲ್ಲಿವೆ.

ಅಡಿ ಟಿಪ್ಪಣಿ

೧. ಡಾ. ನಂ. ತಪಸ್ವೀಕುಮಾರ್: ಕನ್ನಡ ಜಾನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ. ಪುಟ-೭೬. ೧೯೮೨

ಅಧ್ಯಾಯ – ೬

ಸಂಪ್ರದಾಯದ ಹಾಡುಗಳ ರಚನಕಾರರು

ಜನಪದ ಸಾಹಿತ್ಯದಲ್ಲಿ ಕರ್ತೃಗಳು ಅಜ್ಞಾತವಾಗಿಯೇ ಉಳಿದಿದ್ದಾರೆ. ಜನಪದ ಸಾಹಿತ್ಯದ ಭಾಗವಾದ ಸಂಪ್ರದಾಯದ ಹಾಡುಗಳ ರಚನಕಾರರು ಮರೆಯಾಗಿಯೇ ಜೀವಿಸಿದ್ದಾರೆ. ಜನಪದದಲ್ಲಿ ಸಾಹಿತ್ಯ ರಚಿಸುವವರೆಲ್ಲ ಅನಕ್ಷರಸ್ಥರು. ಅವರ ಉದ್ದೇಶ ಯಾವುದೇ ರೀತಿಯ ಕೀರ್ತಿ. ಪ್ರಸಿದ್ಧಿಯನ್ನು ಪಡೆಯಲು ಅಲ್ಲ. ಜನರ ಮನಸ್ಸಿನ ಭಾವನೆಗಳಿಗೆ ಛಾಯಾಗಿರಲು ಬಯಸುತ್ತಾರೆ. ಯಾರೋ ಒಬ್ಬರು ರಚಿಸಿದ ಹಾಡುಗಳು ಕೇಳುವಿಕೆಯಿಂದ ಇನ್ನೊಬ್ಬರು ಸ್ಮೃತಿಯಲ್ಲಿ ಸೇರಿ. ಪರಂಪರೆಯಿಂದ ಪರಂಪರೆಗೆ ಸಾಗುತ್ತಾ ಬಂದಿದೆ. ಇದು ಹಾಡುವವರ ಬಾಯಲ್ಲಿ ಪ್ರತಿಕ್ಷಣವು ಪುನರ್ ಸೃಷ್ಟಿಗೊಳ್ಳುತ್ತಲೇ ಇರುತ್ತದೆ. ಹಾಗಾಗಿ ಇಂತಹವರೇ ರಚಿಸಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ಒಬ್ಬೊಬ್ಬ ಜಾನಪದ ಹಾಡುಗಾರರು ಜಾನಪದ ಗೀತೆಗಳ ಗ್ರಂಥಾಲಯವಾಗಿದ್ದಾರೆ.

ವಾಗೀಶ್ವರಿ ಶಾಸ್ತ್ರೀಯರು ಸಂಪ್ರದಾಯ ಹಾಡುಗಳು ಗ್ರಂಥದಲ್ಲಿ ಹಾಡುಗಳ ಕೆಲವು ರಚನಾಕಾರರನ್ನು ಪರಿಚಯಿಸಿದ್ದಾರೆ. ಅವರಲ್ಲಿ ಕವಿಗಳು ಕವಿಯಿತ್ರಿಯರು ಇಬ್ಬರು ಇದ್ದಾರೆ. ಅವರು ತಮ್ಮ ಹಾಡುಗಳಲ್ಲಿ ಬಳಸಿಕೊಂಡಿರುವ ಅಂಕಿತಗೊಳಗಾದ ಅವರ ಹಾಡುಗಳ ವಿಮರ್ಶೆ. ವಾಚನಗಳಿಗೆ ಒಳಪಟ್ಟಿರುವುದರಿಂದ ಇತರ ಕರ್ತೃಗಳಂತೆ ಅಜ್ಞಾತದಲ್ಲಿ ಉಳಿಯದೇ ಎಲ್ಲರಿಗೂ ತಿಳಿಯುವಂತಾಗಿದೆ. ಅವರಲ್ಲಿ ಹೆಳವನಕಟ್ಟೆ ಗಿರಿಯಮ್ಮ. ಹರಪನಹಳ್ಳಿ ಭೀಮಕ್ಕ. ಮೂಕಾಂಬಿಕಾ. ಶಾರದೆ. ಹಾಡಿನ ನಾಗಮ್ಮನವರು. ಗರಳಪುರಿ ನಂಜುಂಡಶಾಸ್ತ್ರೀಗಳು. ಚಂಪಕಪುರದ ರಾಮಪ್ಪ. ಮಾಂಗಿರೀಶ. ಬೆಳ್ಳಾವೆ ನರಸಿಂಹಶಾಸ್ತ್ರಿ. ತುರುವೇಕೆರೆ ಬೇಟರಾಯ ದೀಕ್ಷಿತರು. ಅನವಟ್ಟಿರಾಮರಾಯರು. ಇವರುಗಳಲ್ಲಿ ಕೆಲವರ ಕಾಲ ಯಾವುದೆಂದು ತಿಳಿದಿಲ್ಲ.

ಹೆಳವನಕಟ್ಟೆ ಗಿರಿಯಮ್ಮ ಕ್ರಿ.ಶ.೧೭೫೦:–

ಹೆಳವನಕಟ್ಟೆ ಗಿರಿಯಮ್ಮನ ಅಂಕಿತ ಹೆಳವನಕಟ್ಟೆ ರಂಗ ವನಕಟ್ಟೆರಂಗ ಸಂಪ್ರದಾಯದ ಹಾಡುಗಳ ಗ್ರಂಥದಲ್ಲಿ ಇವರು ರಚಿಸಿದರೆಂದು ಹೇಳಲಾಗುವ ಶನಿಸ್ತೋತ್ರ. ಅನಂತನಕಥೆ ಮಂಗಳ ಇವುಗಳನ್ನು ಪ್ರಕಟಿಸಲಾಗಿದೆ.

ಹರಪನಹಳ್ಳಿ ಭೀಮಕ್ಕ :– ಕ್ರಿ.ಶ.೧೮೭೨

ಈಕೆಯ ಅಂಕಿತ ಭೀಮೇಶಕೃಷ್ಣ ಮತ್ತು ಪುರಂದರವಿಠಲ. ಆದರೆ ಹೆಚ್ಚಾಗಿ 'ಭೀಮೇಶಕೃಷ್ಣ' ಅಂಕಿತವನ್ನು ಬಳಸಿದ್ದಾರೆ. ದೊಡ್ಡ ದೊಡ್ಡ ಕಥನಗೀತೆಗಳನ್ನು ರಚಿಸಿದ್ದಾರೆ.

ಕೃಷ್ಣದಾನವ್ರತ, ರತೀಕಲ್ಯಾಣ, ಶುಕ್ರವಾರದ ಕಥೆಗಳು, ಶನಿವಾರದ ಗೌರಿ ಕಥೆಗಳು ಇವರು ರಚಿಸಿರುವ ಹಾಡುಗಳು.

ಮೂಕಾಂಬಿಕಾ:-

ಇವಳು ರಚಿಸಿರುವ ಹಾಡುಗಳಲ್ಲಿ ಮೂಕಾಂಬಿಕೆಯ ಪ್ರಸ್ತಾಪ ಹೆಚ್ಚಾಗಿರುವುದರಿಂದ ಈಕೆಯನ್ನು ಕೊಲ್ಲೂರು ಮೂಕಾಂಬಿಕೆಯ ಭಕ್ತಳೆಂದು ಗುರುತಿಸಿದ್ದಾರೆ. ರಚಿಸಿರುವ ಹಾಡುಗಳು ತತ್ತ್ವಾರ್ಥಗಳಿಂದ ಕೂಡಿದೆ. ಸಂಪ್ರದಾಯದ ಹಾಡುಗಳು ಗ್ರಂಥದಲ್ಲಿ ಈಕೆ ರಚಿಸಿರುವ ನಾಲ್ಕು ಅಂಬಾಸ್ತುತಿಗಳನ್ನೂ, ಒಂದು ಪರಮಾತ್ಮ ಜೋಗಿಹಾಡು ಪ್ರಕಟಿಸಲಾಗಿದೆ.

ಶಾರದೆ :-

ಶಾರದೆಯವರು ರಚಿಸಿರುವ ಹಾಡುಗಳಲ್ಲಿ 'ಚಂದ್ರಮೌಳಿಶಾರದಾಂಬೆ' 'ಶ್ರೀಗುರುಶಾರದ' ಎಂಬ ಪದಗಳ ಬಳಕೆಯಿಂದ ಇವು ಇವರ ಅಂಕಿತವಿರಬಹುದೆಂದು ಭಾವಿಸಲಾಗಿದೆ. ಇವರು ರಚನೆಯ ಹಾಡಿನಲ್ಲಿ ಇಂಗ್ಲೀಷ್ ಪದಗಳ ಬಳಕೆ ಇರುವುದರಿಂದ ಇವರ ಕಾಲ ಹತ್ತೊಂಭತ್ತನೆಯ ಶತಮಾನವಿರಬಹುದು.

ಚಂಪಕಪುರದ ರಾಮಪ್ಪ:-

'ಚಂಪಕಪುರದ ರಾಮಪ್ಪ' ಈತನ ಅಂಕಿತ ಇವನೊಬ್ಬ ರಾಮಭಕ್ತ 'ತುಳಸಿ ಕುರಿತ ಕಥೆ' ಮತ್ತು 'ಶಕ್ತಗಣಪನ ಅರ್ಥಿಯಲಿ ಬಲಗೊಂಬೆ' ಎಂಬ ಹೆಸರಿನ ನಾಲ್ಕು ಸಾಲಿನ ಎಪ್ಪತ್ತೈದು ಪದ್ಯಗಳನ್ನು ರಚಿಸಿದ್ದಾರೆ.

ಅಸೂರಿ ರಾಮಸ್ವಾಮಿ ಅಯ್ಯಂಗಾರ್-೧೮೮೪:-

'ರಾಮದಾಸ', 'ಮಾಂಗಿರೀಶ್' ಎಂಬ ಎರಡು ಅಂಕಿತಗಳಲ್ಲೂ ಹಾಡುಗಳನ್ನು ರಚಿಸಿದ್ದಾರೆ. ಇವರು ನೂರಾರು ಹಾಡುಗಳನ್ನು ರಚಿಸಿದ್ದಾರೆ. ಕೀರ್ತನೆಗಳು ಪ್ರಕಟಗೊಂಡಿದೆ. ಶ್ರೀವೈಷ್ಣವ ಮತದ ತೇಂಗಲೆ ಸಂಪ್ರದಾಯದವರು. ಅಸೂರಿಮಠ ಪರಂಪರೆಗೆ ಸೇರಿದವರು.

ಬೆಳ್ಳಾವೆ ನರಹರಿ ಶಾಸ್ತ್ರೀಗಳು ೧೮೮೨-೧೯೬೧: -

ಇವರು ತಮ್ಮ ಕುಲದೈವವಾದ 'ಸೀಬಿ ನರಸಿಂಹ' ದೇವರ ನಾಮವನ್ನು ತಮ್ಮ ಅಂಕಿತವನ್ನಾಗಿ ಮಾಡಿಕೊಂಡಿದ್ದಾರೆ. 'ನರಸಿಂಹ', 'ನರಹರಿ' ಇವರ ಹಾಡುಗಳಲ್ಲಿ ಬಳಸುವ ಅಂಕಿತ. ಸಂಪ್ರದಾಯದ ಹಾಡುಗಳನ್ನು ಸಂಗೀತಬದ್ಧವಾಗಿ ರಚಿಸಿದ್ದಾರೆ. ಸಾಕಷ್ಟು ಶಾಸ್ತ್ರಗಳ ಹಾಡನ್ನು ರಚಿಸಿದ್ದಾರೆ. 'ಹೃದಯಸಂಪುಟದಲ್ಲಿ ಇವರ ನಲವತ್ತೈದು ಹಾಡುಗಳು ಪ್ರಕಟಗೊಂಡಿದೆ.

ತುರುವೇಕೆರೆ ಬೇಟರಾಯ ದೀಕ್ಷಿತರು:-

ದೇನುಪುರ ಶ್ರೀರಾಮ, ಧೇನು-ನಗರನಾಥ ಇವರ ಹಾಡುಗಲ ಅಂಕಿತವಾಗಿದೆ. ಶ್ರೀ ರಾಮಕಥೆಯನ್ನು ಹಾಡಿನ ರೂಪದಲ್ಲಿ ರಚಿಸಿದ್ದಾರೆ. ಬ್ರಾಹ್ಮಣ ಹೆಂಗಸರು ಶ್ರೀ ರಾಮದೇವರ ಪೂಜಾವೇಳೆಯಲ್ಲಿ ಓದಬೇಕಾಗಿದ್ದ ಕತೆಯನ್ನು ಹಾಡಿಗೆ ತಂದಿದ್ದಾರೆ.

ಅನವಟ್ಟಿ ರಾಮರಾಯರು:-

ಇವರು ಸಂಪ್ರದಾಯದ ಹಾಡುಗಳ ಅನುವಾದಕರಾಗಿದ್ದಾರೆ. ತೆಲುಗಿನಿಂದ ಸಾಕಷ್ಟು ಹಾಡುಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ತೆಲುಗು ಕೀರ್ತನಾಕಾರರಾದ ವಾಗ್ಗೇಯಕಾರ ಮತ್ತು ವೀಣಾಕುಪ್ಪೈಯರ್ ರವರ ಹಾಡುಗಳನ್ನು ಅನುವಾದಿಸಿದ್ದಾರೆ.

ಸಮಾರೋಪ

ಸಂಪ್ರದಾಯವೆಂಬುದು ಮನುಷ್ಯನ ಜೀವನವನ್ನು ರೂಪಿಸುವ ಹಲವು ಸಂಗತಿ. ಕಾರಣಗಳಲ್ಲಿ ಒಂದು. ಇದೊಂದು ಸಾರ್ವಕಾಲಿಕ ಆಚರಣೆ. ಸಂಪ್ರದಾಯವನ್ನು ಕುರಿತು ರಚಿಸಲಾಗಿರುವ ಹಾಡುಗಳನ್ನು 'ಸಂಪ್ರದಾಯ ಹಾಡುಗಳು' ಎಂದು ಕರೆಯಲಾಗುತ್ತದೆ. ವಾಗೀಶ್ವರಿ ಶಾಸ್ತ್ರೀಯವರ ಸಂಪ್ರದಾಯ ಹಾಡುಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ನನ್ನ ಅಧ್ಯಯನವನ್ನು ಪ್ರಾರಂಭಿಸಿ, ಸಂಪ್ರದಾಯದ ಹಾಡುಗಳನ್ನು ಅಧ್ಯಯನಕ್ಕೆ ಒಳಪಡಿಸುವಲ್ಲಿ ಅದರ ಹಿಂದಿನ ಉದ್ದೇಶ, ಅಧ್ಯಯನ ನಡೆಸಿದ ವಿವಿಧ ಹಂತಗಳನ್ನು ಸ್ವರೂಪದಲ್ಲಿ ಅದರ ಚೌಕಟ್ಟನ್ನು ವ್ಯಾಪ್ತಿಯಲ್ಲಿ ಸ್ಪಷ್ಟೀಕರಿಸಿದ್ದೇನೆ.

ವಾಗೇಶ್ವರಿಯವರ ಜೀವನ ಪರಿಚಯವನ್ನು ಅವರ ಬಾಲ್ಯಜೀವನ. ಓದು. ವಿವಾಹದ ಮೂಲಕ ಮಾಡುತ್ತಾ, ಅವರು ಸಂಪ್ರದಾಯದ ಹಾಡುಗಳನ್ನು ಕಲಿತು ಅದನ್ನು ಉಳಿಸುವಲ್ಲಿ ಪಟ್ಟ ಶ್ರಮ. ಆಸಕ್ತಿ ಅನುಸರಿಸಿದ ಮಾರ್ಗವನ್ನು ತಿಳಿಸಿದ್ದೇನೆ. ಅವರ ಬದುಕು ಬರಹ ಸೃಜನಶೀಲ ಪ್ರತಿಭೆ ಸಂಪ್ರದಾಯ ಹಾಡುಗಳ ಗ್ರಂಥವನ್ನು ಪ್ರಕಟಿಸುವಲ್ಲಿ ಹೆಚ್ಚಿನ ಶ್ರಮವಹಿಸಿರುವುದು ತಿಳಿದುಬರುತ್ತದೆ.

ಸಂಪ್ರದಾಯ ಎಂದರೇನು? ಯಾವ ಹಾಡುಗಳನ್ನು ಸಂಪ್ರದಾಯ ಹಾಡುಗಳೆಂದು ಕರೆಯಲಾಗುತ್ತದೆ. ಬ್ರಾಹ್ಮಣ ಸಂಪ್ರದಾಯದಲ್ಲಿ ಬರುವ ವಿವಿಧ ಸಂಪ್ರದಾಯಗಳು. ಅವುಗಳ ಆಚರಣೆ, ಅನುಸರಣೆ. ಹಿಂದಿನ ಉದ್ದೇಶ. ಸಾಮಾಜಿಕವಾಗಿ. ಸಾಂಸ್ಕೃತಿಕವಾಗಿ ಸಂಪ್ರದಾಯ ಹಾಡುಗಳ ಅವಶ್ಯಕತೆ ಹಾಡುಗಳಲ್ಲಿನ ಮನೋವೈಜ್ಞಾನಿಕ ದೃಷ್ಟಿಕೋನವನ್ನು ಚರ್ಚಿಸಿದ್ದೇನೆ. ಪ್ರಸ್ತುತ ಸಂದರ್ಭದಲ್ಲಿ ಸಂಪ್ರದಾಯದ ಆಚರಣೆಯ ಸ್ಥಿತಿಗತಿಯನ್ನು ಹೇಳಲಾಗಿದೆ.

ಕಥನ ಗೀತೆ ಎಂದರೇನು? ಎಂದು ಅರ್ಥೈಸುತ್ತಾ ಕಥನಗೀತೆಗಳಲ್ಲಿ ಇರುವ ಬಗೆಗಳನ್ನು ಪೌರಾಣಿಕ. ಐತಿಹಾಸಿಕ. ಸಾಮಾಜಿಕ. ಎಂದು ವಿಭಾಗಿಸಿಕೊಳ್ಳಲಾಗಿದೆ. ಸಂಪ್ರದಾಯ ಹಾಡುಗಳಲ್ಲಿರುವ ಕಥನಗೀತೆಗಳಿಗೂ ಗ್ರಾಮೀಣ ಪರಿಸರದ ಕಥನಗೀತೆಗೂ ನಡುವೆ ಇರುವ ವ್ಯತ್ಯಾಸವನ್ನು ಹಾಡುಗಳ ರಚನೆಯಲ್ಲಿ ಬಳಸಿರುವ ಭಾಷೆ ಮತ್ತು ಸಾಹಿತ್ಯಿಕ, ಸಾಂಸ್ಕೃತಿಕ ದೃಷ್ಟಿಯಿಂದ ಮೂಲಕಾವ್ಯಕ್ಕೆ ಹೇಗೆ ಭಿನ್ನವಾಗಿದೆ, ಮಹಿಳೆಯರಿಗೂ ಪುರಾಣ. ಐತಿಹಾಸಿಕ ವಿಷಯಗಳನ್ನು ಅವುಗಳ ಹಿಂದಿನ ಸಾಮಾಜಿಕ ಮೌಲ್ಯವನ್ನು ತಿಳಿಸುವಲ್ಲಿ ಕಥನಗೀತೆಗಳ ಅವಶ್ಯಕತೆ ಪ್ರಾಮುಖ್ಯತೆಯನ್ನು ವಿಶ್ಲೇಷಿಸಲಾಗಿದೆ.

ಸಂಪ್ರದಾಯದ ಹಾಡುಗಳ ರಚನಾಕಾರರನ್ನು ಅವರ ಅಂಕಿತಗಳ ಆಧಾರದ ಹಿನ್ನೆಲೆಯಲ್ಲಿ ಸ್ಥೂಲಪರಿಚಯ ಮಾಡಿಕೊಡಲಾಗಿದೆ. ವಾಗೀಶ್ವರಿಯವರ ಹೃದಯಸಂಪುಟವನ್ನು ಕುರಿತು ಇದುವರೆವಿಗೂ ವಿಮರ್ಶಾ ಗ್ರಂಥಗಳಾಗಲಿ. ಸಂಶೋಧನಾ ಬರಹಗಳಾಗಲಿ ರಚನೆಯಾಗಿರುವುದು ತುಂಬ ವಿರಳ. ಈ ಗ್ರಂಥದಲ್ಲಿ ವೈದಿಕ ಬ್ರಾಹ್ಮಣರ ಆಚಾರ-ವಿಚಾರ. ಆಚರಣೆಗಳ ಸಂಪೂರ್ಣ ಚಿತ್ರಣ ಸಿಗುತ್ತದೆ. ಮಡಿ-ಮೈಲಿಗೆಯ ಭಾವದಿಂದ ಇತರರಿಗೆ ತಲುಪುವಲ್ಲಿ ತಡೆಯಾಗಿದ್ದಂತಹ ಜನಾಂಗವೊಂದರ ಸಾಹಿತ್ಯ ಸಂಸ್ಕೃತಿಯನ್ನು ಸಾಹಿತ್ಯ ಪ್ರಿಯರಿಗೆ ತೆರೆದಿಟ್ಟ ಕೀರ್ತಿ ವಾಗೀಶ್ವರಿಯವರಿಗೆ ಸಲ್ಲುತ್ತದೆ. ಅವರಿಗೆ ಸಂಪ್ರದಾಯ ಹಾಡುಗಳ ಹಾಡುವಿಕೆ ಒಂದು ಸಂಪ್ರದಾಯವಾಗಿದ್ದರೂ. ಇದು ಒಂದು ಸಾಹಿತ್ಯ ಬೆಳೆದುಬರಲು ಕಾರಣವಾಗಿದೆ. ಸಂಪ್ರದಾಯದ ನೆಪದಲ್ಲಿ ಪುರಾಣೇತಿಹಾಸಗಳ ಉಳಿಸುವಿಕೆ, ಬದುಕಿನ ಆದರ್ಶಗಳನ್ನು ಕಂಡುಕೊಳ್ಳುವಲ್ಲಿ ಸಹಾಯಕಾರಿಯಾಗಿದೆ.

ಒಟ್ಟಾರೆಯಾಗಿ ಈ ಸಂಪ್ರದಾಯದ ಹಾಡುಗಳು ಯಾವುದೋ ಒಂದು ಜನಾಂಗದ ಸಂಪ್ರದಾಯವನ್ನು ಕುರಿತ ಹಾಡುಗಳಾಗಿ ಕಂಡುಬಂದರೂ ಸೂಕ್ಷ್ಮವಾಗಿ ಗಮನಿಸಿದರೆ ಅವುಗಳಲ್ಲಿ ಸಾಮಾಜಿಕ, ವೈಜ್ಞಾನಿಕ, ಮನಶಾಸ್ತ್ರೀಯ ಅಂಶಗಳು ಕಾಣಸಿಗುತ್ತವೆ.

ಪರಾಮರ್ಶನ ಗ್ರಂಥಗಳು

೧. ವಾಗೀಶ್ವರಿ ಶಾಸ್ತ್ರೀ	ಹೃದಯಸಂಪುಟ, ೩ನೇ ಮುದ್ರಣ ೨೦೦೮
೨. ಡಾ.ಜ್ಯೋತ್ಸ್ನಾ ಕಾಮತ್	ನೆನಪಿನಲ್ಲಿ ನಿಂತವರು ೨೦೦೦
೩. ಕೆ.ಎಂ.ವಿಜಯಲಕ್ಷ್ಮೀ	ಹೊಸಗನ್ನಡ ೭೫ ಲೇಖಕಿಯರು ೨೦೦೮
೪. ಪ್ರೊ.ಟಿ.ಕೇಶವಭಟ್ಟ	ಹವ್ಯಕ ಶೋಭಾನೆಗಳು
೫. ಮತಿಗಟ್ಟ ಕೃಷ್ಣಮೂರ್ತಿ	ಗೃಹಿಣಿ ಗೀತೆಗಳು
೬. ಕೆ.ಶಿವರಾಮ ಐತಾಳ	ದಕ್ಷಿಣ ಕನ್ನಡ ಜನಪದ ಸಾಹಿತ್ಯ ೧೯೭೧
೭. ಟಿ.ಕೇಶವಭಟ್ಟ	ಹಾಡಿನ ಚೂಡಾಮಣಿ (ಜನಪದ ಗೀತೆಗಳು) ೧೯೭೧
೮. ಜೀ.ಶಂ. ಪರಮಶಿವಯ್ಯ	ಕರ್ನಾಟಕ ಜಾನಪದ ಸಮೀಕ್ಷೆ ೧೯೮೨
೯. ಡಾ. ನಂ. ತಪಸ್ವೀಕುಮಾರ್	ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ ೧೯೮೨
೧೦. ಚೆನ್ನಬಸವನಾವಲಗಿ	(ಸಂ)ಶಕುಂತಲ ಚೆನ್ನಬಸವ ಜನಪದ ಕಥನಗೀತೆ ೨೦೦೨
೧೧. ಪ್ರೊ.ಡಿ.ಲಿಂಗಯ್ಯ ಡಾ.ಕೆ.ಆರ್. ಸಂಧ್ಯಾರೆಡ್ಡಿ	ಜಾನಪದ ಸ್ವರೂಪ ಮತ್ತು ಸಾಹಿತ್ಯ ೨೦೦೬
೧೨. ಭಾಗ್ಯ ಜಯ ಸುದರ್ಶನ	ವಾಗೀಶ್ವರಿಶಾಸ್ತ್ರಿ ಅನನ್ಯ ಚೇತನ ಮಾಲಿಕೆ. ೨೦೦೭
೧೩. ಡಿ.ಎಚ್.ವಿಜಯಲಕ್ಷ್ಮಿ ಶ್ರೀನಿವಾಸವಯ್ಯ	ದಕ್ಷಿಣ ಕರ್ನಾಟಕದ ವಿವಾಹ ಶಾಸ್ತ್ರಗಳು ೨೦೦೭